ನವೆಂಬರ್ 2017 ₹ 15/-

# ಯುಗರಶ್ಮಿ

ತ್ರೈಮಾಸಿಕ



- ಶಾಂತಿಯ ಸೇತುವೆಗಳ ನಿರ್ಮಾಣ
- ಮಾನವೀಯ ಮೌಲ್ಯಗಳ ಸಂರಕ್ಷಣೆ – ಶಾಂತಮಯ ಲೋಕದ ಅಸ್ತಿಭಾರ
- ದೇಶಭಕ್ತಿ ಮತ್ತು ದೇಶಪ್ರೇಮದ ಬಗ್ಗೆ ಇಸ್ಲಾಮ್ ಧರ್ಮದ ಉಪದೇಶಗಳು
- ಇಸ್ಲಾಮಿನ ಸಂದೇಶ
- ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು
- ಖುರ್‌ಆನಿನ ಜಿನ್ನ್

"ನಿನ್ನ ಪ್ರಭು ಇಚ್ಛಿಸಿದ್ದರೆ, ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದುತ್ತಿದ್ದರು. (ಆದರೆ ಅವನು ನಿರ್ಬಂಧಪಡಿಸುವುದಿಲ್ಲ.) ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಯೋ?"
(ಪವಿತ್ರಖುರ್‌ಆನ್ 10:100)

# ಯುಗರಶ್ಮಿ

**ವಿಷಯ ಸೂಚಿಕೆ** — **ಪುಟ**


- ಯಅ್‌ಜೂಜ್ ಮಅ್‌ಜೂಜ್ ಮತ್ತುದಜ್ಜಾಲ್ — 1
- ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು — 2
- ಶಾಂತಿಯ ಸೇತುವೆಗಳ ನಿರ್ಮಾಣ — 3
- ಮಾನವೀಯ ಮೌಲ್ಯಗಳ ಸಂರಕ್ಷಣೆ – ಶಾಂತಮಯ ಲೋಕದ ಅಸ್ತಿಭಾರ — 9
- ದೇಶಭಕ್ತಿ ಮತ್ತು ದೇಶಪ್ರೇಮದ ಬಗ್ಗೆ ಇಸ್ಲಾಮ್ ಧರ್ಮದ ಉಪದೇಶಗಳು — 15
- ಇಸ್ಲಾಮಿನ ಸಂದೇಶ — 18
- ಮರುವಸಂತ — 22
- ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು — 23
- ಖುರ್‌ಆನಿನ ಜಿನ್ನ್ — 27
- ಪವಿತ್ರ ಖುರ್‌ಆನ್ — 31
- ವಾರ್ತೆಗಳು — 32
- ನಿಧನ ವಾರ್ತೆಗಳು — 36
- ಸಂಪಾದಕರಿಗೆ ಪತ್ರ — 36
- ಓದಿದ್ದು — 37


ಮುಖಪುಟ ಚಿತ್ರ : ಸ್ಪೈನಿನಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ದ್ವಿತೀಯ ಮಸೀದಿ –ಬೈತುರ್ರಹ್ಮಾನ್



ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–

ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.




ಯು.ಕೆ. ಜಲ್ಸಾ ಸಾಲಾನ
(ವಾರ್ಷಿಕ ಸಮ್ಮೇಳನ)–2017

ಮಂಗಳೂರಿನ
ರಾಷ್ಟ್ರೀಯ ಗ್ರಾಹಕ ಮೇಳದಲ್ಲಿ
ಅಹ್ಮದಿಯಾ ಮುಸ್ಲಿಂ ಪುಸ್ತಕ ಮಳಿಗೆ









ಬೆಂಗಳೂರಿನಲ್ಲಿ ಜರಗಿದ
ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ,
ಅತ್ಫಾಲುಲ್ಅಹ್ಮದಿಯಾ ಜಿಲ್ಲಾ ಘಟಕ ಇಜ್ತಿಮಾ

ಕಣ್ಣೂರ್ ಜಿಲ್ಲೆಯ ಕಡಲಾಯಿಯಲ್ಲಿ ಮಜ್ಲಿಸ್
ಅನ್ಸಾರುಲಾಹ್ ಮತ್ತು ಮಂಗಳೂರಿನ
ಒಮೆಗಾ ಆಸ್ಪತ್ರೆಯ ಸಹಯೋಗದಿಂದ
ನಡೆದ ಮೆಡಿಕಲ್ ಕ್ಯಾಂಪ್



Registered with the Registrar of Newspapers for India No. R.N. 27354/75
**Yugarashmi** Kannada Quarterly, **November - 2017.** Price : **Rs. 15/-**


# Ahmadiyya Muslim Community

*Apps for mobile devises*

Download free apps developed by Ahmadiyya Muslim Community for your iphone,ipode, and Android

**Quran**
Read the Holy Quran in easy Yassarnal Quran Font

**Conditions of Bai'at**
A pocket reference of Shara't-e-Bai'at in 7 languages

**Sermons**
Huzoor's Friday Sermons In 15 languages

**MTA**
Watch MTA Live, view Schedule and much more

**Ahmadiyya News**
Stay up to date with the Latest jama'at news



View these apps at
alislam.org/apps
or scan the QR code below


Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ನವೆಂಬರ್ ೨೦೧೭

ಸಂಪಾದಕ : ಮುಹಮ್ಮದ್ ಯೂಸುಫ್

ಆರಂಭ : 1975 | ಸಂಪುಟ : 34 | ನುಬುವ್ವತ್ : 1439 ಹಿಜರೀ ಶಮ್ಸೀ | ಸಂಚಿಕೆ : 2-3

## ಯಅ್‌ಜೂಜ್ ಮಅ್‌ಜೂಜ್ ಮತ್ತು ದಜ್ಜಾಲ್

ವಾಗ್ದತ್ತ ಮಸೀಹರ ಕಾಲದಲ್ಲಿ ಪ್ರಕಟವಾಗಲು ವಿಧಿಸಲ್ಪಟ್ಟಿರುವ ಆ ವಿಪತ್ತುಗಳಲ್ಲಿ ಅತಿ ದೊಡ್ಡದು ಯಅ್‌ಜೂಜ್ ಮಅ್‌ಜೂಜ್ ಮತ್ತು ಶಪಿಸಲ್ಪಟ್ಟ ದಜ್ಜಾಲಿನ ಹೊರಡುವಿಕೆಯಾಗಿದೆ. ಅವರು ಮುಸ್ಲಿಮರಿಗೋಸ್ಕರ, ಪ್ರಿಯಕರನಾದ ದೇವನಿಂದಿರುವ ಅಗಲಿಕೆ ಮತ್ತು ಅವಿಧೇಯತೆಯ ಕಾಲದಲ್ಲಿ ಪ್ರತ್ಯಕ್ಷಗೊಳ್ಳುವರು ಮತ್ತು ಮುಸ್ಲಿಮರಿಗೆ ಸಂಬಂಧಿಸಿ ಕಠಿಣ ಕಷ್ಟಾನುಭವಗಳಿಗೆ ಕಾರಣೀಭೂತರಾಗುವರು. ಹೇಗೆ ಯಹೂದಿಯರಿಗೆ ಐತಿಹಾಸಿಕ ಕಷ್ಟಾನುಭವಗಳು ಬಂದೆರಗಿದ್ದವೋ ಹಾಗೆಯೇ ಮುಸ್ಲಿಮರಲ್ಲೂ (ವಾಗ್ದತ್ತ ಮಸೀಹ್ ಮತ್ತು ಜಮಾಅತನ್ನು ಕಠಿಣವಾದ ದುಃಖಕ್ಕೀಡುಮಾಡಿದ ನಿಮಿತ್ತ) ಕಠಿಣ ಕಷ್ಟಾನುಭವಗಳು ಎರಗುವುವು.

ಯಅ್‌ಜೂಜ್ ಮಅ್‌ಜೂಜ್ ತಮ್ಮ ಯುದ್ಧಗಳಲ್ಲೂ ಸಂಶೋಧನೆಗಳಲ್ಲೂ ಅಗ್ನಿ ಪ್ರಯೋಗಿಸುತ್ತಾರೆ. ಅಥವಾ ಅವರು ಬೆಂಕಿ ಪ್ರಯೋಗಿಸುವ ಎರಡು ಜನತೆಗಳೆಂದು ಅರಿತುಕೊಳ್ಳಿರಿ. ಈ ಎರಡು ಶಕ್ತಿಗಳೂ ಬೆಂಕಿ ಪ್ರಯೋಗಿಸುವುದರಿಂದ ಅವರಿಗೆ ಯಅ್‌ಜೂಜ್ ಎಂಬ ಹೆಸರು ಬಂತು. ಜ್ವಾಲೆಗಳನ್ನು ಎತ್ತರಿಸುವುದು ಅಗ್ನಿಯ ಗುಣವಷ್ಟೆ. ಅವರ ಯುದ್ಧಗಳಲ್ಲಿ ಅಗ್ನಿಯ ಮೂಲ ಘಟಕಗಳು ಉಪಯೋಗಿಸಲ್ಪಡುವುದರಿಂದ ಅವರು ಲೋಕದಲ್ಲಿರುವ ಎಲ್ಲ ಜನತೆಗಳನ್ನು ಮೀರುವವರು ಮತ್ತು ಅವರನ್ನು ಯಾವ ಪರ್ವತಕ್ಕಾಗಲೀ ಸಮುದ್ರಕ್ಕಾಗಲೀ ತಡೆಯಲಾಗದು. ರಾಜರು (ದೇಶದ ನಾಯಕರು) ಅವರ ಮುಂದೆ ಭಯ ನಿಮಿತ್ತ ಅನುಸರಣೆಗೆ ನಿರ್ಬಂಧಿತರಾಗುವರು. ಯಾರೂ ಅವರನ್ನು ಎದುರಿಸಲು ಶಕ್ತರಾಗಲಾರರು. ಅವರು ಒಂದು ನಿಶ್ಚಿತ ಕಾಲದವರೆಗೆ ಸಕಲರನ್ನೂ ತಮ್ಮ ಪಾದದಡಿ ಅದುಮಿಡುವರು. ಈ ಎರಡು ಕಲ್ಲುಗಳ ಮಧ್ಯದಲ್ಲಿ ಸಿಲುಕುವ ಯಾರೇ ಆದರೂ ಎಷ್ಟು ದೊಡ್ಡ ದೇಶದ ಅಧಿಕಾರ ಅವರಿಗಿದ್ದರೂ ಧಾನ್ಯ ಹುಡಿಯ ಹಾಗೆ ಧೂಳೀಕರಿಸಲ್ಪಡುವರು ಮತ್ತು ಆ ಎರಡು ಬೃಹತ್ ಶಕ್ತಿಗಳ ಕಾರಣ ಭೂಮಿಯಲ್ಲಿ ದೊಡ್ಡದಾದ ಪ್ರಕಂಪನಗಳು ಅನುಭವಿಸಲ್ಪಡುವುವು.

(ಖುತ್‌ಬ ಇಲ್ಹಾಮಿಯ್ಯ)

**– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತ್ ಸ್ಥಾಪಕರು


✵✵✵✵✵

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ನಾನು ಮತ್ತು ಅನಾಥ ಸಂರಕ್ಷಕನು ಸ್ವರ್ಗದಲ್ಲಿ ಈ ರೀತಿ ಇರುವೆವು. (ಪೈಗಂಬರರು ಮಧ್ಯದ ಬೆರಳು ಮತ್ತು ತೋರುಬೆರಳನ್ನು ಸ್ವಲ್ಪ ಬಿಡಿಸಿ ತೋರಿಸಿದರು). (ಮುಸ್ಲಿಂ)
- ಆವಶ್ಯವುಳ್ಳವನನ್ನು ಆಮಂತ್ರಿಸದೆ ಆವಶ್ಯವಿಲ್ಲದವನನ್ನು ಆಮಂತ್ರಿಸುವ ಸತ್ಕಾರ ಅತ್ಯಂತ ಕೀಳ್ಮಟ್ಟದ್ದಾಗಿದೆ. ಆಮಂತ್ರಣವನ್ನು ತಿರಸ್ಕರಿಸುವವನು ಅಲ್ಲಾಹು ಮತ್ತು ಪೈಗಂಬರರೊಡನೆ ಅನಾದರ ತೋರಿಸುವವನಾಗಿದ್ದಾನೆ. (ಆಮಂತ್ರಣ ಅನರ್ಹವಾಗಿದ್ದರೆ ತಿರಸ್ಕರಿಸಬಹುದು.) (ಮುಸ್ಲಿಂ)
- ನನಗೋಸ್ಕರ ನೀವು ಅಬಲರನ್ನು ಹುಡುಕಿರಿ. (ನಾನು ಅವರ ಹೆಸರಿನಲ್ಲಿ ಅಲ್ಲಾಹನೊಡನೆ ಸಹಾಯವನ್ನು ಕೋರುತ್ತೇನೆ.) ನಿಮಗೆ ಸಹಾಯ ಲಭಿಸುವುದು ಮತ್ತು ಆಹಾರ ಸಿಗುವುದು ಬಲಹೀನರ ಹೆಸರಿನಲ್ಲಾಗಿದೆ. (ಅಬೂ ದಾವೂದ್)
- ಐಹಿಕ ವಿಭವಗಳಲ್ಲಿ ಉತ್ತಮವಾದುದು ಸತ್ಯಸಂಧೆಯಾದ ಪತ್ನಿ. (ಮುಸ್ಲಿಂ)
- ಜನರಲ್ಲಿ ಯಾರಿಗಾದರೂ ಸುಜೂದ್ (ಸಾಷ್ಟಾಂಗ ಪ್ರಮಾಣ) ಮಾಡಲು ನಾನು ಆಜ್ಞಾಪಿಸುತ್ತಿದ್ದರೆ ಪತಿಗೆ ಸುಜೂದ್ ಮಾಡಲು ಆಜ್ಞಾಪಿಸುತ್ತಿದ್ದೆ. (ಮುಸ್ಲಿಂ)
- ಪತಿ ಸಂಪ್ರೀತನಾಗಿರುವ ಸ್ಥಿತಿಯಲ್ಲಿ ಮೃತ ಪಡುವ ಸ್ತ್ರೀ ಸ್ವರ್ಗದಲ್ಲಿ ಪ್ರವೇಶಿಸುವಳು. (ತಿರ್ಮಿಧೀ)
- ಸ್ತ್ರೀಯರಿಗಿಂತ ಉಪದ್ರಕರವಾದ ಒಂದು ಕೆಡುಕು ನನ್ನ ಕಾಲ ನಂತರ ಪುರುಷರಿಗೆ ಬರಲಿಕ್ಕಿಲ್ಲ. (ಬುಖಾರಿ, ಮುಸ್ಲಿಂ)

  (ಎಷ್ಟು ದೊಡ್ಡ ಮನೋಧೈರ್ಯ ಮತ್ತು ದೃಢತೆ ಇದ್ದರೂ ಅವರನ್ನು ದಾರಿ ತಪ್ಪಿಸಲು ಸ್ತ್ರೀಯರಿಗೆ ಸ್ವಲ್ಪ ಸಮಯವೇ ಸಾಕು.)
- ಸತ್ಯವಿಶ್ವಾಸಿ ಸತ್ಯವಿಶ್ವಾಸಿನಿಯೊಡನೆ ಕೋಪಿಸಬಾರದು. ಆಕೆಯ ಒಂದು ಸ್ವಭಾವವನ್ನು ಆತನು ದ್ವೇಷಿಸಿದರೂ ಬೇರೆ ಹಲವನ್ನು ಆತನು ಇಷ್ಟಪಡಬಹುದು. (ಮುಸ್ಲಿಂ)
- ಸತ್ಯವಿಶ್ವಾಸಿಗಳಲ್ಲಿ ಪರಿಪೂರ್ಣನು ಉತ್ತಮ ಸ್ವಭಾವಿಯಾಗಿದ್ದಾನೆ. ನಿಮ್ಮ ಪೈಕಿ ಅತ್ಯುತ್ತಮನು ಪತಿಯೊಂದಿಗೆ ಉತ್ತಮವಾಗಿ ವರ್ತಿಸುವವನು. (ತಿರ್ಮಿಧೀ)
- ಒಂದು ದೀನಾರ್ ಅಲ್ಲಾಹನ ಮಾರ್ಗದಲ್ಲಿ ನೀನು ಖರ್ಚು ಮಾಡುವಿ. ಒಂದು ದೀನಾರ್ ಗುಲಾಮ ವಿಮೋಚನೆಗೆ ಖರ್ಚು ಮಾಡುವಿ. ಒಂದು ದೀನಾರ್ ದರಿದ್ರನಿಗೆ ದಾನವಾಗಿ ಖರ್ಚು ಮಾಡುವಿ. ಒಂದು ದೀನಾರ್ ನಿನ್ನ ಕುಟುಂಬಕ್ಕೆ ಖರ್ಚು ಮಾಡುವಿ. ಆದರೆ ಅವುಗಳಲ್ಲಿ ಹೆಚ್ಚು ಪ್ರತಿಫಲವುಳ್ಳದ್ದು ಸ್ವಂತ ಕುಟುಂಬಕ್ಕೋಸ್ಕರ ಖರ್ಚು ಮಾಡಿದ್ದಾಗಿದೆ. (ಮುಸ್ಲಿಂ)
- ತನ್ನ ಅಧೀನದಲ್ಲಿರುವವರಿಗೆ ಆಹಾರ ನೀಡದಿರುವುದು ದೊಡ್ಡ ಪಾಪವಾಗಿದೆ. (ಮುಸ್ಲಿಂ)
- ಎಲ್ಲ ಪ್ರಭಾತದಲ್ಲೂ ಇಬ್ಬರು ದೇವದೂತರು ಇಳಿದು ಬರುವರು. ಓರ್ವ ದೇವದೂತನ ಪ್ರಾರ್ಥನೆ: ಅಲ್ಲಾಹನೇ ಧರ್ಮಿಷ್ಠನಿಗೆ ನೀನು ಪ್ರತಿಫಲ ನೀಡು. ಮತ್ತೋರ್ವ ದೇವದೂತನ ಪ್ರಾರ್ಥನೆ: ಅಲ್ಲಾಹನೇ ಲೋಭಿಗೆ ನೀನು ನಾಶವನ್ನುಂಟುಮಾಡು – ಎಂದಾಗಿರುವುದು. (ಬುಖಾರಿ, ಮುಸ್ಲಿಂ)

# ಶಾಂತಿಯ ಸೇತುವೆಗಳ ನಿರ್ಮಾಣ




**2016 ಸೆಪ್ಟಂಬರ್ ದಿನಾಂಕ 3ರಂದು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಜರ್ಮನಿಯ 41ನೇ ವಾರ್ಷಿಕ ಸಮ್ಮೇಳನದ ದ್ವಿತೀಯ ದಿನ ವಾರ್ಷಿಕ ಸಮ್ಮೇಳನಕ್ಕೆ ಆಗಮಿಸಿದ ಅತಿಥಿಗಳನ್ನು ಸಂಬೋಧಿಸಿ ಮಾಡಿದ ಭಾಷಣ.**

ಸಾಂಪ್ರದಾಯಿಕ ಪ್ರಾರ್ಥನೆಗಳ ನಂತರ ಹಝ್ರತ್ ಖಲೀಫರು ಹೀಗೆಂದರು: ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲೆ ಇರಲಿ.

ಅಲ್ಲಾಹನ ಅನುಗ್ರಹದಿಂದ ಜರ್ಮನಿಯ ಅಹ್ಮದಿಯಾ ಮುಸ್ಲಿಮ್ ಜಮಾಅತ್ ತನ್ನ ವಾರ್ಷಿಕ ಸಮ್ಮೇಳನವನ್ನು ಕಾರ್ಲ್ಸ್‌ರುಹೆಯಲ್ಲಿ ಜರಗಿಸುತ್ತಿದೆ. ಈ ಸಮ್ಮೇಳನದ ಮೂರು ದಿನಗಳು ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಬಹಳ ಮಹತ್ವಪೂರ್ಣವಾಗಿವೆ. ಈ ಸಮ್ಮೇಳನದಲ್ಲಿ ತಮ್ಮ ಆಧ್ಯಾತ್ಮಿಕತೆಯನ್ನು ಮತ್ತು ತಮ್ಮ ಧಾರ್ಮಿಕ ಜ್ಞಾನವನ್ನು ವರ್ಧಿಸಲು ಅಹ್ಮದಿಯರು ಭಾಗವಹಿಸುತ್ತಿದ್ದಾರೆ.

ನಾವು ಈ ದಿನ ಇಲ್ಲಿ ಜಮಾಯಿಸಿರುವಾಗ ನಿರಾಕರಿಸಲಾಗದ ಒಂದು ವಾಸ್ತವಿಕಾಂಶವೇನೆಂದರೆ, ಲೋಕದ ಶಾಂತಿ ಒಂದು ಕತ್ತಿಯ ಅಂಚಿನಲ್ಲಿ ಅಸ್ಥಿರವಾಗಿ ತೂಗಾಡುತ್ತಿದೆ. ಪ್ರತಿದಿನ ಕಳೆದಂತೆ ಜಗತ್ತಿನಲ್ಲಿ ಅಸ್ಥಿರತೆ ವರ್ಧಿಸುವುದನ್ನು ಕಾಣುತ್ತೇವೆ. ಇದೊಂದು ವಿಚಿತ್ರ ಮತ್ತು ದಾರುಣ ವಿರೋಧಭಾಸವಾಗಿದೆ. ನಾವು ಹಿಂದೆಂದಿಗಿಂತಲೂ ಹೆಚ್ಚು ನಿಕಟವಾಗಿ ಸಂಬಂಧ ಸ್ಥಾಪಿಸಿದ್ದರೂ ನಾವು ದಿನಗಳೆದಂತೆ ಹೆಚ್ಚು ದೂರಕ್ಕೆ ಸರಿಯುತ್ತಿದ್ದೇವೆ. ಕಳೆದ ವರ್ಷ ಸಿರಿಯಾ ಮತ್ತು ಇರಾಖ್‌ನಿಂದ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ನಿರಾಶ್ರಿತರು ನುಗ್ಗಿ ಬಂದುದರಿಂದ ಮತ್ತು ಇತ್ತೀಚೆಗೆ ಸಂಭವಿಸಿದ ಭಯೋತ್ಪಾದಕ ಆಕ್ರಮಣಗಳ ಕಾರಣದಿಂದ ಯುರೋಪಿನ ಸ್ಥಿರತೆಗೆ ಗಣನೀಯವಾಗಿ ಕುಂದುಂಟಾಗಿದೆ.

ಮುಸ್ಲಿಮ್ ನಾಮಧಾರಿ ಭಯೋತ್ಪಾದಕ ಗುಂಪುಗಳು ಮತ್ತು ಕೆಲವು ಉಗ್ರಗಾಮಿ ವ್ಯಕ್ತಿಗಳು ಮಾಡಿದ ಕೆಟ್ಟ ಕೆಲಸಗಳು ಸಮಾಜಕ್ಕೆ ಹಿಂದೆಂದೂ ಸಂಭವಿಸದಂತಹ ಹಾನಿಯನ್ನು ನಿಸ್ಸಂಶಯವಾಗಿ ಉಂಟುಮಾಡಿದೆ ಮತ್ತು ಜನಸಾಮಾನ್ಯರ ಮನಸ್ಸಿನಲ್ಲಿ ಇಸ್ಲಾಮ್ ಬಗ್ಗೆ ಭಯ ವರ್ಧಿಸುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಸಾವಿರಗಟ್ಟಲೆ ಅಹ್ಮದೀ ಮುಸ್ಲಿಮರು ತಮ್ಮ ವಾರ್ಷಿಕ ಸಮ್ಮೇಳನಕ್ಕೆ ವಾರಾಂತ್ಯದಲ್ಲಿ ಜಮಾಯಿಸಿರುವುದು ಕೆಲವು ಜನರಲ್ಲಿ ಭಯವುಂಟು ಮಾಡಿರಬಹುದೆಂದು ನಾನು

ನಂಬುತ್ತೇನೆ. ಇಂತಹ ಸಮ್ಮೇಳನಗಳು ಅನೇಕ ವರ್ಷಗಳಿಂದ ಜರಗಿಸಲ್ಪಡುತ್ತಿದ್ದರೂ ಜನ ಸಾಮಾನ್ಯರು ಇದರ ಬಗ್ಗೆ ಲಕ್ಷ್ಯ ನೀಡಿರಲಿಲ್ಲ. ಆದರೆ ಈಗ, ಇಂದಿನ ಪರಿಸ್ಥಿತಿಯಲ್ಲಿ ಈ ಸಮಾರಂಭದ ಬಗ್ಗೆ ತಿಳುವಳಿಕೆ ವರ್ಧಿಸಿರಬಹುದು ಮತ್ತು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮರು ಜಮಾಯಿಸಿದ ಕಾರಣ ಕೆಲವರು ಸಂಶಯಗ್ರಸ್ತರಾಗಿರಬಹುದು ಅಥವಾ ಭಯಭೀತರಾಗಿರಬಹುದು.

ನಿಶ್ಚಯವಾಗಿ ನನ್ನ ಮುಂದೆ ಕುಳಿತಿರುವವರಲ್ಲಿ ಕೆಲವರು ಸಂಕೋಚ ಮತ್ತು ಸಂದೇಹ ಪೀಡಿತರಾಗಿರಬಹುದು. ಇಂತಹ ಭಯವಿದ್ದರೂ ನೀವು ಹಾಜರಾಗಿರುವುದು ಅತ್ಯಂತ ಗಮನಾರ್ಹವಾಗಿದೆ. ಅದು ನಿಮ್ಮ ಉತ್ತಮ ಪ್ರಕೃತಿಗೆ ಸಾಕ್ಷ್ಯವಾಗಿದೆ. ಸಾಮಾಜಿಕ ಜಾಲತಾಣಗಳು ಚಿತ್ರಿಸುವ ಸುಳ್ಳು ಪ್ರಚಾರಗಳು ಮುಸ್ಲಿಮರೆಲ್ಲರೂ ಭಯೋತ್ಪಾದಕರೂ ಉಗ್ರಗಾಮಿಗಳೂ ಎಂಬ ನಂಬಿಕೆಯನ್ನು ಹುಟ್ಟಿಸಿರುವ ಈ ಕಾಲದಲ್ಲಿ ಒಂದು ಇಸ್ಲಾಮೀ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾದರಿಯಾದ ಧೈರ್ಯವನ್ನು ನೀವು ಪ್ರಕಟಿಸಿರುವಿರಿ. ನೀವು ಇಲ್ಲಿಗೆ ಬಂದಿರುವುದರಿಂದ ಸಾಬೀತಾಗುವುದೇನೆಂದರೆ ತಪ್ಪು ಮಾಹಿತಿಗಳ ಪ್ರಚಾರ ನಡೆದಿದ್ದರೂ ನೀವು ಅಹ್ಮದೀ ಮುಸ್ಲಿಮರ ಬಗ್ಗೆ ಸಹಾನುಭೂತಿಯಿಂದ ಕೂಡಿದ ಅಭಿಪ್ರಾಯ ಹೊಂದಿರುವಿರಿ.

ನೀವು ಪ್ರಕಟಿಸಿದ ಸದ್ಭಾವನೆ ಮತ್ತು ಸ್ನೇಹಕ್ಕೆ ನಾನು ನಿಮಗೆ ಅತ್ಯಂತ ಕೃತಜ್ಞನಾಗಿದ್ದೇನೆ. ನಿಮ್ಮಲ್ಲಿ ಕೆಲವರು ಇಸ್ಲಾಮಿನ ಬಗ್ಗೆ ಭಯ ಹೊಂದಿದ್ದರೂ ಕುತೂಹಲದಿಂದ ಇಲ್ಲಿಗೆ ಆಗಮಿಸಿರಬಹುದು. ನಾನು ಅಂತಹ ಜನರಿಗೆ ಕೃತಜ್ಞತೆ ಅರ್ಪಿಸುತ್ತೇನೆ ಮತ್ತು ಇಸ್ಲಾಮ್ ಬಗ್ಗೆ ಮತ್ತು ಈ ಸಮಾರಂಭದ ಬಗ್ಗೆ ತಿಳಿದುಕೊಳ್ಳಲು ಅವರಿಗೆ ಆಸಕ್ತಿಯಿರುವ ಕುರಿತು ಮೆಚ್ಚಿಗೆ ಸೂಚಿಸುತ್ತೇನೆ. ಆದರೆ ನಾನು ನನ್ನ ಭಾಷಣ ಮುಂದುವರಿಸುವ ಮೊದಲು ನಮ್ಮ ಎಲ್ಲ ಅತಿಥಿಗಳಿಗೆ ಖಾತರಿ ನೀಡಲು ಬಯಸುತ್ತೇನೆ- ಪಾಶ್ಚಿಮಾತ್ಯ ಮಾಧ್ಯಮಗಳು ಸಾಮಾನ್ಯವಾಗಿ ಇಸ್ಲಾಮಿನ ಬಗ್ಗೆ ನೀಡುವ ಚಿತ್ರಣವು ಯಾವುದೇ ರೀತಿಯಲ್ಲಿ ಇಸ್ಲಾಮಿನ ನೈಜ ಉಪದೇಶಗಳ ನಿಖರವಾದ ಪ್ರತಿಬಿಂಬವಲ್ಲ.

ಇಸ್ಲಾಮ್ ಉಗ್ರಗಾಮಿ ತತ್ವಗಳನ್ನು ಮತ್ತು ಹಿಂಸಾಚಾರವನ್ನು ಪ್ರೋತ್ಸಾಹಿಸುವ ಧರ್ಮವಲ್ಲ. ಅದು ಸಮಾಜದ ಎಲ್ಲ ಹಂತಗಳಲ್ಲೂ ಶಾಂತಿ, ಸಹಿಷ್ಣುತೆ ಮತ್ತು ನ್ಯಾಯವನ್ನು ಪ್ರತಿಪಾದಿಸುವ ಧರ್ಮವಾಗಿದೆ. ಕೆಲವು ಮುಸ್ಲಿಮ್ ಗುಂಪುಗಳು ಮತ್ತು ವ್ಯಕ್ತಿಗಳು ಅತ್ಯಂತ ಪಾಶವೀಕೃತ್ಯಗಳನ್ನು ತಮಗೆ ಸಾಧ್ಯವಿರುವಷ್ಟು ಮಟ್ಟಿಗೆ ಮಾಡುತ್ತಾ ಇವೆ ಎನ್ನುವುದು ನಿರ್ವಿವಾದ ಸತ್ಯವಾಗಿದೆ. ಅವರು ಇಸ್ಲಾಮಿಗೆ ಸೇವೆ ಸಲ್ಲಿಸುವುದಕ್ಕೆ ಬದಲಾಗಿ ಇಸ್ಲಾಮಿನ ನೈಜ ತತ್ವಗಳನ್ನು ಉಲ್ಲಂಘಿಸಿ ಇಸ್ಲಾಮಿಗೆ ಅಪಕೀರ್ತಿ ಉಂಟು ಮಾಡುತ್ತಿದ್ದಾರೆ. ತೀವ್ರವಾದಿಗಳಿಗೆ ಸಂಪೂರ್ಣ ವಿರುದ್ಧವಾಗಿ, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸಂಪೂರ್ಣವಾಗಿ ಶಾಂತಿಪ್ರಿಯ ಸಂಘಟನೆಯಾಗಿದ್ದು ಅದು ಸಹಿಷ್ಣುತೆ, ಸೌಹಾರ್ದ ಮತ್ತು ಸ್ವಾತಂತ್ರ್ಯವನ್ನು ಲೋಕದಾದ್ಯಂತ ಹರಡಲು ಪ್ರಯತ್ನಿಸುತ್ತಿದೆ. ಆದರೆ ನಾವು ಇಸ್ಲಾಮ್ ಧರ್ಮಕ್ಕೆ ಒಂದು ಹೊಸ ವ್ಯಾಖ್ಯಾನ ನೀಡುತ್ತಿದ್ದೇವೆ ಎಂದಾಗಲಿ, ಇಸ್ಲಾಮ್ ಧರ್ಮ ತತ್ವಗಳನ್ನು ಯಾವುದಾದರೂ ರೀತಿ ಪರಿಷ್ಕರಿಸಿದ್ದೇವೆ ಎಂದಾಗಲಿ ಯೋಚಿಸಬೇಡಿರಿ. ನಾವು ಶಾಂತಿ ಪ್ರಿಯರಾಗಿರುವುದಕ್ಕೆ ಏಕಮಾತ್ರ ಕಾರಣ, ನಾವು ಮಾನವರನ್ನು ಪ್ರೀತಿಸುವುದಕ್ಕೆ ಏಕಮಾತ್ರ ಕಾರಣ, ಲೋಕದಲ್ಲಿ ತಲೆದೋರಿರುವ ಒಡಕುಗಳನ್ನು ನಿವಾರಿಸಲು ನಾವು ಮಾಡುವ ಪ್ರಯತ್ನಗಳಿಗೆ ಏಕಮಾತ್ರ ಕಾರಣವಾಗಿರುವುದು ನಾವು ಇಸ್ಲಾಮಿನ ತತ್ವಗಳನ್ನು ಅನುಸರಿಸುವುದಾಗಿದೆ. ಅಹ್ಮದೀ ಮುಸ್ಲಿಮರಾದ ನಾವು ಪವಿತ್ರ ಖುರ್‌ಆನಿನ ನೈಜ ತತ್ವಗಳನ್ನು ಅರಿತಿರುವುದರಿಂದ ನಾವು ಈ ರೀತಿ ಶಾಂತಿಯಿಂದ ಜೀವಿಸಲು ಇಚ್ಛಿಸುತ್ತಿದ್ದೇವೆ. ನಾವು ಹೇಳುವ ಪ್ರತಿಯೊಂದು ಮಾತು ಮತ್ತು ನಾವು ಮಾಡುವ ಪ್ರತಿಯೊಂದು ಕೆಲಸ ನಾವು ಪವಿತ್ರ ಖುರ್‌ಆನ್‌ನಿಂದಲೂ ಇಸ್ಲಾಮಿನ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದಲೂ ಕಲಿತ ಪಾಠಗಳ ಪ್ರಭಾವದಿಂದಾಗಿದೆ.

ನಾನು ಹೇಳಿದ ಈ ಮಾತನ್ನು ಆಲಿಸಿ ನಿಮ್ಮ ಪೈಕಿ ಅನೇಕರು ಹೀಗೆ ಪ್ರಶ್ನಿಸಬಹುದು: ಇಸ್ಲಾಮ್ ಧರ್ಮ ಶಾಂತಿಪ್ರಿಯ ಧರ್ಮವಾಗಿದ್ದರೆ ಮುಸ್ಲಿಮ್ ಉಗ್ರವಾದಿ ಗುಂಪುಗಳು ಮುಸ್ಲಿಮ್ ಲೋಕದಲ್ಲಿಯೂ ಪಶ್ಚಿಮದ ದೇಶಗಳಲ್ಲೂ ವಿಧ್ವಂಸಕ ಕೃತ್ಯಗಳನ್ನು ನಡೆಸುವುದೇಕೆ? ಅವರು ನಿರಪರಾಧಿ ಜನರನ್ನು ನಿರ್ದಯರಾಗಿ ಕೊಲ್ಲುವುದೇಕೆ? ಇತ್ತೀಚೆಗೆ ಫ್ರಾನ್ಸ್‌ನಲ್ಲಿಯೂ ಬೆಲ್ಜಿಯಮ್‌ನಲ್ಲಿಯೂ ನಡೆದ ಹೇಯ ಭಯೋತ್ಪಾದಕ ಕೃತ್ಯಗಳು ನಿಮಗೆ ನೆನಪಿರಬಹುದು. ಕಳೆದ ಕೆಲವು ತಿಂಗಳುಗಳಲ್ಲಿ ಜರ್ಮನಿಯಲ್ಲಿ ನಡೆದ ಭಯೋತ್ಪಾದಕ ಆಕ್ರಮಣಗಳಿಂದಲೂ ನೀವು ಅತ್ಯಂತ ಆತಂಕಭರಿತರೂ ಭಯಭೀತರೂ ಆಗಿರಬಹುದು. ಉದಾಹರಣೆಗೆ, ಕಳೆದ ಮೇ ತಿಂಗಳಲ್ಲಿ ಒಂದು ರೈಲ್ವೇ ಸ್ಟೇಶನಿನಲ್ಲಿ ಆಕ್ರಮಣ ನಡೆಯಿತು. ಅನಂತರ ಜುಲೈಯಲ್ಲಿ ಟ್ರೈನ್ ಮೇಲೆ ಅದಕ್ಕಿಂತ ದೊಡ್ಡ ಆಕ್ರಮಣ ನಡೆಯಿತು. ಅದೇ ರೀತಿ ನಿರಾಶ್ರಿತರು ಮತ್ತು ಆಶ್ರಯಗಳಿಸುವುದರಲ್ಲಿ ವಿಫಲರಾದವರು ಕೆಲವು ಆಕ್ರಮಣಗಳನ್ನು ವಿವಿಧ ನಗರಗಳಲ್ಲಿ ಕಳೆದ ಕೆಲವು ವಾರಗಳಲ್ಲಿ ನಡೆಸಿದ್ದರು. ನಿರಪರಾಧಿ ಜನರು ಕೊಲ್ಲಲ್ಪಟ್ಟರು ಅಥವಾ ತೀವ್ರ ಗಾಯಗೊಂಡರು. ಸಹಜವಾಗಿ ಇಂತಹ ಆಕ್ರಮಣಗಳು ಸಾರ್ವಜನಿಕರನ್ನು ಭಯಭೀತರನ್ನಾಗಿ ಮಾಡಿದೆ ಮತ್ತು ಇಸ್ಲಾಮಿನ ಬಗ್ಗೆ ಸ್ಥಳೀಯರ ಮನಸ್ಸಿನಲ್ಲಿ ಭಯವನ್ನು ಉಂಟುಮಾಡಿದೆ. ಈ ಆಕ್ರಮಣಗಳನ್ನು ಇಸ್ಲಾಮಿನೊಂದಿಗೆ ಸೇರಿಸುವುದು ಅತ್ಯಂತ ದಾರುಣ ದುರಂತ ವಾಗಿದೆ. ಏಕೆಂದರೆ ಇಂತಹ ಆಕ್ರಮಣಗಳಿಗೆ ಇಸ್ಲಾಮಿನೊಂದಿಗೆ

ಧ್ರುವೀಯ ವ್ಯತ್ಯಾಸವಿದ್ದು ಪರಸ್ಪರ ವಿರುದ್ಧವಾಗಿವೆ.

ಇಸ್ಲಾಮ್ ಧರ್ಮ ನಿರಪರಾಧಿ ಜನರನ್ನು ಕೊಲ್ಲುವುದನ್ನು ಮತ್ತು ಅವರಿಗೆ ಹಾನಿಯುಂಟುಮಾಡುವುದನ್ನು ಅತ್ಯಂತ ಬಲಯುತವಾಗಿ ಖಂಡಿಸಿದೆ. ಹೀಗಿದ್ದರೂ ಇಸ್ಲಾಮ್ ಪ್ರಕಾರ ತಾವು ವರ್ತಿಸುವುದಾಗಿ ಹೇಳುವ ಭಯೋತ್ಪಾದಕರು ನಿರಪರಾಧಿಗಳನ್ನೂ ತಮ್ಮನ್ನು ರಕ್ಷಿಸಿಕೊಳ್ಳಲು ಸಮರ್ಥರಲ್ಲದ ಜನರನ್ನೂ ಆಕ್ರಮಿಸುವ ಅಪರಾಧ ಮಾಡುತ್ತಾರೆ. ಯಾವುದೇ ಯುದ್ಧ ಮಾಡದ ಮತ್ತು ಯಾರಿಗೂ ಹಾನಿಯುಂಟುಮಾಡದ ನಿಷ್ಕಳಂಕ ವ್ಯಕ್ತಿಗಳನ್ನು ಹತ್ಯೆ ಮಾಡುತ್ತಿದ್ದಾರೆ. ಅವರು ಇತ್ತೀಚೆಗೆ ಒಬ್ಬ ವೃದ್ಧ ಪುರೋಹಿತರನ್ನು ಒಂದು ಫ್ರೆಂಚ್ ಚರ್ಚ್‌ನಲ್ಲಿ ವಧಿಸಿರುವುದು ಅವರ ಕ್ರೌರ್ಯದ ಪಾರಮ್ಯವಾಗಿದೆ. ಯಾವುದೇ ಸಂದರ್ಭದಲ್ಲಿ, ಯಾವುದೇ ಕಾಲಘಟ್ಟದಲ್ಲಿ ಇಂತಹ ಕ್ರೌರ್ಯ ಕೃತ್ಯ ಸಮರ್ಥನೀಯವಲ್ಲ ಮತ್ತು ಅದನ್ನು ಮನವರಿಕೆ ಮಾಡುವುದು ಅಸಾಧ್ಯವೂ ಆಗಿದೆ. ಪಶ್ಚಿಮದ ಕೆಲವು ದೇಶಗಳು ಮುಸ್ಲಿಮ್ ಸರಕಾರಗಳಿಗೆ ತಮ್ಮ ದೇಶದ ವಿದ್ರೋಹಿಗಳ ವಿರುದ್ಧ ಮತ್ತು ಭಯೋತ್ಪಾದಕ ಗುಂಪುಗಳ ವಿರುದ್ಧ ಹೋರಾಡಲು ಸಹಾಯ ಮಾಡಿದ್ದರೆ, ಈ ವಿದ್ರೋಹಿಗಳು ತಮ್ಮ ದ್ವೇಷವನ್ನು ಮತ್ತು ಕುಕೃತ್ಯಗಳನ್ನು ಪಶ್ಚಿಮದ ದೇಶಗಳಿಗೆ ರಫ್ತು ಮಾಡಲು ಅದು ಲೈಸನ್ಸ್ ನೀಡುವುದಿಲ್ಲ.

ಇಂತಹ ಜನರು ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆಯ ಉದಾಹರಣೆಯನ್ನು ನೋಡಬೇಕು. ಚರಿತ್ರೆ ಹೀಗೆ ಸಾಕ್ಷ್ಯ ನುಡಿಯುತ್ತದೆ: ತಮ್ಮ ಮೇಲೆ ಹೇರಲಾದ ಯುದ್ಧಗಳಲ್ಲಿ ಮಾತ್ರ ಮುಸ್ಲಿಮರು ಹೋರಾಡಿದ್ದರು. ಅವರು ಸಂಪೂರ್ಣವಾಗಿ ಪ್ರತಿರೋಧಕ ಯುದ್ಧಗಳನ್ನು ಮಾಡಿದ್ದರು. ಇಂತಹ ಸಂದರ್ಭಗಳಲ್ಲಿ ಕೂಡ ಪವಿತ್ರ ಪೈಗಂಬರರು(ಸ) ಮುಸ್ಲಿಮ್ ಸೈನಿಕರು ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸಬೇಕೆಂದು ಆಜ್ಞಾಪಿಸಿದ್ದರು. ಉದಾಹರಣೆಗೆ, ಅವರು ಹೀಗೆ ಆಜ್ಞಾಪಿಸಿದ್ದರು: ಚರ್ಚ್ ಅಥವಾ ದೇವಾಲಯಗಳನ್ನಾಗಲಿ, ಪುರೋಹಿತರನ್ನಾಗಲಿ, ಧಾರ್ಮಿಕ ನಾಯಕರನ್ನಾಗಲಿ ಆಕ್ರಮಿಸಬಾರದು. ಮಹಿಳೆಯರನ್ನು, ಮಕ್ಕಳನ್ನು ಮತ್ತು ವೃದ್ಧರನ್ನು ಎಂದೂ ಆಕ್ರಮಣ ಮಾಡಬಾರದೆಂದು ಅವರು ಕಲಿಸಿದ್ದರು. ಅವರು ಹೀಗೆ ಸಹ ಹೇಳಿದ್ದರು: ಯುದ್ಧಕಾಲದಲ್ಲಿ ಕೂಡ ಮುಸ್ಲಿಮರು ಪರಿಸರವನ್ನು ರಕ್ಷಿಸಬೇಕು ಮತ್ತು ಮರಗಳನ್ನು ಕಡಿಯಬಾರದು.

ಇಸ್ಲಾಮಿನ ಪವಿತ್ರ ಪೈಗಂಬರರು(ಸ) ಸ್ಪಷ್ಟವಾಗಿ ಮೇಲೆ ವಿವರಿಸಿದಂತೆ ಆಜ್ಞೆಗಳನ್ನು ನೀಡಿರುವಾಗ ಯುದ್ಧ ಕ್ಷೇತ್ರದಿಂದ ಸಾವಿರಾರು ಮೈಲು ದೂರವಿರುವ ನಿರಪರಾಧಿ ಜನರನ್ನು ಕೊಲ್ಲುವುದು ಮತ್ತು ಅವರಿಗೆ ಹಾನಿ ಉಂಟುಮಾಡುವುದು ಮುಸ್ಲಿಮರಿಗೆ ಸಮರ್ಥನೀಯವಾಗುವುದಾದರೂ ಹೇಗೆ?

ಸತ್ಯವೇನೆಂದರೆ ಇಂತಹ ಆಕ್ರಮಣಗಳು ಎಂದೂ ಸಮರ್ಥನೀಯವಲ್ಲ. ನಾನು ಹಿಂದೆ ಹೇಳಿದ ಹಾಗೆ ಯುದ್ಧ ಕಾಲದಲ್ಲಿ ಕೂಡ ಅತ್ಯಂತ ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸಬೇಕೆಂದು ಇಸ್ಲಾಮ್ ಆಜ್ಞಾಪಿಸಿದೆ. ಉದಾಹರಣೆಗೆ, ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 68ರಲ್ಲಿ ಹೀಗೆ ಆಜ್ಞಾಪಿಸಲಾಗಿದೆ: ಯುದ್ಧದಲ್ಲಿ ನೇರವಾಗಿ ಹೋರಾಡುವವರನ್ನು ಮಾತ್ರ ಯುದ್ಧ ಕೈದಿಗಳಾಗಿ ಸೆರೆ ಹಿಡಿಯಬಹುದು.

ಆದುದರಿಂದ ಯುದ್ಧ ಕಾಲದಲ್ಲಿ ಒಬ್ಬ ಮುಸ್ಲಿಮನು ತನ್ನನ್ನು ನೇರವಾಗಿ ಎದುರಿಸದವನನ್ನು ಎಂದೂ ಸೆರೆ ಹಿಡಿಯಬಾರದು ಮತ್ತು ಕೊಲ್ಲಬಾರದು. ಇಂತಹ ಆಜ್ಞೆಗಳಿದ್ದರೂ ಮುಸ್ಲಿಮರು ಆತ್ಮಹತ್ಯಾ ಬಾಂಬ್ ದಾಳಿ ಮತ್ತು ಇತರ ಭಯೋತ್ಪಾದಕ ಕೃತ್ಯಗಳ ಮೂಲಕ ಯುದ್ಧ ಕ್ಷೇತ್ರದಿಂದ ಸಾವಿರಾರು ಮೈಲು ದೂರದಲ್ಲಿ ವಾಸಿಸುವ ನಿರಪರಾಧಿಗಳಾದ ಪಟ್ಟಣವಾಸಿಗಳನ್ನೂ ನಗರವಾಸಿಗಳನ್ನೂ ಅವರೊಂದಿಗೆ ಯಾವ ಜಗಳವಿಲ್ಲದಿದ್ದರೂ ಅವರ ಪರಿಚಯವಿಲ್ಲದಿದ್ದರೂ ಕ್ರೂರವಾಗಿ ಕೊಲ್ಲುತ್ತಿದ್ದಾರೆ. ಇಂತಹ ಹೇಯ, ಅವಾಚ್ಯ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳನ್ನು ಕಳಂಕಗೊಳಿಸುತ್ತವೆ. ಯಾರು ಇಂತಹ ಕೃತ್ಯಗಳನ್ನು ಮಾಡುತ್ತಿದ್ದಾರೆಯೋ ಒಂದು ಗುಂಪಿನ ಭಾಗವಾಗಿ ಅಥವಾ ವೈಯಕ್ತಿಕವಾಗಿ ಮಾಡುತ್ತಾರೋ ಅಂತಹ ಜನರು ಇಸ್ಲಾಮ್ ಧರ್ಮವನ್ನು ಅನುಸರಿಸುವವರಾಗಿರುವುದಿಲ್ಲ. ಅವರು ತಮ್ಮ ವೈಯಕ್ತಿಕ ಆಕಾಂಕ್ಷೆಗಳನ್ನು ಅಥವಾ ತಮ್ಮ ಸ್ವಾರ್ಥ ಹಿತವನ್ನು ಮತ್ತು ತಮ್ಮ ನಾಯಕರ ಹಂಬಲಗಳನ್ನು ಈಡೇರಿಸಲು ಈ ಕೃತ್ಯಗಳನ್ನು ಮಾಡುತ್ತಿದ್ದಾರೆ.

ಇಂದಿನ ಕಾಲದ ಅಸ್ತವ್ಯಸ್ತತೆಗೆ ಮತ್ತು ಕ್ರೂರ ಕೃತ್ಯಗಳಿಗೆ ಅತ್ಯಂತ ಪ್ರಮುಖ ಕಾರಣವಿರುವುದು ಮುಸ್ಲಿಮ್ ದೇಶಗಳಲ್ಲಿಯಾದರೂ ಇತರ ಎಲ್ಲ ಪಕ್ಷಗಳನ್ನು ಪರಿಪೂರ್ಣವಾಗಿ ದೋಷಮುಕ್ತರನ್ನಾಗಿ ಮಾಡುವುದು ನನ್ನ ಅಭಿಪ್ರಾಯದಲ್ಲಿ ತಪ್ಪಾಗಿದೆ. ಕೆಲವು ಪಾಶ್ಚಿಮಾತ್ಯ ಸರಕಾರಗಳು ಮತ್ತು ಪ್ರಮುಖ ಶಕ್ತಿ ರಾಷ್ಟ್ರಗಳು ತಪ್ಪುಗಳನ್ನು ಮಾಡಿವೆ ಮತ್ತು ಮುಸ್ಲಿಮ್ ದೇಶಗಳಿಗೆ ಸಂಬಂಧಿಸಿ ಬುದ್ಧಿಹೀನವಾದ ಮತ್ತು ಅನ್ಯಾಯದ ಧೋರಣೆಗಳನ್ನು ಪ್ರಚೋದಿಸಿವೆ. ಅದರ ಪರಿಣಾಮವಾಗಿ ನಕಾರಾತ್ಮಕ ತೀವ್ರ ಪ್ರತಿಕ್ರಿಯೆ ಮುಸ್ಲಿಮ್ ಲೋಕದ ಕೆಲವು ಭಾಗಗಳಲ್ಲಿ ತಲೆದೋರಿದೆ. ಅಂತಹ ವಿದೇಶಿ ಧೋರಣೆಗಳು ಅಸ್ಥಿರತೆಯನ್ನೂ ಒಡಕನ್ನೂ ಉಂಟುಮಾಡಿ ತೀವ್ರವಾದ ಮತ್ತು ಭಯೋತ್ಪಾದನೆ ಬೆಳವಣಿಗೆ ಹೊಂದುವಂತೆ ಮಾಡಿವೆ. ಈ ವಿದ್ಯಮಾನಗಳ ನೇರವಾದ ಒಂದು ಪರಿಣಾಮ ಬೃಹತ್ ಸಂಖ್ಯೆಯಲ್ಲಿ ನಿರಾಶ್ರಿತರು ಯುರೋಪಿನೊಳಗೆ ಹರಿದು ಬಂದುದಾಗಿದೆ. ನಿರಾಶ್ರಿತರ ಈ ಒಳ ಹರಿವು ದೇಶದ ನಿವಾಸಿಗಳಲ್ಲಿ ಭಯವನ್ನೂ ಗಾಬರಿಯನ್ನೂ ಹುಟ್ಟಿಸಿದೆ.

ಕೆಲವು ದೇಶಗಳು ಮತ್ತು ವಿಶಿಷ್ಟವಾಗಿ ಜರ್ಮನಿ ನಿರಾಶ್ರಿತರಿಗೆ ದಯೆ, ಐಕ್ಯಮತ್ಯ ಮತ್ತು ಅನುಕಂಪ ಪ್ರಕಟಿಸಲು ಅವರಿಗೆ ಆಶ್ರಯ ನೀಡಲು ಸಮ್ಮತಿಸಿವೆಯಾದರೂ ಅಷ್ಟೆಲ್ಲ ಜನರನ್ನು ತಮ್ಮಲ್ಲಿ ಒಳಗೊಳ್ಳುವುದು ಸುಲಭವೇನೂ ಅಲ್ಲ. ಅದರಲ್ಲಿ ಅಪಾಯಗಳೂ ಸಂಭಾವ್ಯ ಗಂಡಾಂತರಗಳೂ ಇವೆ. ನಿರಾಶ್ರಿತರ ಸಮಸ್ಯೆ ಕಾರಣ ಯುರೋಪು ಹೆಚ್ಚು ಅಪಾಯಕರ ಮತ್ತು ಅಸ್ಥಿರ ಸ್ಥಳವಾಗಿ ಥಕ್ಕನೆ ಸಂಭವಿಸಿದೆ. ಭಯೋತ್ಪಾದಕ ಗುಂಪುಗಳು ತಮ್ಮ ಸದಸ್ಯರನ್ನು ನಿರಾಶ್ರಿತರೆಂದು ನಟಿಸುವಂತೆ ಮಾಡಿ ಯುರೋಪಿಗೆ ಕಳುಹಿಸಲು ಸಂದರ್ಭ ಒದಗಿಸಿದೆ. ಈ ಭಯೋತ್ಪಾದಕರು ಸ್ವತಃ ಭಯೋತ್ಪಾದಕ ಕೃತ್ಯಗಳಲ್ಲಿ ಒಳಗೊಳ್ಳುವುದರೊಂದಿಗೆ ಅವರು ತಮ್ಮ ಭಯೋತ್ಪಾದನೆಯ ಜಾಲವನ್ನು ಬಳಸಿ ಇಲ್ಲಿ ಈಗಾಗಲೇ ವಾಸಿಸುತ್ತಿರುವ ಮುಸ್ಲಿಮರನ್ನು ತೀವ್ರವಾದಿಗಳನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಾರೆ.

ಈ ಭಯೋತ್ಪಾದಕರು ಇಲ್ಲಿರುವ ಮುಸ್ಲಿಮರ ವೈಯಕ್ತಿಕ ನಿರಾಶೆಗಳ ಲಾಭಪಡೆದು ಅವರು ಇಲ್ಲಿ ಆತ್ಮಹತ್ಯಾ ದಾಳಿ ಮತ್ತು ಇತರ ಕ್ರೂರ ಕೃತ್ಯಗಳನ್ನು ಮಾಡುವಂತೆ ಪ್ರೇರೇಪಿಸುತ್ತಾರೆ. ನಾವು ಇದರ ಉದಾಹರಣೆಗಳನ್ನು ಇತ್ತೀಚೆಗಿನ ತಿಂಗಳುಗಳಲ್ಲಿ ವಿಷಾದಕರವಾಗಿ ನೋಡಿದ್ದೇವೆ. ನಿರಾಶ್ರಿತರಿಗೆ ಸಂಬಂಧಿಸಿದ ವಿಷಮ ಪರಿಸ್ಥಿತಿಯ ಇನ್ನೊಂದು ಪರಿಣಾಮವೇನೆಂದರೆ ವಲಸೆಗಾರರಿಗೆ ಸಂಬಂಧಿಸಿ ಯುರೋಪಿನಲ್ಲಿ ಕಠಿಣ ಭಾವನೆ ತಲೆದೋರಿದೆ. ಅನೇಕ ದೇಶಗಳಲ್ಲಿ ಅತಿ ಬಲಪಂಥೀಯ ರಾಷ್ಟ್ರೀಯ ಪಕ್ಷಗಳು ತಮ್ಮ ಪ್ರಭಾವ ವರ್ಧಿಸಿ ಹೆಚ್ಚು ಜನ ಬೆಂಬಲ ಗಳಿಸುತ್ತಿವೆ. ಜರ್ಮನಿಯಲ್ಲೂ ಹೀಗೆಯೇ ಆಗಿದೆ. ಒಂದು ವರ್ಷದ ಹಿಂದೆ ಈ ದೇಶದ ಬಹುಸಂಖ್ಯಾತರು ನಿರಾಶ್ರಿತರಿಗೆ ತೋರಿಸಿದ ಅನುಕಂಪ ಮತ್ತು ಸ್ನೇಹ ವೇಗವಾಗಿ ತಗ್ಗಿದೆ. ಅದರ ಬದಲಿಗೆ ವಲಸೆಗಾರರ ಬಗ್ಗೆ ಭಯ ಮತ್ತು ಹಗೆತನ ವರ್ಧಿಸಿದೆ.

ಅನೇಕ ಮಾಧ್ಯಮಗಳ ವರದಿ ಮತ್ತು ಸರ್ವೇಕ್ಷಣೆಗಳು ಜರ್ಮನ್ ಸರಕಾರ ಕಳೆದ ವರ್ಷ ನಿರಾಶ್ರಿತರಿಗೆ ತನ್ನ ದೇಶದ ಬಾಗಿಲನ್ನು ತೆರೆದಿರಿಸಿದುದು ತಪ್ಪು ಎಂದು ಇಲ್ಲಿನ ಸಾರ್ವಜನಿಕರು ಅಭಿಪ್ರಾಯಪಡುತ್ತಿರುವರೆಂಬ ವರದಿಯನ್ನು ಸಮರ್ಥಿಸುತ್ತವೆ. ಜನರ ನಿಲುವಿನ ಈ ಬದಲಾವಣೆ ವ್ಯಾಕುಲದಾಯಕವಾಗಿದೆ ಮತ್ತು ಅನಂತರ ರಾಷ್ಟ್ರೀಯ ಪಕ್ಷಗಳು ಬೆಂಬಲ ಗಳಿಸುತ್ತಿರುವುದು ಹೆಚ್ಚು ಆತಂಕದಾಯಕವಾಗಿದ್ದು ದೇಶದ ಶಾಂತಿ ಮತ್ತು ಭದ್ರತೆಗೆ ಬೆದರಿಕೆ ಒಡ್ಡುವುದಾಗಿದೆ. ಒಂದು ಸ್ಪಷ್ಟ ಉದಾಹರಣೆ, ಮ್ಯುನಿಚ್‌ನ ಒಂದು ಶೋಪಿಂಗ್ ಸೆಂಟರ್‌ನಲ್ಲಿ ಜುಲೈ ತಿಂಗಳಲ್ಲಿ ನಡೆದ ಆಕ್ರಮಣವಾಗಿದೆ. ಅನೇಕ ಯುವ ಜನರು ಅದರಲ್ಲಿ ಕೊಲ್ಲಲ್ಪಟ್ಟರು. ಈ ಆಕ್ರಮಣ ಮಾಡಿದವನು ಒಬ್ಬ ಅತಿ ಬಲಪಂಥೀಯ ಒಲವುಳ್ಳವನೆಂದು ಅನಂತರ ತಿಳಿಯಿತು. ಇದೊಂದು ಅತಿರೇಕದ ಉದಾಹರಣೆಯಾಗಿದೆ. ಆದರೆ ಸಾಮಾನ್ಯ ನೆಲೆಯಲ್ಲೂ ವಲಸೆಗಾರರಿಗೆ ಸಂಬಂಧಿಸಿ ಭಯ ವರ್ಧಿಸುತ್ತಾ ಇದೆ ಎಂಬುದು ಸಂಶಯಾತೀತವಾಗಿದೆ. ದೇಶದ ನಾಗರಿಕರು ತಮಗೆ ಅನ್ಯಾಯವಾಗಿದೆ ಎಂದು ಕೋಪಗೊಂಡಿದ್ದಾರೆ. ಜರ್ಮನಿಯ ತೆರಿಗೆ ನೀಡುವವರಿಂದ ಪಡೆದ ಹಣದ ಲಾಭವನ್ನು ಜರ್ಮನ್ ಸರಕಾರದ ಮೂಲಕ ವಲಸೆಗಾರರು ಪಡೆಯುತ್ತಿದ್ದಾರೆ ಎಂಬುದು ಜನರ ಕೋಪಕ್ಕೆ ಕಾರಣವಾಗಿದೆ.

ಇನ್ನೊಂದು ವಿಷಯವೇನೆಂದರೆ ಸರಕಾರದಿಂದ ಪ್ರಯೋಜನಗಳನ್ನು ಪಡೆಯುತ್ತಿರುವ ವಲಸೆಗಾರರು ಜರ್ಮನಿಗೆ ನಿಷ್ಠಾವಂತರಾಗಿಲ್ಲ ಮತ್ತು ಅವರು ಜರ್ಮನಿಗೆ ಹಾನಿ ಮಾಡುವವರಾಗಿದ್ದಾರೆ ಎಂಬ ನಂಬಿಕೆ ಜನರಲ್ಲಿದೆ. ನಾವು ಅಸ್ಥಿರವೂ ಚಂಚಲವೂ ಆಗಿರುವ ಕಾಲಘಟ್ಟದಲ್ಲಿ ಜೀವಿಸುತ್ತಿದ್ದೇವೆ ಎಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ಅಧಿಕಾರಿಗಳು ಈ ವಿಷಯಗಳನ್ನು ಹಗುರವಾಗಿ ಪರಿಗಣಿಸಬಾರದೆಂಬುದು ಆವಶ್ಯಕವಾಗಿದೆ. ಪರಿಸ್ಥಿತಿ ಹತೋಟಿಯನ್ನು ಮೀರಿ ಹೋಗುವ ಮೊದಲು ಪರಿಸ್ಥಿತಿಯನ್ನು ತಣ್ಣಗಾಗಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾದುದು ಆವಶ್ಯಕವಾಗಿದೆ. ಜರ್ಮನಿಯ ನಾಗರಿಕರ ಹಕ್ಕುಗಳನ್ನು ಸುರಕ್ಷಿತವಾಗಿರಿಸಲು ಮತ್ತು ಅವುಗಳಿಗೆ ಯಾವುದೇ ರೀತಿ ಹಾನಿಯಾಗದಂತೆ ಮಾಡಲು ಧೋರಣೆಗಳನ್ನು ಸರಕಾರ ರೂಪಿಸಬೇಕು. ನೈಜ ವಲಸೆಗಾರರಿಗೆ ಸರಕಾರ ನೆರವು ನೀಡಿ ಅವರು ತಮ್ಮ ಪಾದಗಳ ಮೇಲೆ ನಿಲ್ಲಲು ಸಾಧ್ಯವಾಗುವಂತೆ ಮಾಡಬೇಕು. ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ ಮತ್ತು ಇತ್ತೀಚೆಗೆ ಸ್ವೀಡನ್‌ನಲ್ಲಿ ಈ ವರ್ಷದ ಆರಂಭದಲ್ಲಿ ಹೇಳಿದ್ದೇನೆ– ವಲಸೆಗಾರರು ತಾವು ವಲಸೆ ಹೋದ ದೇಶಗಳಿಂದ ಲಾಭಗಳನ್ನು ಪಡೆಯುತ್ತಾ ಇದ್ದರೆ ಸಾಕಾಗಲಾರದು. ಅವರು ತಾವಿರುವ ದೇಶದ ಕಾರ್ಮಿಕ ಕ್ಷೇತ್ರವನ್ನು ಪ್ರವೇಶಿಸಲು ಪ್ರಯತ್ನಿಸಬೇಕು ಮತ್ತು ಸಮಾಜಕ್ಕೆ ಸಾಧ್ಯವಿರುವಷ್ಟು ಸೇವೆ ಸಲ್ಲಿಸಬೇಕು. ನನ್ನ ಅಭಿಪ್ರಾಯಪ್ರಕಾರ ಇದರಿಂದ ತಕ್ಷಣ ಸಕಾರಾತ್ಮಕ ಪರಿಣಾಮ ಉಂಟಾಗುವುದು.ದೇಶದ ನಾಗರಿಕರ ಮತ್ತು ವಲಸೆಗಾರರ ಮಧ್ಯೆ ತೆರೆಯಲ್ಪಡುವ ಅಪಾಯಕಾರಿ ಕಂದರ ಕಡಿಮೆಯಾಗುವುದು.

ಇದಲ್ಲದೆ ಭಯೋತ್ಪಾದಕರು ಮತ್ತು ಉಗ್ರಗಾಮಿಗಳು ಈ ದೇಶವನ್ನು ಪ್ರವೇಶಿಸಬಹುದಾದ ಬೆದರಿಕೆಯನ್ನು ನಿರ್ಲಕ್ಷಿಸಲಾಗದು. ಆದುದರಿಂದ ಸರಕಾರ ಈ ದೇಶದ ಪ್ರಜೆಗಳನ್ನು ಸಂರಕ್ಷಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಬೇಕು ಮತ್ತು ದೇಶಕ್ಕೆ ಹಾನಿಯನ್ನುಂಟುಮಾಡಲು ಇಚ್ಛಿಸುವವರನ್ನು ಗುರುತಿಸಬೇಕು. ಎಲ್ಲಿಯಾದರೂ ಯಾವಾಗಲಾದರೂ ಒಬ್ಬನು ತಾನು ಮಾಡುವ ಕ್ರೂರಕೃತ್ಯಗಳನ್ನು ಮತ್ತು ಅನ್ಯಾಯವನ್ನು, ಅನ್ಯರ ಹಕ್ಕುಗಳನ್ನು ಕಿತ್ತುಕೊಳ್ಳುವುದನ್ನು ಅಥವಾ ಸರಕಾರದ ವಿರುದ್ಧ ಕ್ರಮ

ಕೈಗೊಳ್ಳುವುದನ್ನು ಸಮರ್ಥಿಸಲು ತನ್ನ ಧರ್ಮವನ್ನು ಬಳಸುವುದಾದರೆ ಅಂತಹ ಕೃತ್ಯಗಳನ್ನು ತಡೆಗಟ್ಟಲು ಆವಶ್ಯಕ ಕ್ರಮಗಳನ್ನು ಕೈಗೊಳ್ಳುವುದು ಖಂಡಿತವಾಗಿ ಅಧಿಕಾರಾರೂಢರ ಮತ್ತು ಸರಕಾರದ ಹೊಣೆಗಾರಿಕೆಯಾಗಿದೆ.

ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿ ನಾನು ಹಲವು ಸಾರಿ ಪ್ರಸ್ತಾಪಿಸಿದ್ದೇನೆ. ನ್ಯಾಯಪಾಲನೆ ಮತ್ತು ಸಮಾನತೆಯ ಪ್ರಾಮುಖ್ಯತೆ ಬಗ್ಗೆ ಇಸ್ಲಾಮ್ ಖಂಡಿತವಾಗಿಯೂ ಹೇಳಿದೆ. ಶಾಂತಿಗಿರುವ ಕೀಲಿಗೈ – ನ್ಯಾಯಪಾಲನೆ ಮತ್ತು ಔದಾರ್ಯ ಪೂರ್ಣ ವರ್ತನೆ ಸಮಾಜದ ಎಲ್ಲ ಹಂತಗಳಲ್ಲಿ ಜಾರಿಗೊಳಿಸುವುದಾಗಿದೆ. ಇಸ್ಲಾಮ್ ಕೇವಲ ನ್ಯಾಯಪಾಲನೆ ಮಾಡುವ ಬಗ್ಗೆ ಮಾತ್ರ ಹೇಳುವುದಿಲ್ಲ. ಅದು ನ್ಯಾಯಪಾಲನೆಯ ಮಾನದಂಡಗಳನ್ನು ಸಹ ವಿವರಿಸುತ್ತದೆ. ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ, ಪ್ರತಿಯೊಬ್ಬ ವ್ಯಕ್ತಿ ತನ್ನ ಅತ್ಯಂತ ದೊಡ್ಡ ಶತ್ರುವಿನೊಂದಿಗೆ ಕೂಡ ಔದಾರ್ಯಪೂರ್ಣವಾಗಿಯೂ ನ್ಯಾಯಬದ್ಧವಾಗಿಯೂ ವರ್ತಿಸಬೇಕೆಂದು ಹೇಳಿದೆ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ ಎಂದು ಉಪದೇಶಿಸಲಾಗಿದೆ. ಈ ಉಪದೇಶವನ್ನು ಪರಿಪೂರ್ಣವಾಗಿ ಅನುಷ್ಠಾನಕ್ಕೆ ತಂದವರು ಇಸ್ಲಾಮಿನ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಎಂದು ನಾವು ನಂಬುತ್ತೇವೆ. ನಾವು ಅವರ ಉದಾಹರಣೆಯನ್ನು ನೋಡುವ. ಒಮ್ಮೆ ಕೆಲವು ಮುಸ್ಲಿಮರು ಇಬ್ಬರು ಅಪಾಯಕಾರಿಗಳಾದ ಶತ್ರುಗಳನ್ನು ಕೊಂದಿದ್ದರು. ಆದರೆ ಅವರಿಬ್ಬರು ಅದರ ಮೊದಲು ಮಕ್ಕದ ಪವಿತ್ರ ಕಅ್‌ಬ ದೇವಾಲಯದ ವಠಾರವನ್ನು ಪ್ರವೇಶಿಸಿದ್ದರು.

ಈ ಘಟನೆ ಬಗ್ಗೆ ಇಸ್ಲಾಮಿನ ವಿರೋಧಿಗಳು ಪೈಗಂಬರರಿಗೆ(ಸ) ತಿಳಿಸಿದರು. ಆಗ ಹಝ್ರತ್ ಪೈಗಂಬರರು(ಸ) ಆ ಹತ್ಯೆ ನಡೆಸಿದ ಮುಸ್ಲಿಮರನ್ನು ಬಲವಾಗಿ ಖಂಡಿಸಿದರು ಮತ್ತು ಅವರು ಮಾಡಿದ ಕೆಲಸ ಅನ್ಯಾಯಭರಿತ ಕ್ರೂರಕೃತ್ಯ ಎಂದು ವಿಧಿಸಿದರು. ಅಂದಿನ ಕಾಲದ ಅರಬ್ ಸಂಪ್ರದಾಯ ಪ್ರಕಾರ ಹತರಾದ ಆ ಜನರ ಕುಟುಂಬಗಳಿಗೆ ಪರಿಹಾರ ದ್ರವ್ಯ ನೀಡಲು ಕೂಡಲೆ ಆಜ್ಞಾಪಿಸಿದರು. ಶತ್ರುಗಳೊಂದಿಗೆ ಕೂಡ ನ್ಯಾಯಬದ್ಧವಾಗಿಯೂ ಔದಾರ್ಯದಿಂದಲೂ ವರ್ತಿಸಬೇಕೆಂಬ ಪವಿತ್ರ ಖುರ್‌ಆನಿನ ಆಜ್ಞೆಯ ಪ್ರಾಯೋಗಿಕ ಪಾಲನೆ ಇದಾಗಿದೆ. ಒಂದು ವಿಷಯ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಳಿಗೆ ತೀರ್ಪು ನೀಡಲು ಸಮರ್ಪಿಸಲ್ಪಟ್ಟಾಗ ತನ್ನ ಅನುಯಾಯಿ ಯಾರು, ತನ್ನ ವಿರೋಧಿ ಯಾರೆಂದು ಪರಿಗಣಿಸದೆ ಯಾವುದು ಸರಿಯಾದುದು, ಯಾವುದು ನ್ಯಾಯಬದ್ಧವಾದುದು ಮತ್ತು ಔದಾರ್ಯಪೂರ್ಣವಾದುದು ಎಂದು ಮಾತ್ರ ಅವರು ಪರಿಗಣಿಸಿದರು.

ನ್ಯಾಯಪಾಲನೆಯ ಇಂತಹ ಮಾನದಂಡವನ್ನು ಮುಸ್ಲಿಮರು ಪಾಲಿಸಬೇಕೆಂದು ಇಸ್ಲಾಮ್ ಆವಶ್ಯಪಡುತ್ತದೆ. ಆದುದರಿಂದ ಯಾವುದೇ ಅಪರಾಧ ಮಾಡದ ನಿರಪರಾಧಿ ಜನರನ್ನು, ರೈಲ್ವೇ ಸ್ಟೇಶನ್‌ಗಳಲ್ಲಿ, ಟ್ರೈನ್‌ಗಳಲ್ಲಿ, ಕ್ಲಬ್‌ಗಳಲ್ಲಿ ಅಥವಾ ಬೇರೆಲ್ಲಿಯಾದರೂ ಆಕ್ರಮಿಸುವುದು ಸಂಪೂರ್ಣವಾಗಿ ಅಸಮರ್ಥನೀಯವಾಗಿದೆ ಮತ್ತು ಅಂತಹ ಕೃತ್ಯಗಳನ್ನು ಅತ್ಯಂತ ಕಟುವಾಗಿ ಖಂಡಿಸಬೇಕಾಗಿದೆ. ಇಸ್ಲಾಮಿನ ಚರಿತ್ರೆಯಿಂದ ಕೇವಲ ಒಂದು ಉದಾಹರಣೆಯನ್ನು ನಾನು ಉಲ್ಲೇಖಿಸಿದ್ದೇನೆ. ಆದರೆ ಅಸಂಖ್ಯಾತ ಬೇರೆ ಉದಾಹರಣೆಗಳಿವೆ. ಅವು ಇಸ್ಲಾಮ್ ಧರ್ಮ ತತ್ವಗಳ ಭವ್ಯತೆಗೆ ಸಾಕ್ಷಿ ನೀಡುತ್ತವೆ. ಈ ಇಸ್ಲಾಮ್ ಧರ್ಮ ತತ್ವಗಳ ಆಧಾರದ ಮೇಲೆ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಯಾವಾಗಲೂ ನಂಬುವುದೇನೆಂದರೆ ಯಾರಿಗೂ ನಿಯಮವನ್ನು ತನ್ನ ಕೈಗೆ ಎತ್ತಿಕೊಳ್ಳಲು ಹಕ್ಕು ಇಲ್ಲ. ಜೀವ ಮತ್ತು ಸ್ವಾತಂತ್ರ್ಯದ ಬಗ್ಗೆ ಇಸ್ಲಾಮ್ ಧರ್ಮದ ಗೌರವ ಪರಿಪೂರ್ಣವಾಗಿದೆ ಎಂದು ನಾವು ನಂಬುತ್ತೇವೆ. ಅದು ಮಾನವರ ಚರಿತ್ರೆಯಲ್ಲಿ ಅಪ್ರತಿಮವಾಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 33ರಲ್ಲಿ ಹೀಗೆ ಘೋಷಿಸಿದೆ: ನಿರಪರಾಧಿಯಾದ ಒಬ್ಬನನ್ನು ಯಾರಾದರೂ ಕೊಂದರೆ ಅವನು ಮನುಷ್ಯರೆಲ್ಲರನ್ನೂ ಕೊಂದಂತೆ ಆಗುತ್ತದೆ. ಯಾರಾದರೂ ಒಬ್ಬನ ಜೀವವನ್ನು ರಕ್ಷಿಸಿದರೆ ಆತನು ಮನುಷ್ಯರೆಲ್ಲರನ್ನೂ ರಕ್ಷಿಸಿದಂತಾಗುತ್ತದೆ.

ಆದುದರಿಂದ ಇಸ್ಲಾಮ್ ಧರ್ಮ ತತ್ವಗಳನ್ನು ನಿಷ್ಪಕ್ಷಪಾತವಾಗಿ ವಿಶ್ಲೇಷಿಸುವುದಾದರೆ ಇಂದು ಲೋಕದಲ್ಲಿ ಜಾರಿಯಲ್ಲಿರುವ ಭೀಕರವಾದಕ್ಕೆ ಮತ್ತು ಉಗ್ರವಾದಕ್ಕೆ ಇಸ್ಲಾಮ್ ಧರ್ಮದೊಂದಿಗೆ ಯಾವ ಸಂಬಂಧವೂ ಇಲ್ಲ– ಭಯೋತ್ಪಾದಕರು ಏನೇ ಹೇಳಿದರೂ ಮತ್ತು ಮಾಧ್ಯಮಗಳು ಹೇಗೆ ಬೇಕಾದರೂ ಇಸ್ಲಾಮ್ ಧರ್ಮವನ್ನು ಚಿತ್ರಿಸಿದರೂ. ಸತ್ಯವೇನೆಂದರೆ, ಹಿಂಸಾಚಾರ ಮಾಡುವವರು ಮತ್ತು ಉಗ್ರವಾದವನ್ನು ಪ್ರೋತ್ಸಾಹಿಸುವವರು ಇಸ್ಲಾಮ್ ಧರ್ಮದ ಶ್ರೇಷ್ಠ ತತ್ವಗಳನ್ನು ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಮತ್ತು ಅಧಿಕಾರಮೋಹದಿಂದ ಉಲ್ಲಂಘಿಸುತ್ತಾರೆ. ವಾಸ್ತವಿಕವಾಗಿ, ಇಸ್ಲಾಮ್ ಎಂಬ ಪದದ ಅರ್ಥ ಶಾಂತಿ, ಸೌಹಾರ್ದ ಮತ್ತು ಎಲ್ಲರಿಗೆ ಸಂರಕ್ಷಣೆ ಎಂದೇ ಆಗಿದೆ. ಯಾರು ಇವುಗಳಿಗೆ ವಿರುದ್ಧವಾಗಿ ವರ್ತಿಸುತ್ತಾರೋ ಅವರು ಇಸ್ಲಾಮ್ ಧರ್ಮ ತತ್ವಗಳನ್ನು ಉಲ್ಲಂಘಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಇಸ್ಲಾಮಿನ ನೈಜ ತತ್ವಗಳನ್ನು ಲೋಕದ ಎಲ್ಲ ಭಾಗಗಳಲ್ಲೂ ಪ್ರಚಾರ ಮಾಡುವ ಹೊಣೆಗಾರಿಕೆಯನ್ನು ವಹಿಸಿಕೊಂಡಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಲೋಕದಲ್ಲಿ ವಾಸ್ತವಿಕವಾದ ಮತ್ತು ದೀರ್ಘಕಾಲ ನೆಲೆನಿಲ್ಲುವ ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದೆ. ಎಲ್ಲ ಜನಾಂಗಗಳ, ಎಲ್ಲ ಬುಡಕಟ್ಟುಗಳ,

ಎಲ್ಲ ಧರ್ಮಗಳ, ಎಲ್ಲ ನಂಬಿಕೆಗಳ ಜನರು ಒಟ್ಟಿಗೆ ಸೇರಬೇಕೆಂದೂ ಒಬ್ಬರ ಬದಿಗೆ ಇನ್ನೊಬ್ಬರು ಪರಸ್ಪರ ಗೌರವ ಮತ್ತು ಸಹಿಷ್ಣುತೆಯಿಂದ ಜೀವಿಸಬೇಕೆಂದೂ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಪರಿಶ್ರಮಪಡುತ್ತಾ ಇದೆ.

ಮಾನವರನ್ನೆಲ್ಲ ಪ್ರೀತಿ ಮತ್ತು ಕರುಣೆಯ ಛತ್ರಿಯ ಕೆಳಗೆ ಒಗ್ಗೂಡಿಸಲು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಕಠಿಣ ಪರಿಶ್ರಮ ಮಾಡುತ್ತಿದೆ. ನಮ್ಮ ಈ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಲು ನಾವು ಎಲ್ಲ ವಿಧಗಳ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಆದುದರಿಂದ ಲೋಕದಲ್ಲಿ ಹೆಚ್ಚಾಗುತ್ತಿರುವ ಸಂಘರ್ಷ ಮತ್ತು ಒಡಕಿನ ಮಧ್ಯೆ ನಾವು ಜನರನ್ನು ಒಗ್ಗೂಡಿಸಲು ಶಾಂತಿಯ ಸೇತುವೆಗಳನ್ನು ನಿರ್ಮಿಸುತ್ತಿದ್ದೇವೆ. ನಮ್ಮ ಶಕ್ತಿಯನುಸಾರ ನಾವು ಮಾನವರ ಸೇವೆ ಮಾಡುತ್ತಿದ್ದೇವೆ. ಆವಶ್ಯಕತೆಗಳಿರುವವರಿಗೆ ನಾವು ನೆರವು ಒದಗಿಸಿ ಅವರಿಗೆ ಮತ್ತು ಅವರ ಮಕ್ಕಳಿಗೆ ಉತ್ತಮ ಭವಿಷ್ಯತ್‌ಕಾಲ ದೊರಕುವಂತೆ ಮಾಡುತ್ತೇವೆ. ನಾವು ಲೋಕದ ಕೆಲವು ಬಡದೇಶಗಳಲ್ಲಿ ಮಾನವರಿಗೆ ಹಿತಕಾರಿಯಾದ ವಿವಿಧ ಯೋಜನೆಗಳನ್ನು ಕೈಗೊಂಡಿದ್ದೇವೆ.

ಉದಾಹರಣೆಗೆ, ನಾವು ಆಫ್ರಿಕದ ದೂರ ಪ್ರದೇಶಗಳಲ್ಲಿ ನೂರುಗಟ್ಟಲೆ ಶಾಲೆಗಳನ್ನೂ ಡಜನ್‌ಗಟ್ಟಲೆ ಆಸ್ಪತ್ರೆಗಳನ್ನೂ ಸ್ಥಾಪಿಸಿದ್ದೇವೆ. ಅವುಗಳು ಧರ್ಮ, ಜಾತಿ, ವರ್ಣಭೇದ ಮಾಡದೆ ಎಲ್ಲ ಜನರಿಗೂ ವಿದ್ಯೆಯನ್ನೂ ಚಿಕಿತ್ಸೆಯನ್ನೂ ನೀಡುತ್ತವೆ. ವಾಟರ್ ಫೋರ್ ಲೈಫ್ (ಜೀವ ಜಲ) ಯೋಜನೆ ಪ್ರಕಾರ ದೂರದ ಗ್ರಾಮಗಳಲ್ಲಿ ಮತ್ತು ಪಟ್ಟಣಗಳಲ್ಲಿ ವಾಸಿಸುವ ಜನರಿಗೆ ಶುದ್ಧೀಕೃತ ನೀರನ್ನು ಪೂರೈಸುತ್ತಿದ್ದೇವೆ. ಜನರ ನೋವನ್ನೂ ಕಷ್ಟಗಳನ್ನೂ ನಿವಾರಿಸಲು ನಾವು ಬೇರೆ ಯೋಜನೆಗಳನ್ನೂ ಕೈಗೊಂಡಿದ್ದೇವೆ. ಅವರು ಹೆಚ್ಚು ಸೌಲಭ್ಯದೊಂದಿಗೆ ಜೀವಿಸಲು ವ್ಯವಸ್ಥೆ ಮಾಡಿದ್ದೇವೆ. ನಾವು ಯಾವುದೇ ಪ್ರಶಂಸೆಯನ್ನಾಗಲಿ, ಪ್ರಚಾರವನ್ನಾಗಲಿ ಆಶಿಸುವುದಿಲ್ಲ. ನಮ್ಮ ಧರ್ಮ ನಮಗೆ ಏನನ್ನು ಕಲಿಸಿದೆಯೋ ಅದನ್ನು ನಾವು ಅನುಸರಿಸುತ್ತಿದ್ದೇವೆ.

ಇದು ನೈಜ ಇಸ್ಲಾಮ್ ಆಗಿದೆ. ಮಾಧ್ಯಮಗಳು ಸಾಮಾನ್ಯವಾಗಿ ಏನನ್ನು ಚಿತ್ರಿಸುತ್ತಿವೆಯೋ ಅದರಿಂದ ಇದು ಬಹಳ ದೂರವಿದೆ ಎಂದು ನೀವು ಅಂಗೀಕರಿಸುವಿರಿ ಎಂದು ನಾನು ನಂಬುತ್ತೇನೆ. ಆದುದರಿಂದ ನೀವು ಇಸ್ಲಾಮನ್ನು ಭಯಪಡಬೇಕಾಗಿಲ್ಲ. ಆದರೆ ಇಸ್ಲಾಮಿನ ತತ್ವಗಳಿಗೆ ವಿರುದ್ಧವಾಗಿ ವರ್ತಿಸುವ ಭಯೋತ್ಪಾದಕರನ್ನೂ ಉಗ್ರಗಾಮಿಗಳನ್ನೂ ಖಂಡಿತವಾಗಿಯೂ ಭಯಪಡಬೇಕಾಗಿದೆ. ಅವರು ಮುಸ್ಲಿಮೇತರರಿಗೆ ಮಾತ್ರವಲ್ಲ ಮುಸ್ಲಿಮರಿಗೂ ಬಹಳ ಅಪಾಯಕಾರಿಗಳಾಗಿದ್ದಾರೆ. ನಾವು ಹಿಂಸಾಚಾರಗಳ ಬಗ್ಗೆ ಅಂಕಿ ಅಂಶಗಳ ವರದಿಗಳನ್ನು ಪರಿಶೀಲಿಸಿದರೆ ಇಸ್ಲಾಮಿನ ಹೆಸರಲ್ಲಿ ಹಿಂಸಾಚಾರ ನಡೆಸುವ ಮುಸ್ಲಿಮರು, ಮುಸ್ಲಿಮ್ ದೇಶಗಳಲ್ಲಿ ಮುಸ್ಲಿಮರ ವಿರುದ್ಧವೇ ಅತ್ಯಂತ ಹೆಚ್ಚು ಕ್ರೂರಕೃತ್ಯಗಳನ್ನು ನಡೆಸುತ್ತಾರೆ. ಆದುದರಿಂದ ನಿಮ್ಮನ್ನು ಆಕ್ರಮಿಸುವುದು ಮತ್ತು ನಿಮ್ಮ ಹಕ್ಕುಗಳನ್ನು ಕಿತ್ತುಕೊಳ್ಳಲು ಬಯಸುವುದು ಇಸ್ಲಾಮಲ್ಲ. ಸ್ವಾರ್ಥ ಹಿತಾಸಕ್ತಿಗಳನ್ನು ಹೊಂದಿದ ಜನರಿಗೆ ಮತ್ತು ಗುಂಪುಗಳಿಗೆ ತಮ್ಮದೇ ಆಗಿರುವ ಕಾರ್ಯಸೂಚಿ ಇರುತ್ತದೆ. ಅವರಿಗೆ ಇಸ್ಲಾಮಿನೊಂದಿಗೆ ಯಾವುದೇ ಸಂಬಂಧ ಇರುವುದಿಲ್ಲ.

ಅಹ್ಮದೀ ಮುಸ್ಲಿಮರಾದ ನಾವು ನಮ್ಮ ಮಾತುಗಳ ಮೂಲಕ, ನಮ್ಮ ಕೆಲಸಗಳ ಮೂಲಕ ಮತ್ತು ಪ್ರಾರ್ಥನೆಗಳ ಮೂಲಕ ಯಾವಾಗಲೂ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಾ ಇದ್ದೇವೆ ಮತ್ತು ನಾವು ಈ ಕಾರ್ಯವನ್ನು ಮುಂದುವರಿಸುವೆವು. ಶಾಂತಿಯನ್ನು ಬೆಂಬಲಿಸಿ ಅದಕ್ಕೋಸ್ಕರ ಕಾರ್ಯ ಪ್ರವೃತ್ತರಾಗ ಬೇಕಾದುದು ಈಗ ಅತ್ಯಂತ ಆವಶ್ಯಕವಾದುದಾಗಿವೆ. ಹಾಗೆ ಮಾಡದಿದ್ದರೆ ಲೋಕವು ಸಾಗುತ್ತಿರುವುದು ಅತ್ಯಂತ ವಿನಾಶಕಾರಿ ಜಾಗತಿಕ ಯುದ್ಧದ ಕಡೆಗೆ ಎಂದು ತೋರುತ್ತದೆ. ಅದರಿಂದ ಸಂಭವಿಸಬಹುದಾದ ವಿನಾಶಕಾರಿ ಪರಿಣಾಮಗಳು ಊಹಾತೀತವಾಗಿವೆ. ನಾವೆಲ್ಲರೂ ಮಾನವರನ್ನು ವಿಭಜಿಸುವ ಕೆಟ್ಟ ಶಕ್ತಿಗಳ ವಿರುದ್ಧ ಐಕ್ಯದಿಂದ ಹೋರಾಡೋಣ. ಶಾಂತಿ ಮತ್ತು ಸೌಹಾರ್ದದ ಹೆಸರಲ್ಲಿ ನಾವೆಲ್ಲರೂ ಒಗ್ಗೂಡೋಣ.

ಒಬ್ಬರಿನ್ನೊಬ್ಬರ ವಿರುದ್ಧ ದ್ವೇಷ ಮತ್ತು ಹಗೆತನವನ್ನು ಉತ್ತೇಜಿಸುವುದಕ್ಕೆ ಬದಲಾಗಿ ನಾವು ಶಾಂತಿ ಸ್ಥಾಪನೆಗೋಸ್ಕರ ಮತ್ತು ಪರಸ್ಪರ ಸೌಹಾರ್ದ ಸ್ಥಾಪಿಸಲು ಕಾರ್ಯನಿರತರಾಗಬೇಕು. ಎಲ್ಲ ಜನರು, ಎಲ್ಲ ಸಂಘಟನೆಗಳು ಒಟ್ಟಿಗೆ ಸೇರಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಲು ಪ್ರಯತ್ನಿಸಬೇಕು ಮತ್ತು ನಾವು ವಾಸಿಸುವ ಈ ಲೋಕವನ್ನು ಉತ್ತಮ ಮತ್ತು ಹಿಂದೆಂದಿಗಿಂತಲೂ ಹೆಚ್ಚು ಸೌಹಾರ್ದಮಯವನ್ನಾಗಿ ಮಾಡಲು ಕಠಿಣ ಪ್ರಯತ್ನ ಮಾಡಬೇಕು. ಎಲ್ಲ ಜನರು ನ್ಯಾಯ ಮತ್ತು ಸಹಿಷ್ಣುತೆಯೊಂದಿಗೆ ವರ್ತಿಸುವಂತೆ ಅಲ್ಲಾಹನು ಮಾಡಲಿ. ಲೋಕದಲ್ಲಿ ಶಾಂತಿಯು ಹೊರಹೊಮ್ಮುವಂತಾಗಲಿ. ಅಲ್ಲಾಹನು ಜನರಿಗೆ ವಿವೇಕ ದಯಪಾಲಿಸಲಿ. ನಾವು ನಮ್ಮ ಮಕ್ಕಳಿಗೆ ಮತ್ತು ಮುಂದಿನ ಪೀಳಿಗೆಗಳಿಗೆ ಬಿಟ್ಟು ಹೋಗುವ ಲೋಕವು ಶಾಂತಿಭರಿತ ಮತ್ತು ಸಮೃದ್ಧಿಯಿಂದ ಕೂಡಿದ ಲೋಕವಾಗಲಿ. (ಆಮೀನ್ – ಹಾಗೆಯೇ ಆಗಲಿ). ಕೊನೆಯದಾಗಿ, ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಆಗಮಿಸಿದ ಎಲ್ಲ ಅತಿಥಿಗಳಿಗೆ ಇನ್ನೊಮ್ಮೆ ಕೃತಜ್ಞತೆ ಅರ್ಪಿಸುತ್ತೇನೆ. ಅಲ್ಲಾಹನು ನಿಮಗೆ ಅನುಗ್ರಹ ದಯಪಾಲಿಸಲಿ. ನಿಮಗೆ ಧನ್ಯವಾದಗಳು.

**(The Review of Religions – October 2016 ಸಂಚಿಕೆಯಿಂದ.**
**ಭಾಷಾಂತರ: ಯಮ್. ಉಬೈದುಲ್ಲಾ)**

# ಮಾನವೀಯ ಮೌಲ್ಯಗಳ ಸಂರಕ್ಷಣೆ – ಶಾಂತಮಯ ಲೋಕದ ಅಸ್ತಿಭಾರ



**ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋಚ್ಚ ನಾಯಕ, ಪಂಚಮ ಖಲೀಫ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಒಟ್ಟೋವಾ (ಕೆನಡ)ದಲ್ಲಿ ನ್ಯಾಶನಲ್ ಪಾರ್ಲಿಮೆಂಟಿನಲ್ಲಿ 2016 ಒಕ್ಟೋಬರ್ ದಿನಾಂಕ 17ರಲ್ಲಿ ಮಾಡಿದ ಭಾಷಣ.**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್‌ರತ್ ಖಲೀಫರು ಹೀಗೆ ಭಾಷಣ ಪ್ರಾರಂಭಿಸಿದರು: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ – ಪರಮ ದಯಾವಂತನೂ ಕಾರುಣ್ಯ ನಿಧಿಯೂ ಆದ ಅಲ್ಲಾಹನ ನಾಮದಿಂದ (ಪ್ರಾರಂಭಿಸುತ್ತೇನೆ).

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ನನ್ನನ್ನು ಇಲ್ಲಿಗೆ ಆಮಂತ್ರಿಸಿದ ಎಲ್ಲರಿಗೂ ಮತ್ತು ವಿಶಿಷ್ಟವಾಗಿ ನಮ್ಮ ಸಂಘಟನೆಯ ನಿಕಟ ಸ್ನೇಹಿತೆ ಜ್ಯೂಡಿ ಎಸ್‌ಗ್ರೋರವರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಾನು ಒಬ್ಬ ರಾಜಕೀಯ ವ್ಯಕ್ತಿಯಾಗಲಿ, ಯಾವುದೇ ರಾಜಕೀಯ ಸಂಘಟನೆಯ ನಾಯಕನಾಗಲಿ ಅಲ್ಲ. ನಾನು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ನಾಯಕನಾಗಿದ್ದೇನೆ. ಅಹ್ಮದಿಯಾ ಜಮಾಅತ್ ಪರಿಪೂರ್ಣವಾಗಿ ಧಾರ್ಮಿಕವೂ ಆಧ್ಯಾತ್ಮಿಕವೂ ಆಗಿರುವ ಸಂಘಟನೆಯಾಗಿದೆ.

ಹೀಗಿದ್ದರೂ ನಮ್ಮ ಹಿನ್ನೆಲೆಗಳು ವಿಭಿನ್ನವಾಗಿದ್ದರೂ ಮಾನವೀಯ ಆಧಾರದಲ್ಲಿ ನಾವೆಲ್ಲರೂ ಒಟ್ಟಿಗೆ ಸೇರಿಸಲ್ಪಡುತ್ತಿದ್ದೇವೆ. ಆದುದರಿಂದ ನಮ್ಮಲ್ಲಿ ಐಕ್ಯಮತ್ಯವಿರಬೇಕಾಗಿದೆ. ಎಲ್ಲ ಜನರು ಮತ್ತು ಎಲ್ಲ ಸಂಘಟನೆಗಳು ಜೊತೆ ಸೇರಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಲು ಪ್ರಯತ್ನಿಸಬೇಕಾಗಿದೆ ಹಾಗೂ ನಾವು ವಾಸಿಸುತ್ತಿರುವ ಈ ಲೋಕವನ್ನು ಉತ್ತಮ ಮತ್ತು ಬಹಳ ಹೆಚ್ಚು ಸೌಹಾರ್ದಮಯವನ್ನಾಗಿ ಮಾಡಬೇಕಾಗಿದೆ. ಆದುದರಿಂದ ಒಂದು ದೇಶದಲ್ಲಿ ಮಾನವೀಯ ಮೌಲ್ಯಗಳು ಅನುಮೋದಿಸಲ್ಪಡುವುದಿಲ್ಲವಾದರೆ ಅದು ಲೋಕದ ಇತರ ಪ್ರದೇಶಗಳ ಕದಗಳನ್ನೂ ಬಡಿಯುತ್ತದೆ ಮತ್ತು ಅಂತಹ ಅಪರಾಧಗಳು ಇನ್ನಷ್ಟು ವ್ಯಾಪಕವಾಗ ಬಹುದಾಗಿದೆ. ತದ್ವಿರುದ್ಧವಾಗಿ, ಲೋಕದ ಒಂದು ಪ್ರದೇಶದಲ್ಲಿ ಒಳಿತು, ಮಾನವೀಯತೆ ಮತ್ತು ಅಭಿವೃದ್ಧಿ ಇದ್ದಲ್ಲಿ ಅದು ಅನ್ಯ ಪ್ರದೇಶದ ಜನರ ಮೇಲೆ ಸಕಾರಾತ್ಮಕ ಪ್ರಭಾವ ಬೀರುವುದು. ಆಧುನಿಕ ಸಂಪರ್ಕ ಮಾಧ್ಯಮಗಳ ಮತ್ತು ಸಂಚಾರ ವ್ಯವಸ್ಥೆಯ ಕಾರಣ ನಾವೆಲ್ಲರೂ ಈಗ ಬಹಳ ಸಮೀಪವಾಗಿದ್ದೇವೆ ಮತ್ತು ಭೌಗೋಳಿಕ ಕಾರಣಗಳಿಂದ ಬಂಧಿತರಾಗಿಲ್ಲ. ಆದರೆ ವಿಚಿತ್ರವೂ ದಾರುಣವೂ ಆಗಿರುವ ವಿರೋಧಾಭಾಸವೇನೆಂದರೆ ನಾವೆಲ್ಲರೂ ಈಗ ಹಿಂದೆಂದಿಗಿಂತಲೂ ಹೆಚ್ಚು ನಿಕಟವಾಗಿರುವೆವಾದರೂ ನಾವೆಲ್ಲರೂ ದಿನಗಳೆದಂತೆ ದೂರ ಸರಿದು ಹೋಗುತ್ತಿದ್ದೇವೆ. ಅತ್ಯಂತ ವಿಷಾದಕರವೂ ದುಃಖಕರವೂ ಆಗಿರುವ ವಿಷಯವೇನೆಂದರೆ ಮಾನವರ ಮಧ್ಯೆ ಐಕ್ಯತೆ ಮತ್ತು ಪರಸ್ಪರ ಪ್ರೀತಿಯನ್ನು ಹರಡುವ ಬಗ್ಗೆ ಗಮನ ಹರಿಸುವುದಕ್ಕೆ ಬದಲಾಗಿ ದ್ವೇಷ, ಕ್ರೌರ್ಯ ಮತ್ತು ಅನ್ಯಾಯ ಹರಡುವ ಬಗ್ಗೆ ಹೆಚ್ಚು ಗಮನಹರಿಸಲಾಗುತ್ತಿದೆ.

ಜನರು ತಮ್ಮ ವೈಯಕ್ತಿಕ ತಪ್ಪು ಕೃತ್ಯಗಳ ಬಗ್ಗೆ ಜವಾಬ್ದಾರಿ ಹೊರಲು ನಿರಾಕರಿಸುತ್ತಾರೆ ಮತ್ತು ಆ ಕಾರಣದಿಂದ ಪ್ರತಿಯೊಬ್ಬ ತಪ್ಪುಗಾರ ವ್ಯಕ್ತಿ ಅನ್ಯರನ್ನು ದೂಷಿಸುತ್ತಾನೆ ಮತ್ತು ಲೋಕದ ಸಂಘರ್ಷಗಳಿಗೆ ಮತ್ತು ಒಡಕುಗಳಿಗೆ ತನ್ನ ಹೊರತು ಬೇರೆ ಎಲ್ಲರೂ ಹೊಣೆಗಾರರೆಂದು ಅವರ ಮೇಲೆ ದೋಷಾರೋಪ ಮಾಡುತ್ತಾನೆ. ಈ ಕಾರಣಗಳಿಂದ ನಾವು ಬಹಳ ಅನಿಶ್ಚಿತವಾದ ಕಾಲಘಟ್ಟದಲ್ಲಿ ವಾಸಿಸುತ್ತಿದ್ದೇವೆ. ನಮ್ಮ ಕೆಲಸಗಳ ಪರಿಣಾಮ ಏನಾಗುವುದೆಂದು ಯಾರಿಗೂ ಮನವರಿಕೆ ಮಾಡಲು ಸಾಧ್ಯವಾಗುವುದಿಲ್ಲ. ಸದ್ಯೋಭವಿಷ್ಯದಲ್ಲಿ ಏನಾಗುವುದು, ದೀರ್ಘಕಾಲದ ನಂತರ ಏನಾಗುವುದೆಂದು ತಿಳಿಯದು.

ಇಂದಿನ ಕಾಲಘಟ್ಟದಲ್ಲಿ ಇಸ್ಲಾಮಿನ ಬಗ್ಗೆ ಭಯ ಲೋಕದ ಬಹುತೇಕ ಭಾಗದಲ್ಲಿ ವರ್ಧಿಸುತ್ತಿರುವಾಗ ನಾನು ನಿಮಗೆ ಖಾತರಿ ನೀಡುತ್ತೇನೆ– ಸಾಮಾನ್ಯವಾಗಿ ಸಾಮಾಜಿಕ ಜಾಲತಾಣಗಳಲ್ಲಿ ನೀವು ಕಾಣುವ ಮತ್ತು ಆಲಿಸುವ ಚಿತ್ರದ ರೀತಿಯಲ್ಲಿ ನೈಜ ಇಸ್ಲಾಮ್ ಅಲ್ಲ. ಇಸ್ಲಾಮ್ ಧರ್ಮದ ಬಗ್ಗೆ ನಾನು ತಿಳಿದುಕೊಂಡಿರುವುದೇನೆಂದರೆ ಇಸ್ಲಾಮ್ ಧರ್ಮದ ಉಪದೇಶಗಳು ಆ ಧರ್ಮದ ಹೆಸರಾದ ಇಸ್ಲಾಮ್ ಪ್ರಕಾರವೇ ಆಗಿದೆ. ಇಸ್ಲಾಮ್ ಎಂಬ ಪದದ ಶಬ್ದಾರ್ಥ ಶಾಂತಿ, ಪ್ರೀತಿ ಮತ್ತು ಸೌಹಾರ್ದ ಎಂದಾಗಿದೆ. ಇಸ್ಲಾಮ್ ಧರ್ಮದ ಎಲ್ಲ ಉಪದೇಶಗಳು ಈ ಶ್ರೇಷ್ಠ ಮೌಲ್ಯಗಳ ಅಸ್ತಿಭಾರದ ಮೇಲಿದೆ. ಆದರೆ ದುರದೃಷ್ಟಕರವಾಗಿ ಕೆಲವು ಮುಸ್ಲಿಮ್ ಗುಂಪುಗಳ ನಂಬಿಕೆಗಳು ಮತ್ತು ಕೃತ್ಯಗಳು ಸಂಪೂರ್ಣವಾಗಿ ಈ ಮೌಲ್ಯಗಳಿಗೆ ವಿರುದ್ಧವಾಗಿವೆ ಎಂಬುದನ್ನು ನಿರಾಕರಿಸಲಾಗದು. ಇಸ್ಲಾಮ್ ಧರ್ಮದ ಮೂಲಭೂತ ಉಪದೇಶಗಳಿಗೆ ಸಂಪೂರ್ಣ ವಿರುದ್ಧವಾಗಿ ಅವರು ಭಯಾನಕ ಭೀಕರ ಹಿಂಸಾಚಾರದ ಕೃತ್ಯಗಳನ್ನು ನಡೆಸುತ್ತಿದ್ದಾರೆ. ಇವುಗಳಿಗೆಲ್ಲ ಸಂಬಂಧಿಸಿ ಇಸ್ಲಾಮ್ ಧರ್ಮದ ನೈಜ ಶಾಂತಿಭರಿತ ತತ್ವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ನಾನು ಬಯಸುತ್ತೇನೆ.

ಈ ಗೌರವಾನ್ವಿತ ಸ್ಥಳಕ್ಕೆ ನೀವು ನನ್ನನ್ನು ಆಮಂತ್ರಿಸಿರುವಿರಿ. ಇದು ಧಾರ್ಮಿಕ ಸ್ಥಳವಲ್ಲ ಮತ್ತು ನಿಮ್ಮಲ್ಲಿ ಅನೇಕ ಜನರು ಧರ್ಮದ ಬಗ್ಗೆ ಪ್ರಾಯಶಃ ಆಸಕ್ತಿ ಹೊಂದದೆ ಇರಬಹುದು. ಆದರೆ ನೀವು ನಿಯಮ ನಿರ್ಮಾಪಕರಾಗಿರುವುದರಿಂದ ಕೆಲವು ಸಾರಿ ನೀವು ಧರ್ಮದ ಅನುಯಾಯಿಗಳಿಗೆ ಸಂಬಂಧಿಸಿ ನಿಯಮ ನಿರ್ಮಾಣ ಮಾಡಲಿಕ್ಕಿರುತ್ತದೆ. ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 257ರಲ್ಲಿ ಹೀಗೆ ಹೇಳುತ್ತದೆ: "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ." ಇದು ಎಷ್ಟು ಸ್ಪಷ್ಟ, ಸಮಗ್ರ ಮತ್ತು ಅಸಂದಿಗ್ಧ ಹೇಳಿಕೆಯಾಗಿದೆ! ಇದು ಚಿಂತನೆಯ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ ಮತ್ತು ಮನಸ್ಸಾಕ್ಷಿಯ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತದೆ. ಆದುದರಿಂದ ನನ್ನ ನಂಬಿಕೆ ಮತ್ತು ತತ್ವವೇನೆಂದರೆ ಪ್ರತಿಯೊಂದು ಗ್ರಾಮ, ಪಟ್ಟಣ, ನಗರ ಅಥವಾ ದೇಶದಲ್ಲಿ ವಾಸಿಸುವ ಪ್ರತಿಯೊಬ್ಬನಿಗೆ ತನ್ನ ಧರ್ಮವನ್ನು ಆಯ್ಕೆಮಾಡಿ ಅದರ ತತ್ವಗಳನ್ನು ಅನುಷ್ಠಾನಕ್ಕೆ ತರುವ ವಿವಾದೀತ ಹಕ್ಕು ಇದೆ. ಅಷ್ಟೇ ಅಲ್ಲ, ಪ್ರತಿಯೊಬ್ಬನಿಗೆ ಶಾಂತಿಯುತವಾಗಿ ತನ್ನ ಧರ್ಮವನ್ನು ಪ್ರಚಾರ ಮಾಡುವ ಹಕ್ಕು ಇದೆ. ಈ ಸ್ವಾತಂತ್ರ್ಯಗಳನ್ನು ಮಾನವನ ಮೂಲಭೂತ ಹಕ್ಕುಗಳೆಂದು ಖಾತರಿ ನೀಡಬೇಕು. ಆದುದರಿಂದ ನ್ಯಾಯ ವಿಧಾಯಕ ಸಭೆಗಳು ಅಥವಾ ಸರಕಾರಗಳು ಇಂತಹ ವಿಷಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಾರದು. ಅಂತಹ ಹಸ್ತಕ್ಷೇಪ ಜನರನ್ನು ರೇಗಿಸುವ ಕಾರಣವಾಗಬಹುದು ಮತ್ತು ನಿಸ್ಸಹಾಯಕತೆ ಕೋಪ ಬರಿಸುವಂತಹದಾಗಬಹುದು. ದುಃಖಕರವಾಗಿ, ಇಂದಿನ ಕಾಲದಲ್ಲಿ ಲೋಕದಲ್ಲಿ ಮುಸ್ಲಿಮ್ ಸರಕಾರಗಳು ಇಂತಹ ವೈಯಕ್ತಿಕ ವಿಷಯಗಳಲ್ಲಿ ಹಸ್ತಕ್ಷೇಪ ನಡೆಸುತ್ತಿವೆ. ಮುಸ್ಲಿಮ್ ದೇಶಗಳಲ್ಲಿರುವ ಅಸ್ಥಿರತೆಗೆ ಮತ್ತು ಸಂಘರ್ಷಗಳಿಗೆ ಇದು ಮೂಲ ಕಾರಣವಾಗಿರುತ್ತದೆ. ಉಗ್ರವಾದಿ ಧಾರ್ಮಿಕ ಮತಪಂಡಿತರು ಮತ್ತು ವಿದ್ರೋಹಿಗಳು ಜನರ ಅತೃಪ್ತಿಯ ಲಾಭ ಪಡೆದು ಬರ್ಬರ ಹಿಂಸಾ ಕೃತ್ಯಗಳನ್ನೂ ಬುದ್ಧಿಹೀನವಾದ ಸಂಘರ್ಷಗಳನ್ನೂ ಪ್ರೋತ್ಸಾಹಿಸುತ್ತಾರೆ. ಆದರೆ ತಾವು ನೈಜ ಪ್ರಜಾಪ್ರಭುತ್ವವಾದಿಗಳೆಂದು ಹೇಳಿಕೊಳ್ಳಲು ಪಾಶ್ಚಿಮಾತ್ಯ ಸರಕಾರಗಳು ಸಂಪೂರ್ಣವಾಗಿ ನಿಷ್ಕಳಂಕರೋ ನಿರ್ದೋಷಿಗಳೋ ಅಲ್ಲ. ಪಶ್ಚಿಮದ ದೇಶಗಳಲ್ಲಿ ಸಾರ್ವತ್ರಿಕ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಹಿಷ್ಣುತೆಯ ಮಾರ್ಗದರ್ಶಕ ಜ್ಯೋತಿ ತಾವೆಂದು ವಾದಿಸುವ ದೇಶಗಳಲ್ಲಿ ಕೂಡ ಅದಕ್ಕೆ ವಿರುದ್ಧವಾದ ನಿಯಮಗಳು ಜಾರಿಗೊಳಿಸಲ್ಪಡುವುದನ್ನು ನಾವು ಕಾಣುತ್ತೇವೆ.

ಕೆಲವು ಸಾರಿ ಈ ದೇಶಗಳಲ್ಲಿ ಎಂತಹ ನಿಯಮಗಳು ರಚಿಸಲ್ಪಡುತ್ತವೆ ಎಂದರೆ ಪಶ್ಚಿಮದ ದೇಶದಲ್ಲಿ ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀ ತನಗೆ ಇಷ್ಟವಿರುವ ಧರ್ಮವನ್ನು ನಂಬಿ ಆ ಧರ್ಮದ ನಂಬಿಕೆಗಳಿಗೆ ಅನುಸಾರವಾಗಿ ಶಾಂತಿಯುತವಾಗಿ ಜೀವಿಸುವ ಸ್ವಾತಂತ್ರ್ಯವಿದೆ ಎಂಬ ಅಭಿಪ್ರಾಯಕ್ಕೆ ವಿರುದ್ಧವಾಗಿರುತ್ತದೆ. ಜನರ ಮೂಲಭೂತ ನಂಬಿಕೆಗಳಿಗೆ ಮತ್ತು ಅನುಷ್ಠಾನ ಕರ್ಮಗಳಿಗೆ ನಿಯಂತ್ರಣವನ್ನು ಸರಕಾರ ಹೇರುವುದು ವಿವೇಚನೆ ರಹಿತವಾದ ಕೆಲಸವಾಗಿದೆ. ಉದಾಹರಣೆಗೆ, ಮಹಿಳೆ ಯಾವ ರೀತಿಯಲ್ಲಿ ವಸ್ತ್ರಧಾರಣೆ ಮಾಡಬೇಕೆಂಬುದರ ಬಗ್ಗೆ ಸರಕಾರ ಕಾಳಜಿ ವಹಿಸಬಾರದು. ಒಂದು ಆರಾಧನಾಲಯ ಯಾವ ರೀತಿಯಲ್ಲಿರಬೇಕೆಂದು ಸಹ ಸರಕಾರ ಆಜ್ಞೆ ಜಾರಿಗೊಳಿಸಬಾರದು. ಸರಕಾರಗಳು ಈ ರೀತಿ ಮಿತಿಮೀರಿ ವರ್ತಿಸುವುದಾದರೆ ಜನರಲ್ಲಿ ಅಸ್ವಸ್ಥತೆ ಮತ್ತು ನಿರಾಶೆಯ ಮನೋಭಾವ ವರ್ಧಿಸುವುದಕ್ಕೆ ಕಾರಣವಾಗುವುದು. ಇಂತಹ ಬೇಗುದಿಗಳು ವರ್ಧಿಸುತ್ತಾ ಕೊನೆಗೆ ಸಮಾಜದಲ್ಲಿ ಶಾಂತಿಗೆ ಬೆದರಿಕೆ ಒಡ್ಡುವುದು.ಆದರೆ ನಾನು ಹೇಳಿದುದರ ಉದ್ದೇಶ ತೀವ್ರವಾದಿ ಭಾವನೆಗಳನ್ನು ಸಹಿಸಬೇಕೆಂದಾಗಲೀ ಅವರಿಗೆ ತಮ್ಮ ತೀವ್ರವಾದಿ ನಂಬಿಕೆಗಳನ್ನು ಅನುಸರಿಸಲು ಸ್ವಾತಂತ್ರವಿದೆ ಎಂದಾಗಲೀ ಅಲ್ಲ.

ಒಬ್ಬನು ಯಾವಾಗಲಾದರೂ ಎಲ್ಲಿಯಾದರೂ ತನ್ನ ಕ್ರೌರ್ಯಕೃತ್ಯಗಳನ್ನು, ಅನ್ಯಾಯಭರಿತ ವರ್ತನೆಗಳನ್ನು, ಅಥವಾ ಅನ್ಯರ ಹಕ್ಕುಗಳನ್ನು ಕಸಿದುಕೊಳ್ಳುವುದನ್ನು, ದೇಶ ವಿರುದ್ಧ ಕೃತ್ಯಗಳನ್ನು ನಡೆಸಲು, ದೇಶದ ಭದ್ರತೆಗೆ ಹಾನಿಯನ್ನುಂಟುಮಾಡಲು ತನ್ನ ಧರ್ಮದ ಮೂಲಕ ಸಮರ್ಥಿಸಲು ಪ್ರಯತ್ನಿಸುವನಾದರೆ ಅಂತಹ

ಸಂದರ್ಭಗಳಲ್ಲಿ ಸರಕಾರಗಳು, ಪಾರ್ಲಿಮೆಂಟ್ ಸದಸ್ಯರು ಮತ್ತು ಸಂಬಂಧಿತ ಅಧಿಕಾರಿಗಳು ಅಂತಹ ಉಗ್ರವಾದಿಗಳನ್ನು ಕಿತ್ತೆಸೆಯಲು ಮತ್ತು ಶಿಕ್ಷಿಸಲು ತಮ್ಮ ದೇಶದ ನಿಯಮಗಳನ್ನು ಬಳಸಬೇಕು. ಆದರೆ ನನ್ನ ಅಭಿಪ್ರಾಯವೇನೆಂದರೆ ಶಾಂತಿಯುತವಾಗಿ ಧರ್ಮ ಪ್ರಕಾರ ಅನುಷ್ಠಾನ ಕರ್ಮಗಳನ್ನು ಮಾಡುವುದಕ್ಕೆ ಸಂಬಂಧಿಸಿ ಸರಕಾರ ಹಸ್ತಕ್ಷೇಪ ಮಾಡಬಾರದು. ನಮಗೆ ತಿಳಿದಿರುವ ಮತ್ತು ನಾವು ಅನುಷ್ಠಾನಕ್ಕೆ ತರುತ್ತಿರುವ ಇಸ್ಲಾಮ್ ಧರ್ಮ ಕಲಿಸುವುದೇನೆಂದರೆ ದೇಶ ಪ್ರೇಮ ಮುಸ್ಲಿಮನ ಧರ್ಮದ ಮಹತ್ವಪೂರ್ಣ ಅಂಶವಾಗಿದೆ. ಇಸ್ಲಾಮ್ ಧರ್ಮದ ಪ್ರಕಾರ ಮುಸ್ಲಿಮನು ಯಾವ ದೇಶದಲ್ಲಿ ಜೀವಿಸುತ್ತಿರುವನೋ ಮತ್ತು ಯಾವುದರಿಂದ ಪ್ರಯೋಜನ ಪಡೆಯುತ್ತಿರುವನೋ ಅದೇ ಅವನ ದೇಶವಾಗಿದೆ. ಇಂತಹ ಉಪದೇಶ ಮುಸ್ಲಿಮನ ಹೃದಯದಲ್ಲಿ ಮತ್ತು ಮನಸ್ಸಿನಲ್ಲಿ ಆಳವಾಗಿ ಬೇರುಬಿಟ್ಟರೆ ಅವನಿಗೆ ತನ್ನ ದೇಶದ ವಿರುದ್ಧ ಯಾವುದಾದರೂ ಹಾನಿಯನ್ನು ಬಯಸುವುದು ಅಸಾಧ್ಯವಾಗುತ್ತದೆ.

ಇಸ್ಲಾಮ್ ಧರ್ಮ ಉಪದೇಶಿಸುವುದೇನೆಂದರೆ ತಮ್ಮ ದೇಶದ ವಿರುದ್ಧ ವರ್ತಿಸುವವನನ್ನು ಆ ದೇಶದ ನಿಯಮಗಳ ಪ್ರಕಾರ ಶಿಕ್ಷಿಸಬೇಕಲ್ಲದೆ ಅಂತಹ ಜನರು ನಿಶ್ಚಯವಾಗಿಯೂ ಸರ್ವಶಕ್ತನಾದ ದೇವನ ಆಸ್ಥಾನವನ್ನು ಪ್ರವೇಶಿಸುವಾಗ ಅವರ ಅಪರಾಧಗಳಿಗೋಸ್ಕರ ಮತ್ತು ಅವರ ದೇಶ ದ್ರೋಹಕ್ಕೋಸ್ಕರ ಶಿಕ್ಷಿಸಲ್ಪಡುವರು. ಆದುದರಿಂದ ನೈಜ ಮುಸ್ಲಿಮನ ಬಗ್ಗೆ ಹೆದರಬೇಕಾಗಿಲ್ಲ ಮತ್ತು ಮುಸ್ಲಿಮರ ಚಿಕ್ಕಪುಟ್ಟ ಅನುಷ್ಠಾನ ಕರ್ಮಗಳನ್ನು ನಿಯಂತ್ರಿಸಲು ಸರಕಾರಗಳು ನಿಯಮಗಳನ್ನು ಜಾರಿಗೊಳಿಸಬೇಕಾದ ಆವಶ್ಯಕತೆಗಳಿಲ್ಲ. ಏಕೆಂದರೆ ಮುಸ್ಲಿಮರ ಅಂತಹ ಅನುಷ್ಠಾನ ಕರ್ಮಗಳು ಸಾರ್ವಜನಿಕರಿಗೆ ಅಥವಾ ಸರಕಾರದ ಸದಸ್ಯರಿಗೆ ಹಾನಿಕರವಾಗಿರುವುದಿಲ್ಲ. ಇಂತಹ ವಿಷಯಗಳಿಗೆ ಸಂಬಂಧಿಸಿ ಸರಕಾರಗಳು ನಿಯಮಗಳನ್ನು ರಚಿಸುವುದು ಅನಾವಶ್ಯಕ ಹಸ್ತಕ್ಷೇಪವೆಂದೇ ವರ್ಣಿಸಲು ಸಾಧ್ಯ. ಪ್ರತಿಯೊಬ್ಬ ವ್ಯಕ್ತಿಗೆ ಸ್ವಾತಂತ್ರ್ಯದೊಂದಿಗೆ ಮತ್ತು ವೈಯಕ್ತಿಕ ಸ್ವಾಯತ್ತತೆಯೊಂದಿಗೆ ಜೀವಿಸಬಹುದೆಂದು ಘೋಷಿಸುವ ಪಾಶ್ಚಿಮಾತ್ಯ ತತ್ವಗಳಿಗೆ ಇಂತಹ ಹಸ್ತಕ್ಷೇಪ ವಿರುದ್ಧವಾಗಿದೆ. ನಿಸ್ಸಂಶಯವಾಗಿ ಇಂತಹ ಅನ್ಯಾಯಕರ ಹಸ್ತಕ್ಷೇಪದಿಂದ ಯಾವುದೇ ಸಕಾರಾತ್ಮಕ ಪರಿಣಾಮ ಉಂಟಾಗಲಾರದು. ಅಂತಹ ಹಸ್ತಕ್ಷೇಪ ನಿರಾಶೆಯನ್ನೂ ಅಸ್ವಸ್ಥತೆಯನ್ನೂ ಸಂಘರ್ಷವನ್ನೂ ಸೃಷ್ಟಿಸುವುದು. ಸರಕಾರ ಮತ್ತು ಪಾರ್ಲಿಮೆಂಟ್ ಸದಸ್ಯರು ಮಾಡಬೇಕಾದ ಕೆಲಸ, ಅವರು ತಮ್ಮ ದೇಶಗಳ ರಕ್ಷಕರಾಗಿರುವ ಕಾರಣ ಅವರು ಜನರಿಗೆ ಹಕ್ಕುಗಳನ್ನು ನೀಡುವ ನಿಯಮಗಳನ್ನು ನಿರ್ಮಿಸಬೇಕೇ ಹೊರತು ಜನರ ಹಕ್ಕುಗಳನ್ನು ಕಿತ್ತುಕೊಳ್ಳುವ ನಿಯಮಗಳನ್ನಲ್ಲ. ನಿಯಮಗಳು ನಿಷ್ಪಕ್ಷಪಾತಿಯಾಗಿರಬೇಕು. ಎಲ್ಲ ಜನರ ಹಕ್ಕುಗಳನ್ನು – ಅವರು ಮುಸ್ಲಿಮರಾಗಿರಲಿ, ಕ್ರೈಸ್ತರಾಗಿರಲಿ, ಯಹೂದಿಯರಾಗಿರಲಿ, ಹಿಂದುಗಳಾಗಿರಲಿ, ಬೇರೆ ಯಾವುದೇ ಧರ್ಮದವರಾಗಿರಲಿ, ನಾಸ್ತಿಕರಾಗಿರಲಿ ಅವರೆಲ್ಲರ ಹಕ್ಕುಗಳನ್ನು ಖಾತರಿ ಪಡಿಸುವವುಗಳಾಗಿರಬೇಕು.

ನಾನು ಹಿಂದೆ ಹೇಳಿದ ಪ್ರಕಾರ ಅತ್ಯಂತ ದುಃಖಕರ ವಾದುದೇನೆಂದರೆ, ಮುಸ್ಲಿಮ್ ದೇಶಗಳ ಮತ್ತು ಅಭಿವೃದ್ಧಿ ಹೊಂದಿದ ಕೆಲವು ಮುಸ್ಲಿಮೇತರ ದೇಶಗಳಲ್ಲಿ ಎಂತಹ ಧೋರಣೆಗಳು ರೂಪಿಸಲ್ಪಟ್ಟಿವೆ ಎಂದರೆ ಅವು ಮೂಲಭೂತ ಸ್ವಾತಂತ್ರ್ಯಗಳನ್ನು ದುರ್ಬಲಗೊಳಿಸಿವೆ ಮತ್ತು ಆ ಕಾರಣಗಳಿಂದ ಜನ ವಿಭಾಗಗಳಲ್ಲಿ ಅತೃಪ್ತಿ ಉಂಟು ಮಾಡಿವೆ. ಆದುದರಿಂದ ಈ ದೇಶದ ಸರಕಾರಗಳು ಕೇವಲ ಮೆಚ್ಚುಗೆಯ ಕರತಾಡನಗಳನ್ನು ಆಶಿಸದೆ ಅವರು ಅದಕ್ಕಿಂತ ಮಹತ್ವಪೂರ್ಣವಾದ ವಿಷಯಗಳ ಕಡೆಗೆ ಗಮನಹರಿಸಿ ತಮ್ಮ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸುವ ಬಗ್ಗೆ ಮತ್ತು ಲೋಕವು ಐಕ್ಯದಿಂದ ಪ್ರಗತಿ ಪಡೆಯುವ ಬಗ್ಗೆ ಪ್ರಯತ್ನಿಸಬೇಕಾಗಿದೆ. ಆದರೆ ದುರದೃಷ್ಟಕರವಾಗಿ, ದೀರ್ಘ ದೃಷ್ಟಿಯ ಪ್ರಕಾರ ಕೆಲಸ ಮಾಡದೆ ಬಹುತೇಕ ನಾಯಕರು ಮತ್ತು ಸರಕಾರಗಳು ಅಧಿಕಾರಕ್ಕೋಸ್ಕರ ಮತ್ತು ಅನ್ಯರ ಮೇಲೆ ಜಯಗಳಿಸಲು ಅನಾರೋಗ್ಯಕರವಾದ ಸ್ಪರ್ಧೆಯಲ್ಲಿ ಸೇರಿದ್ದಾರೆ. ಅವರು ತಮ್ಮ ನಾಗರಿಕರ ವೈಯಕ್ತಿಕ ಮತ್ತು ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿ ಹಸ್ತಕ್ಷೇಪ ಮಾಡಲು, ದೇಶದಲ್ಲಿ ಪ್ರಾಬಲ್ಯ ಮತ್ತು ಹತೋಟಿ ಪಡೆಯುವ ಬಗ್ಗೆ ಅವರಿಗಿರುವ ಅದಮ್ಯ ದಾಹದ ಕಾರಣದಿಂದ ಹೆಚ್ಚು ಹೆಚ್ಚಾಗಿ ಒಲವನ್ನು ಹೊಂದುತ್ತಿದ್ದಾರೆ. ಇಂತಹ ಧೋರಣೆಗಳು ಅವಿವೇಕದವುಗಳಾಗಿದೆ. ಲೋಕದ ಶಾಂತಿಗೆ ಬೆದರಿಕೆಯೊಡ್ಡುವ ಅನೇಕ ವಿಷಯಗಳನ್ನು ನಾವು ಎದುರಿಸುತ್ತಿರುವಾಗ ಇಂತಹ ಧೋರಣೆಗಳು ಅನಾವಶ್ಯಕವಾಗಿವೆ. ಉದಾಹರಣೆಗೆ, ಹವಾಮಾನದ ವೈಪರೀತ್ಯ ನಮ್ಮ ನಾಗರಿಕತೆಗೆ ಬೆದರಿಕೆ ಒಡ್ಡುತ್ತಿದೆ ಎಂದು ಹೇಳಲಾಗುತ್ತಿದೆ. ಇನ್ನೊಂದು ವಿಷಯ ಲೋಕದಲ್ಲಿ ಸಂಭವಿಸಿರುವ ಆರ್ಥಿಕ ಅಸ್ಥಿರತೆಯಾಗಿದೆ. ಇದಲ್ಲದೆ, ಲೋಕದ ಅನೇಕ ಭಾಗಗಳಲ್ಲಿ ಅಶಾಂತಿ ಮತ್ತು ಅಭದ್ರತೆ ವರ್ಧಿಸುತ್ತಾ ಇದೆ. ಅನ್ಯಾಯಕರವಾದ ಧೋರಣೆಗಳು, ಅಸಮಾನತೆ ಮತ್ತು ಅಸಂತುಲತೆಗಳು ಇವುಗಳಿಗೆ ಕಾರಣಗಳಾಗಿವೆ. ಹವಾಮಾನ ವೈಪರೀತ್ಯದ ಬಗ್ಗೆ ಹೇಳುವುದಾದರೆ ಪಶ್ಚಿಮದ ದೇಶಗಳಲ್ಲಿ ನಡೆದಿರುವ ಕೈಗಾರಿಕೆಗಳ ಕ್ರಾಂತಿ ಮತ್ತು ಅತ್ಯಧಿಕ ಕಾಡುಗಳ ಧ್ವಂಸ ಇದಕ್ಕೆ ಕಾರಣಗಳಾಗಿವೆ.

ಸಂಪೂರ್ಣ ಅಭಿವೃದ್ಧಿಗೊಂಡ ದೇಶಗಳು ಮಾತ್ರ ಈಗ ಕಾರ್ಬನ್ ವಿಸರ್ಜನೆಯನ್ನು ಕಮ್ಮಿ ಮಾಡಲು ಮತ್ತು ಇತರ ನಿಯಂತ್ರಣಗಳನ್ನು ಹೇರಲು ಸಂತೋಷಪಡುತ್ತವೆ. ಆದರೆ ಇಂತಹ ನಿಯಂತ್ರಣಗಳು ಇಂಡಿಯಾ ಮತ್ತು ಚೀನಾದಂತಹ ಅಭಿವೃದ್ಧಿಶೀಲ ದೇಶಗಳ ಪ್ರಗತಿಯನ್ನು ನಿಧಾನಗೊಳಿಸಬಹುದು ಅಥವಾ ತಡೆಗಟ್ಟಬಹುದು. ಆದುದರಿಂದ ಈ ಅಭಿವೃದ್ಧಿಶೀಲ ದೇಶಗಳು ಇಂತಹ ಹತೋಟಿಗಳನ್ನು ಕಾಪಟ್ಯಮಯವೆಂದೂ ಅನುಚಿತವೆಂದೂ ತಮ್ಮ ಪ್ರಗತಿಯನ್ನು ತಡೆಯಲು ಚಾರಿತ್ರಿಕವಾಗಿ ಪ್ರಬಲವಾಗಿರುವ ದೇಶಗಳು ಮಾಡುವ ಪ್ರಯತ್ನಗಳೆಂದೂ ಜಾಗತಿಕ ವ್ಯವಸ್ಥೆಗೆ ಪಂಥಾಹ್ವಾನ ನೀಡುವುದನ್ನು ತಡೆಗಟ್ಟುವುದೇ ಅವರ ಉದ್ದೇಶವೆಂದೂ ಗಣಿಸಬಹುದು. ಈ ರೀತಿ ಹವಾಮಾನ ವೈಪರೀತ್ಯದ ಪ್ರಶ್ನೆ ಕೇವಲ ವಾತಾವರಣಕ್ಕೆ ಸಂಬಂಧಿಸಿದ ವಿಷಯಕ್ಕೆ ಸೀಮಿತಗೊಳ್ಳದೆ ಅದು ಜಾಗತಿಕ ಅಶಾಂತಿಗೆ ಮತ್ತು ದೇಶಗಳ ಮಧ್ಯೆ ವರ್ಧಿಸುತ್ತಿರುವ ಅತೃಪ್ತಿಗೆ ಹೇತುವಾಗುತ್ತಿದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟು ಬಗ್ಗೆ ಅನೇಕ ತಜ್ಞರು ಹೇಳುವುದೇನೆಂದರೆ ಸರಕಾರಗಳು ವಿವೇಕ ರಹಿತವಾಗಿ ಧೋರಣೆಗಳನ್ನು ರೂಪಿಸಿದುದರಿಂದ ಇದು ಸಂಭವಿಸಿದೆ ಹಾಗೂ ಇಂದಿನ ಆರ್ಥಿಕ ಅಸ್ಥಿರತೆ ಎಂತಹ ಮಟ್ಟವನ್ನು ತಲಪಿದೆ ಎಂದರೆ ಅದು ಜಾಗತಿಕ ಶಾಂತಿಗೆ ಬೆದರಿಕೆ ಒಡ್ಡುತ್ತಿದೆ. ಲೋಕದಲ್ಲಿರುವ ಅಶಾಂತಿಗೆ ಬೇರೆ ಕೆಲವು ಕಾರಣಗಳು ಸಹ ತಮ್ಮ ಕೊಡುಗೆ ನೀಡುತ್ತಿವೆ. ಕೆಲವು ದೇಶಗಳು ಸ್ವಾರ್ಥಮಯ ಅನ್ಯಾಯಭರಿತ ಧೋರಣೆಗಳನ್ನು ಜಾರಿಗೊಳಿಸಿದ ಕಾರಣ ಇದು ಸಂಭವಿಸಿರುವುದೆಂಬುದು ವಿಷಾದಕರವಾಗಿದೆ. ಒಟ್ಟಾರೆ ಹೇಳುವುದಾದರೆ, ಅನೇಕ ಅಪಾಯಗಳ ಮತ್ತು ಜಾಗತಿಕ ಬೆದರಿಕೆಗಳ ಅಂತಿಮ ಪರಿಣಾಮವಾಗಿ ಲೋಕವು ಊಹಾತೀತ ದುರಂತಕ್ಕೆ ವೇಗವಾಗಿ ಸಾಗುತ್ತಿದೆ. ಇಂದಿನ ಕಾಲದ ಅಸ್ಥಿರತೆಯ ಕಾರಣದಿಂದ ವಿವಿಧ ದೇಶಗಳ ಸರಕಾರಗಳು ಮತ್ತು ಸಾರ್ವಜನಕರು ಹೆಚ್ಚು ಹೆಚ್ಚು ಆತಂಕಭರಿತರಾಗುತ್ತಿದ್ದಾರೆ.

ಅನೇಕ ತೊಂದರೆದಾಯಕ ವಿಷಯಗಳಿರುವುದರಿಂದ ಯಾವುದಕ್ಕೆ ಆದ್ಯತೆ ನೀಡಬೇಕೆಂದು ಲೋಕ ತಿಳಿಯುವುದಿಲ್ಲ. ಜಾಗತಿಕ ತಾಪ ವರ್ಧನೆ ಬಗ್ಗೆ ಮತ್ತು ಹವಾಮಾನ ವೈಪರೀತ್ಯದ ಬಗ್ಗೆ ಮೊದಲು ಗಮನವನ್ನು ಕೇಂದ್ರೀಕರಿಸಬೇಕೋ? ಅಥವಾ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಗಮನ ಹರಿಸಬೇಕೋ? ಅಥವಾ ಭಯೋತ್ಪಾದನೆ, ಯುದ್ಧ ಮತ್ತು ತೀವ್ರವಾದದ ಕಡೆಗೆ ಗಮನ ಹರಿಸಬೇಕೋ? ಅಥವಾ ಸಿರಿಯಾದ ಕಡೆಗೆ ಗಮನ ಹರಿಸಬೇಕೋ? ಅಲ್ಲಿ ಅಮೇರಿಕ ಮತ್ತು ರಶ್ಯ ಬಹಿರಂಗವಾಗಿ ಒಬ್ಬರಿನ್ನೊಬ್ಬರನ್ನು ಎದುರಿಸುತ್ತಿದ್ದಾರೆ. ಅಥವಾ ಇತ್ತೀಚೆಗೆ ನಡೆದ ಯು.ಎಸ್.ಎ. ಮತ್ತು ಯೆಮನ್ ಮಧ್ಯದ ಹೋರಾಟದ ಕಡೆಗೆ ಗಮನ ಹರಿಸಬೇಕೋ?

ನನ್ನ ಅಭಿಪ್ರಾಯದಲ್ಲಿ ಅತ್ಯಂತ ತುರ್ತಾಗಿ ಗಮನ ಹರಿಸಬೇಕಾದುದು ಲೋಕದಲ್ಲಿ ಅಶಾಂತಿ ಹರಡಿರುವ ಬಗ್ಗೆಯಾಗಿದೆ. ಅತ್ಯಂತ ದುಃಖಕರವಾದ ವಿಷಯವೇನೆಂದರೆ, ಮುಸ್ಲಿಮರ ಧರ್ಮ ಅವರಿಗೆ ಶಾಂತಿ ಸ್ಥಾಪನೆ ಬಗ್ಗೆ ಅಪ್ರತಿಮ ಉಪದೇಶ ನೀಡಿದ್ದರೂ ಮುಸ್ಲಿಮ್ ದೇಶಗಳೇ ಅಸ್ಥಿರತೆ ಮತ್ತು ಅವ್ಯವಸ್ಥೆಯ ಕೇಂದ್ರಗಳಾಗಿ ಈಗ ಪರಿಣಮಿಸಿವೆ. ಉದಾಹರಣೆಗೆ, ಪವಿತ್ರ ಖುರ್‌ಆನ್ ಅಧ್ಯಾಯ 23 ವಚನ 9ರಲ್ಲಿ ಹೀಗೆ ಹೇಳಿದೆ: "ಅವರು (ಸತ್ಯ ವಿಶ್ವಾಸಿ ಮುಸ್ಲಿಮರು) ತಮ್ಮ ಅಮಾನತ್ತು ಮತ್ತು ಒಡಂಬಡಿಕೆಗಳ ಬಗ್ಗೆ ಲಕ್ಷ್ಯವುಳ್ಳವರು." ಸರಕಾರದ ಕೀಲಿಗೈ ದೊರಕುವುದು ಒಂದು ಅಮಾನತ್ ಅಥವಾ ವಿಶ್ವಸ್ತ ನಿಧಿಯಾಗಿದೆ. ದೇಶದ ಸರಕಾರದ ನಾಯಕರು ದೇಶಕ್ಕೆ ಸೇವೆ ಮಾಡುವುದಾಗಿ ಪ್ರಮಾಣ ವಚನ ಹೇಳುವುದನ್ನು ನಾವು ಕಾಣುತ್ತೇವೆ. ಅವರು ನಿಷ್ಠಾವಂತರಾಗಿ ನ್ಯಾಯಪಾಲನೆ ಮಾಡುವುದಾಗಿ ಪ್ರಮಾಣ ಮಾಡುತ್ತಾರೆ.ದುಃಖಕರವಾದುದೇನೆಂದರೆ, ಅನೇಕ ಸಂದರ್ಭಗಳಲ್ಲಿ ಈ ಪ್ರಮಾಣ ವಚನಗಳು ಪೊಳ್ಳು ಮಾತುಗಳೆಂದು ಸಾಬೀತಾಗುತ್ತದೆ.ಆ ಪ್ರಮಾಣ ವಚನಗಳಿಗೆ ಅವರು ಬದ್ಧರಾಗುವುದಿಲ್ಲ. ಆದರೆ ಪವಿತ್ರ ಖುರ್‌ಆನಿನ ಉಪದೇಶವನ್ನು ಅನುಸರಿಸಿದರೆ ಸರಕಾರ ಮತ್ತು ಜನರ ಮಧ್ಯೆ ಯಾವುದೇ ಸಂಘರ್ಷ ತಲೆದೋರದು.

ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ ಹೀಗೆ ಹೇಳಲಾಗಿದೆ: "ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ.ಅದು ದೇವಭಕ್ತಿಗೆ ಅತಿ ಸಮೀಪವಾದುದು."

ಆದರೆ ಇಂದಿನ ಕಾಲದಲ್ಲಿ ನಾವು ನ್ಯಾಯಪಾಲನೆಗೆ ಬದಲಾಗಿ ಸಮಾಜದ ಎಲ್ಲ ಹಂತಗಳಲ್ಲೂ ಅನ್ಯಾಯವನ್ನು ಕಾಣುತ್ತೇವೆ. ಜನರ ಪರಸ್ಪರ ಸಂಬಂಧದಲ್ಲೂ ದೇಶಗಳ ಪರಸ್ಪರ ಸಂಬಂಧದಲ್ಲೂ.ಇಂತಹ ಅಸಮಾನತೆ ಮತ್ತು ಉತ್ತಮ ವರ್ತನೆ ಬಗ್ಗೆ ನಿರ್ಲಕ್ಷ್ಯತೆ ಲೋಕದಲ್ಲಿ ಅಭದ್ರ ಸ್ಥಿತಿ ಉಂಟಾಗಲು ಸಹಾಯಕವಾಗುತ್ತದೆ. ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿ ಹೀಗೆ ಹೇಳಲಾಗಿದೆ: ಎರಡು ಗುಂಪುಗಳು ಅಥವಾ ದೇಶಗಳು ಪರಸ್ಪರ ಹೋರಾಟಕ್ಕಿಳಿದರೆ ನೀವು ಅವರ ಮಧ್ಯೆ ಸಂಧಾನವೇರ್ಪಡಿಸಿರಿ. ಚರ್ಚೆಗಳ ಮೂಲಕ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಗದಿದ್ದರೆ ದೌರ್ಜನ್ಯಗಾರರ ವಿರುದ್ಧ ಇತರರು ಒಗ್ಗೂಡಿ ಹೋರಾಡಿ ಅವರ ದೌರ್ಜನ್ಯವನ್ನು ತಡೆಯಬೇಕು.ಆದರೆ ದೌರ್ಜನ್ಯಗಾರರು ಶಾಂತಿಯನ್ನು ಬಯಸಿದರೆ ಅವರನ್ನು ಹೀನಾಯಗೊಳಿಸಿ ಅವರ ವಿರುದ್ಧ ಪ್ರತಿಬಂಧಗಳನ್ನು ಹೇರಬಾರದು. ದೀರ್ಘಕಾಲೀನ ಶಾಂತಿ ಸ್ಥಾಪನೆಯ ದೃಷ್ಟಿಯಿಂದ ಅವರ ವಿರುದ್ಧ ಅನುಚಿತವಾಗಿ ವರ್ತಿಸದೆ ಅವರು ಸ್ವತಂತ್ರರಾಗಿ ಕಾರ್ಯ ನಿರ್ವಹಿಸಲು ಅನುಮತಿಸಬೇಕು.

ಮುಸ್ಲಿಮ್ ಲೋಕದಲ್ಲಿರುವ ಇಂದಿನ ಸಂಘರ್ಷಗಳ ಬಗ್ಗೆ ಪರಿಶೋಧಿಸುವಾಗ ಶಾಂತಿಭಂಗ ಮಾಡುವವರ ವಿರುದ್ಧ ಒಗ್ಗೂಡಬೇಕೆಂಬ ತತ್ವವು ಪಾಲಿಸಲ್ಪಡುವುದಿಲ್ಲವೆಂದು ಸ್ಪಷ್ಟವಾಗುತ್ತದೆ.ನೆರೆಹೊರೆಯ ದೇಶಗಳು ಮಧ್ಯಸ್ಥಿಕೆ ವಹಿಸಲು ನಿಷ್ಪಕ್ಷಪಾತವಾಗಿ ಮುಂದುವರಿದಿದ್ದರೆ ಮತ್ತು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಬದಿಗೆ ಸರಿಸಿರುತ್ತಿದ್ದರೆ ಪರಿಸ್ಥಿತಿಗಳು ಬಹಳ ಹಿಂದೆಯೇ ಸುಧಾರಿಸಲ್ಪಡುತ್ತಿದ್ದುವು. ಆದರೆ ಈ ಪರಿಸ್ಥಿತಿಗೆ ಕಾರಣ ಮುಸ್ಲಿಮ್ ದೇಶಗಳು ಮಾತ್ರವಲ್ಲ. ನಮ್ಮ ಜಾಗತಿಕ ಗ್ರಾಮದಲ್ಲಿರುವ ಇತರ ದೇಶಗಳು ಸಹ ಅವ್ಯವಸ್ಥೆ ತಲೆದೋರಲು ತಮ್ಮ ಕೊಡುಗೆಗಳನ್ನು ನೀಡಿವೆ. ಮಹಾಶಕ್ತಿ ರಾಷ್ಟ್ರಗಳು ನ್ಯಾಯಯುತವಾಗಿಯೂ ಪ್ರಾಮಾಣಿಕವಾಗಿಯೂ ಯಾವಾಗಲೂ ವರ್ತಿಸಿರುತ್ತಿದ್ದರೆ ನಾವು ಇಂತಹ ಸಂಘರ್ಷಗಳನ್ನು ಕಾಣುತ್ತಿರಲಿಲ್ಲ ಹಾಗೂ ದಾಯೆಶ್ ಮತ್ತು ಇತರ ವಿದ್ರೋಹಿ ಅಥವಾ ತೀವ್ರವಾದಿ ಗುಂಪುಗಳು ಸಿರಿಯಾ ಮತ್ತು ಇರಾಖ್‌ನಲ್ಲಿ ಹುಟ್ಟುವುದನ್ನು ಕಾಣುತ್ತಿರಲಿಲ್ಲ. ವಿಷಾದಕರವಾಗಿರುವುದೇನೆಂದರೆ ಕೆಲವು ಪ್ರಮುಖ ಶಕ್ತಿಶಾಲಿ ರಾಷ್ಟ್ರಗಳು ಶಾಂತಿ ಸ್ಥಾಪಿಸಬೇಕಾದ ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸಿಲ್ಲ ಮತ್ತು ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಅನ್ಯಾಯಭರಿತ ಧೋರಣೆಗಳನ್ನು ರೂಪಿಸಿವೆ.

ಉದಾಹರಣೆಗೆ, ನಿರ್ದಿಷ್ಟ ಪಾಶ್ಚಿಮಾತ್ಯ ದೇಶಗಳು ಅರಬ್ ಲೋಕದ ಎಣ್ಣೆ ಸಂಪತ್ತಿನ ಬಗ್ಗೆ ಯಾವಾಗಲೂ ಆಸಕ್ತಿ ಹೊಂದಿದ್ದುವು ಮತ್ತು ಅವರ ಸ್ವಾರ್ಥ ಹಿತಾಸಕ್ತಿಗಳು ದೀರ್ಘಕಾಲದಿಂದ ಅವರ ಧೋರಣೆಗಳನ್ನು

ಪ್ರೇರೇಪಿಸುವವುಗಳಾಗಿದ್ದುವು. ಇದಲ್ಲದೆ ಅವರು ಮುಸ್ಲಿಮ್ ದೇಶಗಳಿಗೆ ಆಯುಧಗಳ ದೊಡ್ಡ ಸಂಗ್ರಹಗಳನ್ನು ಮಾರಾಟ ಮಾಡಿರುವರು ಮತ್ತು ಅವುಗಳಿಂದ ಉಂಟಾಗುವ ಪರಿಣಾಮಗಳನ್ನು ನಿರ್ಲಕ್ಷಿಸಿರುವರು. ನಾನು ಹೇಳುತ್ತಿರುವುದು ಯಾವುದಾದರೂ ರಹಸ್ಯವಾಗಲಿ, ಹೊಸದಾದ ವಿಷಯವಾಗಲಿ ಅಲ್ಲ. ಇವುಗಳ ಬಗ್ಗೆ ಸ್ಪಷ್ಟವಾದ ದಾಖಲೆಗಳಿವೆ. ಉದಾಹರಣೆಗೆ, 2015 ಡಿಸೆಂಬರ್‌ನಲ್ಲಿ ಆ್ಯಮ್‌ನೆಸ್ಟಿ ಇಂಟರ್‌ನೇಶನಲ್ ಪ್ರಕಟಿಸಿದ ವರದಿಯಲ್ಲಿ ಹೀಗೆ ಹೇಳಲಾಗಿದೆ: **ದಶಕಗಳ ಕಾಲದ ಅಜಾಗರೂಕತೆಯ ಆಯುಧ ವ್ಯಾಪಾರ** ದಾಯೆಶ್ ನಡೆಸುವ ಭಯೋತ್ಪಾದಕ ಕೃತ್ಯಗಳಿಗೆ ನೆರವು ನೀಡಿದೆ. ದಾಯೆಶ್ ಬಳಸುತ್ತಿರುವ ಆಯುಧಗಳಲ್ಲಿ ಬಹುತೇಕ ಭಾಗ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಮತ್ತು ರಶ್ಯದಲ್ಲಿ ನಿರ್ಮಿತವಾದವುಗಳಾಗಿವೆ.

ಇದಲ್ಲದೆ, ಆ್ಯಮ್‌ನೆಸ್ಟಿಯಲ್ಲಿ ಆರ್ಮ್ಸ್ ಕಂಟ್ರೋಲ್ (ಆಯುಧ ಹತೋಟಿ) ವಿಭಾಗದ ಸಂಶೋಧಕ ಪ್ಯಾಟ್ರಿಕ್ ವಿಲ್‌ಕೆನ್ ತನ್ನ ವರದಿಯ ಕೊನೆಗೆ ಹೀಗೆ ಹೇಳುತ್ತಾರೆ: **"**ಐ ಎಸ್ ಐ ಎಸ್ ಬಳಸುವ ಬೃಹತ್ ಮಟ್ಟದ ವಿವಿಧ ಆಯುಧಗಳು, ಅಜಾಗರೂಕತೆಯಿಂದ ನಡೆಸುವ ಆಯುಧ ವ್ಯಾಪಾರವು ಬೃಹತ್ ಗಾತ್ರದಲ್ಲಿ ಅಮಾನವೀಯ ಪಾಶವೀ ಕೃತ್ಯಗಳನ್ನು ನಡೆಸಲು ಹೇಗೆ ಇಂಧನ ನೀಡುತ್ತಿದೆ ಎಂಬುದರ ಪಾಠ ಕಲಿಸುವುದಾಗಿದೆ."

ಖಂಡಿತವಾಗಿಯೂ ಚೆನ್ನಾಗಿ ತಿಳಿದಿರುವ ವಿಷಯವೇನೆಂದರೆ ಮುಸ್ಲಿಮ್ ದೇಶಗಳಲ್ಲಿ ಬಳಸಲಾಗುವ ಕೌಶಲ್ಯಮಯ ಶಸ್ತ್ರಾಸ್ತ್ರಗಳನ್ನು ನಿರ್ಮಿಸುವ ಆಧುನಿಕ ಆಯುಧ ನಿರ್ಮಾಣ ಕಾರ್ಖಾನೆಗಳು ಮಧ್ಯಪೂರ್ವ ದೇಶಗಳಲ್ಲಿಲ್ಲ. ಆದುದರಿಂದ ಮುಸ್ಲಿಮ್ ದೇಶಗಳಲ್ಲಿ ಪ್ರಯೋಗಿಸಲ್ಪಡುವ ಆಯುಧಗಳು ವಿದೇಶಗಳಿಂದ ಆಮದು ಮಾಡಿದವುಗಳಾಗಿವೆ. ಪ್ರಮುಖ ಶಕ್ತಿಶಾಲಿ ದೇಶಗಳು ಆಯುಧ ವ್ಯಾಪಾರ ನಿಲ್ಲಿಸುವುದಾದರೆ ಮತ್ತು ಹೋರಾಡುವ ಸರಕಾರಗಳಿಗೆ, ವಿದ್ರೋಹಿಗಳಿಗೆ, ಭಯೋತ್ಪಾದಕರಿಗೆ ಆಯುಧ ಪೂರೈಕೆಯ ವ್ಯವಸ್ಥೆಯನ್ನು ಮುರಿಯುವುದಾದರೆ ಇಂತಹ ಸಂಘರ್ಷಗಳು ಶೀಘ್ರವಾಗಿ ಕೊನೆಗೊಳ್ಳುವುವು. ಉದಾಹರಣೆಗೆ, ಸೌದಿ ಅರೇಬಿಯ ಪಶ್ಚಿಮದ ದೇಶಗಳಿಂದ ಖರೀದಿಸಿದ ಆಯುಧಗಳನ್ನು ಯೆಮನ್ ದೇಶದ ವಿರುದ್ಧ ಬಳಸುತ್ತಿರುವುದು ಎಲ್ಲರಿಗೂ ಚೆನ್ನಾಗಿ ತಿಳಿದಿರುವುದಾಗಿದೆ. ಯೆಮನ್ ದೇಶದಲ್ಲಿ ಮಹಿಳೆಯರು, ಮಕ್ಕಳು ಸಹಿತ ಸಾವಿರಾರು ನಾಗರಿಕರು ಕೊಲ್ಲಲ್ಪಡುತ್ತಿದ್ದಾರೆ ಮತ್ತು ಸರ್ವನಾಶ ನಡೆಸಲಾಗಿದೆ. ಇಂತಹ ಆಯುಧ ವ್ಯಾಪಾರಗಳ ಅಂತಿಮ ಪರಿಣಾಮ ಏನಾಗುವುದು? ಯೆಮನಿನ ಜನರ ಜೀವಿತ ಹಾಳುಗೆಡವಲ್ಪಡುತ್ತಾ ಇರುವುದರಿಂದ ಅವರು ದ್ವೇಷಭರಿತರಾಗಿ ಸೌದಿ ಅರೇಬಿಯಾ ವಿರುದ್ಧ ಪ್ರತಿಕಾರ ಮಾಡುವರಲ್ಲದೆ ಸೌದಿ ಅರೇಬಿಯಕ್ಕೆ ಆಯುಧ ಪೂರೈಸುತ್ತಿರುವ ಪಶ್ಚಿಮದ ದೇಶಗಳನ್ನೂ ದ್ವೇಷಿಸುವರು. ಭಾವೀ ಜೀವಿತ ಸಮೃದ್ಧಿಯ ಭರವಸೆ ನಷ್ಟವಾಗಿರುವ ಮತ್ತು ಭೀಕರ ಕ್ರೌರ್ಯಗಳನ್ನು ಕಂಡ ಆ ದೇಶದ ಯುವ ಜನರು ತೀವ್ರವಾದಿಗಳಾಗುವರು ಮತ್ತು ಈ ರೀತಿ ಭಯೋತ್ಪಾದನೆ ಮತ್ತು ತೀವ್ರವಾದದ ವಿಷಮಚಕ್ರ ಪ್ರಾರಂಭವಾಗುವುದು. ಇಂತಹ ವಿನಾಶಕಾರಿ ವಿಧ್ವಂಸಕಾರಿ ಪರಿಣಾಮಗಳನ್ನು ಕೆಲವು ಮಿಲಿಯನ್ ಡಾಲರ್‌ಗೋಸ್ಕರ ಖರೀದಿಸಬೇಕೇ? ಆದುದರಿಂದ ಇಂದಿನ ಸಂಘರ್ಷಗಳ ಕೇಂದ್ರವಾಗಿರುವ ಮುಸ್ಲಿಮ್ ದೇಶಗಳಿಗೆ ಮಾತ್ರ ಅಪಾಯಗಳು ಸೀಮಿತವಾಗಿಲ್ಲ. ಬೆದರಿಕೆಗಳು ವಿಶಾಲವಾಗಿ ಹರಡಿವೆ. ಪ್ಯಾರಿಸ್, ಬ್ರಸ್ಸೆಲ್ಸ್ ಮತ್ತು ಯುನೈಟೆಡ್ ಸ್ಟೇಟ್ಸ್‌ಗಳಲ್ಲಿ ಇತ್ತೀಚೆಗೆ ನಡೆದ ಭಯೋತ್ಪಾದಕ ಆಕ್ರಮಣಗಳಿಗೆ ನಾವು ಸಾಕ್ಷಿಗಳಾಗಿದ್ದೇವೆ.

ಈ ದೇಶವಾದ ಕೆನಡದಲ್ಲಿ ಸಹ ಕಳೆದ ಕೆಲವು ವರ್ಷಗಳಲ್ಲಿ ಕೆಳ ಹಂತದ ಭಯೋತ್ಪಾದಕ ಘಟನೆಗಳು ನಡೆದಿವೆ ಎಂದು ತಮಗೆಲ್ಲರಿಗೂ ತಿಳಿದಿದೆ.ಕೆನಡ, ಅರಬ್ ದೇಶಗಳಿಂದ ಸಾವಿರಾರು ಮೈಲುಗಳಷ್ಟು ದೂರವಿದ್ದರೂ ಮುಸ್ಲಿಮ್ ಯುವ ಜನರು ಈ ದೇಶದಿಂದ ಹೊರಟು ಸಿರಿಯಾ ಮತ್ತು ಇರಾಖಿನ ಭಯೋತ್ಪಾದಕ ಗುಂಪುಗಳಿಗೆ ಸೇರಿದ್ದಾರೆ. ಅತ್ಯಂತ ಆತಂಕದಾಯಕವಾದ ವಿಷಯವೇನೆಂದರೆ ಕೆನಡ ಸರಕಾರದ ಅಂಕಿ ಅಂಶಗಳ ಪ್ರಕಾರ ಸಿರಿಯಾ ಮತ್ತು ಇರಾಕಿಗೆ ಹೋದವರಲ್ಲಿ ಶೇಕಡಾ ಇಪ್ಪತ್ತರಷ್ಟು ಮಹಿಳೆಯರಾಗಿದ್ದಾರೆ. ಇದರಿಂದ ತಿಳಿಯುವುದೇನೆಂದರೆ ಈ ಮಹಿಳೆಯರು ಸ್ವತಃ ಉಗ್ರಗಾಮಿಗಳಾಗುವರಲ್ಲದೆ ತಮ್ಮ ಮಕ್ಕಳಿಗೂ ತೀವ್ರಗಾಮಿ ಉಪದೇಶ ನೀಡಿ ಅವರ ಮನೋಭಾವಗಳನ್ನು ತೀವ್ರವಾದಕ್ಕೆ ಬದಲಾಯಿಸುವರು.

ಉಗ್ರವಾದ, ತೀವ್ರವಾದ ಮೊದಲಾದವುಗಳನ್ನು ನಿಯಂತ್ರಿಸಲು ನಾವು ಅವುಗಳ ಕಾರಣಗಳೇನು ಮತ್ತು ಅವುಗಳ ಚಿಹ್ನೆಗಳೇನೆಂದು ಪರಿಶೋಧಿಸಬೇಕು. ವಿಷಾದಕರವಾದುದೇನೆಂದರೆ ಪಶ್ಚಿಮ ದೇಶಗಳಲ್ಲಿರುವ ತೀವ್ರಗಾಮಿ ಮುಸ್ಲಿಮರಿಗೆ ಇಸ್ಲಾಮ್ ಧರ್ಮದ ಮೂಲಭೂತ ತತ್ವಗಳ ಬಗ್ಗೆ ಅರಿವಿಲ್ಲ. ಅವರ ತೀವ್ರಗಾಮಿ ಮನೋಭಾವ ಅವರ ವೈಯಕ್ತಿಕ ನಿರಾಶೆಗಳ ಕಾರಣಗಳಿಂದಲೇ ಹೊರತು ಯಾವುದೇ ಸಾತ್ವಿಕ ನಂಬಿಕೆಗಳ ಕಾರಣದಿಂದಲ್ಲ. ಸಾಮಾಜಿಕ ಜಾಲ ತಾಣಗಳಲ್ಲಿ ಮತ್ತು ಮಸ್‌ಜಿದ್‌ಗಳಲ್ಲಿ ನಡೆಯುವ ದ್ವೇಷ ಪ್ರಚಾರ ಮತ್ತು ತೀವ್ರಗಾಮಿ ಸಾಹಿತ್ಯಗಳ ಪ್ರಚಾರ ಇವುಗಳಲ್ಲದೆ ನನ್ನ ಅಭಿಪ್ರಾಯ ಪ್ರಕಾರ ಮುಸ್ಲಿಮ್ ಯುವ ಜನರು ತೀವ್ರಗಾಮಿಗಳಾಗುವ ಕಾರಣ ಆರ್ಥಿಕ ಬಿಕ್ಕಟ್ಟಾಗಿದೆ. ಪ್ರಕಟಿಸಲಾದ ಅನೇಕ ವರದಿಗಳು ಈ ಅಭಿಪ್ರಾಯವನ್ನು ಅನುಮೋದಿಸುತ್ತವೆ. ಅನೇಕ ಮುಸ್ಲಿಮ್ ಯುವ ಜನರು ಉತ್ತಮವಾದ ವಿದ್ಯಾಭ್ಯಾಸ ಮೂಲಕ ಪ್ರಶಸ್ತಿಗಳಿಸಿದ್ದರೂ ಅವರಿಗೆ ಅವರ ವಿದ್ಯಾಭ್ಯಾಸದ ಅರ್ಹತೆಗೆ ಯೋಗ್ಯವಾದ ಉದ್ಯೋಗ ದೊರೆಯುವುದಿಲ್ಲ. ಅವರು ಬದಿಗೆ ಸರಿಸಲ್ಪಟ್ಟು ನಿರಾಶಭಾವನೆ ಹೊಂದಿದವರಾಗಿದ್ದಾರೆ.

ಆರ್ಥಿಕ ಸಂಕಷ್ಟಗಳ ಕಾರಣ ಇಂತಹ ಯುವಕರು ಉಗ್ರಗಾಮಿ ಮತ ಪಂಡಿತರಿಗೆ ಮತ್ತು ಭಯೋತ್ಪಾದಕ ಗುಂಪುಗಳಿಗೆ ಸುಲಭವಾಗಿ ದೊರಕುವ ದುರ್ಬಲ ಬೇಟೆಯಾಗಿದ್ದಾರೆ. ಆದುದರಿಂದ ಯುವ ಜನರಿಗೆ ತಮ್ಮನ್ನು ಅಭಿವೃದ್ಧಿಗೊಳಿಸಲು ಉತ್ತಮ ಸದವಕಾಶಗಳನ್ನು ಒದಗಿಸಿ ಅವರು ದೇಶದ ಕಾರ್ಯಕ್ಷೇತ್ರದಲ್ಲಿ ಪ್ರವೇಶಿಸುವಂತೆ ಮಾಡುವುದಾದರೆ ಅದು ದೇಶವನ್ನು ಸುಭದ್ರವಾಗಿರಿಸಲು ಸಹಕಾರಿಯಾಗುವುದು. ಜಾಗತಿಕ ಮಟ್ಟದಲ್ಲಿ ಶಕ್ತಿಶಾಲಿ ದೇಶಗಳು ಮತ್ತು ಸಂಯುಕ್ತ ರಾಷ್ಟ್ರ ಸಂಘದಂತಹ ಅಂತರ್ರಾಷ್ಟ್ರೀಯ ಸಂಸ್ಥೆಗಳು ತಮ್ಮ ಸ್ಥಾಪನೆಯ ತತ್ವಗಳನ್ನು ಎಲ್ಲ ಸಂದರ್ಭಗಳಲ್ಲಿಯೂ

ಸತ್ಯನಿಷ್ಠವಾಗಿ ಪಾಲಿಸುವವರಾಗಿರುತ್ತಿದ್ದರೆ ಭಯೋತ್ಪಾದನೆ ಎಂಬ ವಿಷಕಾರಿ ಪ್ಲೇಗ್ ಲೋಕದ ಅನೇಕ ಭಾಗಗಳಲ್ಲಿ ಹಾವಳಿ ನಡೆಸುವುದನ್ನು ನಾವು ಕಾಣುತ್ತಿರಲಿಲ್ಲ. ಲೋಕದ ಶಾಂತಿ ಮತ್ತು ಭದ್ರತೆ ಪುನಃ ಪುನಃ ದುರ್ಬಲಗೊಳ್ಳುವುದನ್ನು ಮತ್ತು ನಾಶವಾಗುವುದನ್ನು ನಾವು ಕಾಣುತ್ತಿರಲಿಲ್ಲ. ನಿರಾಶ್ರಿತರ ಬೃಹತ್ ಸಮಸ್ಯೆ ಯುರೋಪು ಮತ್ತು ಇತರ ಅಭಿವೃದ್ಧಿ ಹೊಂದಿದ ದೇಶಗಳನ್ನು ದಿಗ್ಭ್ರಮೆಗೊಳಿಸುತ್ತಿವೆ ಮತ್ತು ಭಯಪಡಿಸುತ್ತಿವೆ. ಇಂತಹ ಪರಿಸ್ಥಿತಿ ತಲೆದೋರುತ್ತಿರಲಿಲ್ಲ. ಲಕ್ಷಗಟ್ಟಲೆ ನಿಷ್ಕಳಂಕ ಜನರು ಯುರೋಪಿಗೆ ಪಲಾಯನ ಮಾಡಿದ್ದಾರೆ. ಸಾವಿರಗಟ್ಟಲೆ ಜನರು ಕೆನಡಕ್ಕೂ ಆಗಮಿಸಿದ್ದಾರೆ. ಈ ನಿರಾಶ್ರಿತರು ತಮ್ಮ ದೇಶಕ್ಕೆ ವಿಷ ಹಾಕಿದ ಭಯೋತ್ಪಾದಕರಿಂದ ರಕ್ಷಣೆ ಪಡೆಯಲು ಪಲಾಯನ ಮಾಡಿದ್ದಾರೆ. ನಿರಾಶ್ರಿತರಲ್ಲಿ ಬಹುತೇಕ ಜನರು ವಾಸ್ತವಿಕವಾಗಿ ನಿರಾಶ್ರಿತರೂ ಸಭ್ಯರೂ ಆಗಿದ್ದಾರೆ. ಆದರೆ ಒಂದೆರಡು ಋಣಾತ್ಮಕ ಘಟನೆಗಳನ್ನು ನಾವು ಕಳೆದ ವರ್ಷ ಕಂಡಿದ್ದೇವೆ. ಅವುಗಳು ಯುರೋಪಿನಲ್ಲಿಯೂ ಉತ್ತರ ಅಮೇರಿಕದಲ್ಲೂ ಜನರನ್ನು ಗಾಬರಿಪಡಿಸುವುದಾಗಿ ನಾವು ಕಾಣುತ್ತಿದ್ದೇವೆ. ಲೋಕವು ಹೇಗೆ ಅಸ್ಥಿರ ಸ್ಥಿತಿಗೆ ಸಾಗುತ್ತಿದೆ ಎಂದೂ ದ್ವೇಷ ಮತ್ತು ಆತಂಕ ಲೋಕದ ಬಹುಭಾಗವನ್ನು ಆವರಿಸಿರುವುದಾಗಿಯೂ ನಾವು ಕಾಣುತ್ತಿದ್ದೇವೆ. ನಾನು ಪುನರಾವರ್ತಿಸುತ್ತೇನೆ– ಇವುಗಳಿಗೆ ಮೂಲಭೂತ ಕಾರಣ ಅನ್ಯಾಯ ಮತ್ತು ಅಸಮತೆಯಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಮಾಡಿದ ಅನುಚಿತ ವರ್ತನೆಯ ಕಾರಣದಿಂದಲೇ ಜಾಗತಿಕ ಆರ್ಥಿಕ ಬಿಕ್ಕಟ್ಟು ತಲೆದೋರಿತು ಹಾಗೂ ಬಡವರ ಮತ್ತು ಶ್ರೀಮಂತರ ಮಧ್ಯೆ ಅಂತರವನ್ನು ವರ್ಧಿಸಿತು. ಅಭಿವೃದ್ಧಿ ಹೊಂದಿದ ಶ್ರೀಮಂತ ದೇಶಗಳು ಬಡದೇಶಗಳಲ್ಲಿ ಭಂಡವಾಳ ಹೂಡಲು ತೊಡಗಿದ್ದರೂ ಅವರು ಆ ದೇಶಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಹಾಯ ಮಾಡುವುದಕ್ಕೆ ಬದಲಾಗಿ ತಮ್ಮ ಹಿತಾಸಕ್ತಿಗಳಿಗೆ ಆದ್ಯತೆ ನೀಡಿದ್ದಾರೆ.

ಅಭಿವೃದ್ಧಿ ಹೊಂದಿದ ದೇಶಗಳು ಶೋಷಣೆ ಮತ್ತು ದುರಾಶೆಗೆ ಬದಲಾಗಿ ಬಡ ದೇಶಗಳ ಹಕ್ಕುಗಳಿಗೆ ಹೋರಾಡಿ ಅವರ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕಾಗಿತ್ತು. ಬಡ ದೇಶಗಳ ಜನರು ಗೌರವದೊಂದಿಗೆ ತಮ್ಮ ಕಾಲುಗಳಲ್ಲಿ ನಿಲ್ಲುವಂತಾಗಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕಾಗಿತ್ತು. ಆದರೆ ಹೀಗೆ ಸಂಭವಿಸಲಿಲ್ಲವೆಂಬುದು ದುಃಖಕರ.

ಪವಿತ್ರ ಖುರ್‌ಆನ್ ಅಧ್ಯಾಯ 20 ವಚನ 132ರಲ್ಲಿ ಅನ್ಯರ ಸಂಪತ್ತನ್ನು ದುರಾಶೆಯ ದೃಷ್ಟಿಯಿಂದ ನೋಡಬಾರದೆಂದೂ ಕಲಿಸುತ್ತದೆ. ಸಂಪೂರ್ಣ ಲೋಕ ಈ ಒಂದೇ ತತ್ವ ಪ್ರಕಾರ ಕಾರ್ಯಪ್ರವೃತ್ತವಾಗುವುದಾದರೆ ಲೋಕದ ಆರ್ಥಿಕ ವ್ಯವಸ್ಥೆ ಉತ್ತಮವೂ ನ್ಯಾಯಬದ್ಧವೂ ಆಗುವುದು. ಭಂಡವಾಳವೂ ನ್ಯಾಯಪೂರ್ಣವಾಗಿ ಹಂಚಲ್ಪಡುವುದು ಮತ್ತು ದೇವನಿಂದ ಲಭಿಸಿದ ಸಂಪತ್ತಿನಿಂದ ವರದಾನಗಳನ್ನು ಪಡೆಯುವುದು. ಲೋಕದಲ್ಲಿ ವ್ಯಾಪಾರ ಅನ್ಯರ ಹಕ್ಕುಗಳನ್ನು ಈಡೇರಿಸುವ ಇಚ್ಛೆಯಿಂದ ಮಾಡಲಾಗುವುದು. ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಅಧಿಕಾರವನ್ನೂ ಸಂಪತ್ತನ್ನೂ ಗಳಿಸಲು ಅದನ್ನು ಮಾಡಲಿಕ್ಕಿಲ್ಲ.

ಲೋಕದಲ್ಲಿ ನಡೆಯುವ ಇನ್ನೊಂದು ಅನ್ಯಾಯ, ರಾಜಕಾರಣಕ್ಕೆ ಸಂಬಂಧಿಸಿದೆ. ಕೆಲವು ದೇಶಗಳಲ್ಲಿ ನಿರಂಕುಶ ಆಡಳಿತೆ ಇದೆ ಮತ್ತು ಅನ್ಯಾಯದಿಂದ ವರ್ತಿಸುವ ಸರಕಾರಗಳಿವೆ. ಹೀಗಿದ್ದರೂ ಪ್ರಮುಖ ಶಕ್ತಿಶಾಲಿ ದೇಶಗಳು ಆ ಸರಕಾರಗಳ ಕ್ರೌರ್ಯಗಳ ಕಡೆಗೆ ಕಣ್ಣು ಮುಚ್ಚುತ್ತವೆ. ಏಕೆಂದರೆ ಈ ಸರಕಾರಗಳು ಅವರನ್ನು ಬೆಂಬಲಿಸುತ್ತವೆ ಮತ್ತು ಅವರ ಹಿತಾಸಕ್ತಿಗಳನ್ನು ಈಡೇರಿಸುತ್ತವೆ. ಆದರೆ ಯಾವ ದೇಶದ ಸರಕಾರಗಳ ನಾಯಕರು ಪ್ರಮುಖ ದೇಶಗಳ ಇಷ್ಟಪ್ರಕಾರ ಬಾಗಿ ನಡೆಯುವುದಿಲ್ಲವೋ ಅಂತಹ ಸರಕಾರಗಳ ವಿದ್ರೋಹಿಗಳಿಗೆ ಅಥವಾ ಸರಕಾರವನ್ನು ಬದಲಾಯಿಸಲು ಬೇಡಿಕೆ ನೀಡುವವರಿಗೆ ಸಹಾಯ ನೀಡಲು ಸಂತೋಷಪಡುತ್ತವೆ. ವಾಸ್ತವಿಕ ವಿಷಯವೇನೆಂದರೆ ಸರಕಾರಗಳು ತಮ್ಮ ಜನರೊಂದಿಗೆ ತಾರತಮ್ಯ ಭಾವನೆ ರಹಿತವಾಗಿ ವರ್ತಿಸುತ್ತವೆ. ವ್ಯತ್ಯಾಸವಿರುವುದೇನೆಂದರೆ, ಕೆಲವು ಸರಕಾರಗಳು ಪ್ರಮುಖ ಶಕ್ತಿಶಾಲಿ ದೇಶಗಳಿಗೆ ಸಹಕಾರ ನೀಡುತ್ತವೆ. ಬೇರೆ ಕೆಲವು ಹಾಗೆ ಮಾಡುವುದಿಲ್ಲ.

ಪ್ರಮುಖ ಶಕ್ತಿಶಾಲಿ ದೇಶಗಳನ್ನು ಬೆಂಬಲಿಸುವ ದೇಶಗಳಿಗೆ ಸಂಬಂಧಿಸಿ ಪಾಶ್ಚಿಮಾತ್ಯ ಸೈನಿಕ ಧೋರಣೆ ಹೇಗಿದೆ ಎಂದರೆ ಆ ದೇಶಗಳ ನಾಯಕರನ್ನು ತೆಗೆದು ಹಾಕುವುದು. ಇರಾಕ್ ಮತ್ತು ಲಿಬಿಯಾದಲ್ಲಿ ಹೀಗೆ ಸಂಭವಿಸಿತು. ಸಿರಿಯಾದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಇಂತಹ ಪ್ರಯತ್ನ ನಡೆಸಲಾಗಿದೆ. ಇರಾಕ್ ಯುದ್ಧದಲ್ಲಿ ಭಾಗವಹಿಸುವುದು ಬೇಡ ಎಂದು ಕೆನಡ ಮಾಡಿದ ನಿರ್ಧಾರ ಸರಿಯಾದುದೆಂದು ಕಾಲವು ಸಾಬೀತುಗೊಳಿಸಿತು. ಸಿರಿಯಾದ ಸಂಘರ್ಷದ ವಾಸ್ತವಿಕಾಂಶಗಳು ಮತ್ತು ಅದನ್ನು ಪರಿಹರಿಸುವ ಮಾರ್ಗಗಳು ಸ್ಪಷ್ಟವಾಗುವ ತನಕ ಆ ದೇಶದ ಮೇಲೆ ಬಾಂಬ್ ದಾಳಿ ಮಾಡಬಾರದೆಂಬ ಕೆನಡದ ನಿರ್ಧಾರದೊಂದಿಗೆ ನಾನು ಸಹಮತ ಹೊಂದಿದ್ದೇನೆ. ಹೆಚ್ಚು ವಿಸ್ತಾರವಾಗಿ ಸಂಯುಕ್ತ ರಾಷ್ಟ್ರ ಸಂಘ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವ ತನ್ನ ಪಾತ್ರವನ್ನು ರಾಜಕಾರಣ, ಅನ್ಯಾಯ ಮತ್ತು ಪಕ್ಷಪಾತ ಮುಕ್ತವಾಗಿ ನಿರ್ವಹಿಸಬೇಕಾಗಿದೆ. ನಾನು ಭರವಸೆ ಹೊಂದಿದ್ದೇನೆ ಮತ್ತು ಪ್ರಾರ್ಥಿಸುತ್ತೇನೆ– ಸರ್ವಶಕ್ತನಾದ ಅಲ್ಲಾಹನು ಸಂಯುಕ್ತ ರಾಷ್ಟ್ರ ಸಂಘ ಮತ್ತು ಲೋಕದ ಸರಕಾರಗಳಿಗೆ ಮೇಲೆ ವಿವರಿಸಿದಂತೆ ವರ್ತಿಸುವುದಕ್ಕೆ ಸಾಧ್ಯವಾಗುವಂತೆ ಮಾಡಲಿ. ಆ ಮೂಲಕ ಸತ್ಯವಾದ ಮತ್ತು ದೀರ್ಘಕಾಲ ಬಾಳುವ ಶಾಂತಿ ಲೋಕದಲ್ಲಿ ಸ್ಥಾಪಿತವಾಗಲಿ.

ಇದಕ್ಕೆ ಬದಲಾಗಿ ಏನು ಸಂಭವಿಸುವುದೆಂದು ಚಿಂತಿಸಲು ಸಾಧ್ಯವಾಗುವುದಿಲ್ಲ. ನಾವು ಈಗ ವರ್ತಿಸುವ ರೀತಿಯಲ್ಲಿಯೇ ಮುಂದುವರಿದರೆ ಲೋಕವು ಮಹಾ ವಿನಾಶಕ್ಕೆ– ಇನ್ನೊಂದು ಜಾಗತಿಕ ಯುದ್ಧಕ್ಕೆ ಹುಚ್ಚುಚ್ಚಾಗಿ ಧಾವಿಸುತ್ತಿದೆ. ಜಾಗತಿಕ ನಾಯಕರಿಗೂ ಧೋರಣೆ ರೂಪಿಸುವವರಿಗೂ ಅಲ್ಲಾಹನು ಬುದ್ಧಿಯನ್ನು ದಯಪಾಲಿಸಲಿ. ನಾವು ಬಿಟ್ಟು ಹೋಗುವ ಲೋಕ ನಮ್ಮ ಮಕ್ಕಳಿಗೂ ಮುಂದಿನ ಪೀಳಿಗೆಗೂ ಶಾಂತಿಭರಿತ, ಸಮೃದ್ಧಿ ಭರಿತ ಲೋಕವಾಗುವಂತೆ ಅಲ್ಲಾಹನು ದಯಪಾಲಿಸಲಿ. ಅಂಗವಿಕಲ ಮಕ್ಕಳು ಮತ್ತು ವಿಕಲ ಆರ್ಥಿಕ ವ್ಯವಸ್ಥೆ ಭರಿತ ಲೋಕ ಅದಾಗದಿರಲಿ. ಕೊನೆಯದಾಗಿ, ನನ್ನನ್ನು ಇಲ್ಲಿಗೆ ಆಮಂತ್ರಿಸಿದುದಕ್ಕೆ ಇನ್ನೊಮ್ಮೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಿಮಗೆ ಬಹಳ ಧನ್ಯವಾದಗಳು.

**(The Review Of Religions December 2016 ಸಂಚಿಕೆಯಿಂದ.)**

# ದೇಶಭಕ್ತಿ ಮತ್ತು ದೇಶಪ್ರೇಮದ ಬಗ್ಗೆ ಇಸ್ಲಾಮ್ ಧರ್ಮದ ಉಪದೇಶಗಳು

**210 ದೇಶಗಳಲ್ಲಿ ವ್ಯಾಪಿಸಿರುವ ಅಹ್ಮದಿಯಾ ಮುಸ್ಲಿಂ ಸಂಘಟನೆಯು ಇಸ್ಲಾಮಿನ ನೈಜ ಅಧ್ಯಾಪನೆಯ ಆಧಾರದಲ್ಲಿ ಶಾಂತಿ, ಪ್ರೀತಿ, ಸೌಹಾರ್ದ ಮತ್ತು ದೇಶಪ್ರೇಮಗಳ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಅಹ್ಮದಿಯಾ ಜಮಾಅತಿನ ಸರ್ವೋನ್ನತ ನೇತಾರ (ಖಲೀಫ)ರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬರು ಈ ಸಂದೇಶವನ್ನು ಲೋಕದಾದ್ಯಂತ ಹರಡುತ್ತಿದ್ದಾರೆ. "ದೇಶಭಕ್ತಿ ಮತ್ತು ದೇಶಪ್ರೇಮದ ಬಗ್ಗೆ ಇಸ್ಲಾಂ ಧರ್ಮದ ಉಪದೇಶಗಳು" ಎಂಬ ವಿಷಯದಲ್ಲಿ ಅವರು ಮಾಡಿದ ಭಾಷಣದ ಸಂಗ್ರಹವನ್ನು ನಾವಿಲ್ಲಿ ನೀಡುತ್ತಿದ್ದೇವೆ.**

ಅಹ್ಮದಿಯಾ ಜಮಾಅತಿನ ಐದನೇ ಖಲೀಫರು ಹೇಳುತ್ತಾರೆ:

**ದೇಶಪ್ರೇಮ:** ದೇಶಭಕ್ತಿ ಮತ್ತು ದೇಶಪ್ರೇಮ ಎಂದು ಹೇಳುವುದು ಸುಲಭ. ವಾಸ್ತವದಲ್ಲಿ ಈ ಶಬ್ದಗಳಲ್ಲಿ ವಿಶಾಲ, ಸುಂದರ ಮತ್ತು ತಳಸ್ಪರ್ಶಿ ಅರ್ಥಗಳು ಇವೆ. ಈ ಪದಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ಪೂರ್ಣವಾಗಿ ಮನವರಿಕೆ ಮಾಡಿಕೊಳ್ಳುವುದು ಮತ್ತು ಅವು ನಮ್ಮಿಂದ ಏನನ್ನು ಬಯಸುತ್ತವೆ ಎಂದು ಸಂಪೂರ್ಣವಾಗಿ ತಿಳಿದುಕೊಳ್ಳುವುದು ಬಹಳ ಕಷ್ಟಕರವೇ ಆಗಿದೆ. ಆದರೆ ನಾನು ಇಸ್ಲಾಮ್ ಧರ್ಮ ದೇಶಭಕ್ತಿ ಮತ್ತು ದೇಶಪ್ರೇಮದ ಬಗ್ಗೆ ಉಪದೇಶಿಸಿರುವುದನ್ನು ಸಂಕ್ಷಿಪ್ತವಾಗಿ ವಿವರಿಸಲು ಯತ್ನಿಸುವೆನು.

**ದೇಶಭಕ್ತಿ:** ಮೊದಲನೆಯದಾಗಿ ಇಸ್ಲಾಮ್ ಉಪದೇಶಿಸುವ ಮೂಲ ತತ್ವವೇನೆಂದರೆ, ಮನುಷ್ಯನ ಮಾತು ಮತ್ತು ಕೃತಿ ಇಬ್ಬಗೆಯದಾಗಿರಬಾರದು, ಕಾಪಟ್ಯಭಾವ ಹೊಂದಿರಬಾರದು. ನಿಜವಾದ ದೇಶಭಕ್ತಿ ಪ್ರಾಮಾಣಿಕವಾದ ಸಂಬಂಧವನ್ನು ಮತ್ತು ಸತ್ಯಸಂಧತೆಯನ್ನು ಆವಶ್ಯಪಡುತ್ತದೆ. ಮನುಷ್ಯನು ಹೊರಗೆ ಪ್ರಕಟಿಸುವ ಅಭಿಪ್ರಾಯ ಅವನ ಒಳಗೆ ಸಹ ಅದೇ ರೀತಿ ಇರಬೇಕು. ದೇಶಭಕ್ತಿಗೆ ಸಂಬಂಧಿಸಿ ಈ ತತ್ವಗಳು ಮುಖ್ಯವಾಗಿವೆ. ಆದ್ದರಿಂದ ಒಂದು ದೇಶದ ನಾಗರಿಕನಾಗಿರುವವನು ತನ್ನ ದೇಶದೊಂದಿಗೆ ವಾಸ್ತವಿಕವಾದ ಪ್ರೇಮ ಮತ್ತು ನಿಷ್ಠೆ ಹೊಂದುವುದು ಅತ್ಯವಶ್ಯಕವಾಗಿದೆ. ಒಬ್ಬನು ಜನ್ಮತಃ ನಾಗರಿಕತೆ ಗಳಿಸಿದವನಾಗಿದ್ದರೂ ವಲಸೆ ಬಂದ ಕಾರಣದಿಂದ ಅಥವಾ ಬೇರೆ ಯಾವುದೇ ಕಾರಣದಿಂದ ಇನ್ನೊಂದು ದೇಶದ ನಾಗರಿಕನಾದರೂ ಅವನು ತಾನು ನಾಗರಿಕನಾಗಿರುವ ದೇಶಕ್ಕೆ ನಿಷ್ಠಾವಂತನಾಗಿರಬೇಕೆಂದು ಇಸ್ಲಾಮ್ ಅಗತ್ಯಪಡಿಸುತ್ತದೆ.

**ದೇವನ ಪ್ರವಾದಿಗಳು:** ದೇಶಭಕ್ತಿ ಅತ್ಯಂತ ಶ್ರೇಷ್ಠ ಗುಣವಾಗಿದೆ. ಇದನ್ನು ಅತ್ಯಂತ ಸಮರ್ಪಕವಾಗಿ ಪ್ರಕಟಿಸಿದವರು ದೇವನು ನೇಮಿಸಿದ ಪ್ರವಾದಿಗಳಾಗಿದ್ದಾರೆ.ಅವರು ದೇವನೊಂದಿಗೆ ಹೊಂದಿದ್ದ ನಿಕಟ ಸಂಬಂಧ ಮತ್ತು ಪ್ರೇಮ ಎಷ್ಟು ಶಕ್ತಿಯುತವಾಗಿತ್ತೆಂದರೆ, ಎಲ್ಲ ವಿಷಯಗಳ ಬಗ್ಗೆ ದೇವನು ನೀಡಿದ ಆಜ್ಞೆಗಳನ್ನು ಪರಿಪೂರ್ಣ ನಿಷ್ಠೆಯಿಂದ ಪಾಲಿಸಲು ಕಠಿಣ ಪರಿಶ್ರಮ ಮಾಡುತ್ತಿದ್ದರು. ಅವರ ವರ್ತನೆ ಅವರಿಗೆ ದೇವನ ಬಗ್ಗೆ ಇದ್ದ ನಿಷ್ಠೆ ಮತ್ತು ಅದರ ಉನ್ನತಮಟ್ಟವನ್ನು ಪ್ರತಿಬಿಂಬಿಸುತ್ತಿದ್ದವು. ಆದುದರಿಂದ ಪ್ರವಾದಿಗಳು ಪ್ರಕಟಿಸಿದ ಮಾದರಿಯನ್ನು ನಾವು ಅವಲಂಬಿಸಬೇಕು. ಆದ್ಯಾಗೂ ಇದರ ಬಗ್ಗೆ ಹೆಚ್ಚಿನ ವಿವರಣೆ ನೀಡುವ ಮೊದಲು ದೇಶಪ್ರೇಮ ಮತ್ತು ದೇಶನಿಷ್ಠೆ ಎಂದರೇನೆಂದು ಮನವರಿಕೆ ಮಾಡಿಕೊಳ್ಳುವುದು ಆವಶ್ಯಕವಾಗಿದೆ.

**ನಿಷ್ಠೆ ಎಂದರೇನು?:** ಇಸ್ಲಾಮ್ ಧರ್ಮದ ಪ್ರಕಾರ ದೇಶನಿಷ್ಠೆಯ ನಿಜವಾದ ಅರ್ಥ, ಪ್ರಜೆಯು ತನ್ನ ಕರ್ತವ್ಯಗಳನ್ನೂ ಪ್ರತಿಜ್ಞೆಗಳನ್ನೂ ನಿಸ್ಸಂದಿಗ್ಧವಾಗಿ ಎಲ್ಲ ಸಂದರ್ಭಗಳಲ್ಲೂ ಕಷ್ಟಗಳನ್ನು ಪರಿಗಣಿಸದೆ ಈಡೇರಿಸಬೇಕೆಂದಾಗಿದೆ. ಇಸ್ಲಾಮ್ ಆವಶ್ಯಪಡುವ ವಿಧೇಯತೆಯ ನಿಜವಾದ ಮಟ್ಟ ಇದೇ ಆಗಿದೆ. ಪವಿತ್ರ ಖುರ್‌ಆನ್ ವಿವಿಧ ಸಂದರ್ಭಗಳಲ್ಲಿ ಮುಸ್ಲಿಮರು ತಮ್ಮ ಪ್ರತಿಜ್ಞೆಗಳನ್ನೂ ಒಪ್ಪಂದಗಳನ್ನೂ ಈಡೇರಿಸಬೇಕೆಂದೂ ಅವರು ತಮ್ಮ ಹೊಣೆಗಾರಿಕೆಗಳ ಬಗ್ಗೆ ಪ್ರಶ್ನಿಸಲ್ಪಡುವರೆಂದು ಹೇಳಿದೆ. ಮುಸ್ಲಿಮರು ದೇವನಿಗೆ ಸಂಬಂಧಿಸಿ ತಮ್ಮ ಕರ್ತವ್ಯಗಳನ್ನೂ ಪ್ರತಿಜ್ಞೆಗಳನ್ನೂ ಈಡೇರಿಸಬೇಕೆಂದೂ ಉಪದೇಶಿಸಲಾಗಿದೆ.

ಈ ವಿಷಯಕ್ಕೆ ಸಂಬಂಧಿಸಿ ಒಂದು ಸಂದೇಹ ಜನರಲ್ಲಿ ತಲೆದೋರಬಹುದಾಗಿದೆ. ಅದು ಹೀಗೆ: ಮುಸ್ಲಿಮರ ನಂಬಿಕೆ ಪ್ರಕಾರ ಅವರ ದೇವನು ಮತ್ತು ಅವರ ಧರ್ಮ ಅವರಿಗೆ ಎಲ್ಲವುಗಳಿಗಿಂತ ಮುಖ್ಯವಾಗಿವೆ. ಹಾಗೆ, ದೇವನಿಗೆ ಸಂಬಂಧಿಸಿದ ಅವರ ನಿಷ್ಠೆ ಇತರ ಎಲ್ಲವುಗಳಿಗಿಂತ ಆದ್ಯತೆ ಗಳಿಸಿರುವುದು. ಆದ್ದರಿಂದ ಅವರು ಇತರ ಎಲ್ಲ ಪ್ರತಿಜ್ಞೆಗಳ ಈಡೇರಿಕೆಗಳಿಗಿಂತ ದೇವನಿಗೆ ಸಂಬಂಧಿಸಿದ ತಮ್ಮ ಪ್ರತಿಜ್ಞೆಗಳಿಗೆ ಆದ್ಯತೆ ನೀಡುವರು.ಈ ಕಾರಣದಿಂದ ಒಬ್ಬ ಮುಸ್ಲಿಮನಿಗೆ ತನ್ನ ದೇಶದ ಬಗ್ಗೆ ಇರುವ ನಿಷ್ಠೆ ಮತ್ತು ದೇಶದ ನಿಯಮಗಳ ಪಾಲನೆ ಅವನ ದೃಷ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿರುವುದು. ಹಾಗೆ ಕೆಲವು ಸಂದರ್ಭಗಳಲ್ಲಿ ಅವನು ತನ್ನ ದೇಶನಿಷ್ಠೆಯನ್ನು ಬಲಿಯರ್ಪಿಸಲು ಸಿದ್ಧನಾಗಬಹುದು.

**ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶ:** ಈ ಸಂದೇಹ ಸಂಬಂಧಿಸಿ ನಾನು ಮೊತ್ತಮೊದಲು ಹಝ್ರತ್ ಮುಹಮ್ಮದ್ ಪೈಗಂಬರರು(ಸ)ಸ್ವತಃ ಕಲಿಸಿದುದನ್ನು ಹೇಳಲು ಬಯಸುತ್ತೇನೆ. ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದರು: 'ದೇಶಪ್ರೇಮವು ಸತ್ಯ ವಿಶ್ವಾಸದ ಅವಿಭಾಜ್ಯ ಅಂಶವಾಗಿದೆ'. ಇದರಿಂದ ತಿಳಿಯುವುದೇನೆಂದರೆ, ಪ್ರಾಮಾಣಿಕವಾದ ದೇಶಭಕ್ತಿಯನ್ನು ಇಸ್ಲಾಮ್

ಧರ್ಮ ಮುಸ್ಲಿಮರಿಂದ ಆವಶ್ಯಪಡುತ್ತದೆ. ಸೃಷ್ಟಿಕರ್ತನಾದ ದೇವನನ್ನು ಪ್ರೀತಿಸುವವನು ತನ್ನ ದೇಶವನ್ನೂ ಪ್ರೀತಿಸಬೇಕು. ಆದುದರಿಂದ ಮುಸ್ಲಿಮನು ದೇವನನ್ನು ಪ್ರೀತಿಸುವುದರಲ್ಲೂ ಅದರ ಜೊತೆಗೆ ದೇಶವನ್ನು ಪ್ರೀತಿಸುವುದರಲ್ಲೂ ಯಾವುದೇ ವೈರುಧ್ಯವಿರುವುದಿಲ್ಲ. ದೇಶಪ್ರೇಮವನ್ನು ಉನ್ನತ ಮಟ್ಟಕ್ಕೆ ಏರಿಸುವುದಕ್ಕೋಸ್ಕರ ಕಠಿಣ ಪರಿಶ್ರಮ ಪಡಬೇಕು. ಏಕೆಂದರೆ ದೇವನ ಸಾಮೀಪ್ಯ ಗಳಿಸುವ ಮಾರ್ಗ ಸಹ ಇದು ಆಗಿದೆ. ಆದುದರಿಂದ ಒಬ್ಬ ನೈಜ ಮುಸ್ಲಿಮನು ದೇವನ ಬಗ್ಗೆ ಹೊಂದಿರುವ ಪ್ರೀತಿ ಮತ್ತು ನಿಷ್ಠೆಯು ಅವನನ್ನು ತನ್ನ ದೇಶಕ್ಕೆ ಪ್ರೀತಿ ಮತ್ತು ನಿಷ್ಠೆ ಪ್ರದರ್ಶಿಸುವುದಕ್ಕೆ ಅಡ್ಡಿಯಾಗುವುದು ಅಸಾಧ್ಯವೇ ಆಗಿದೆ.

**ಸರಕಾರದ ವತಿಯಿಂದ ಹಿಂಸಾಚಾರ:** ದುರದೃಷ್ಟಕರವಾಗಿ, ಕೆಲವು ದೇಶಗಳಲ್ಲಿ ಧಾರ್ಮಿಕ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡಲಾಗಿದೆ ಅಥವಾ ಅವುಗಳನ್ನು ಸಂಪೂರ್ಣವಾಗಿ ಕಸಿಯಲಾಗಿದೆ. ಈ ಕಾರಣಗಳಿಂದ ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ. ಒಂದು ದೇಶದ ಸರಕಾರದಿಂದ ಹಿಂಸಾಚಾರಗಳಿಗೆ ಗುರಿಯಾಗುವ ಜನರು ಆ ದೇಶಕ್ಕೆ ತಮ್ಮ ಪ್ರೀತಿ ಮತ್ತು ನಿಷ್ಠೆಯನ್ನು ಮುಂದುವರಿಸಲು ಸಾಧ್ಯವೇ?

ಇಂತಹ ಪರಿಸ್ಥಿತಿ ತಲೆದೋರಿದರೆ ಇಸ್ಲಾಮ್ ಹೀಗೆ ವರ್ತಿಸಬೇಕೆಂದು ಉಪದೇಶಿಸುತ್ತದೆ: ಹಿಂಸಾಚಾರ ಮಿತಿಮೀರಿದಾಗ ಮತ್ತು ಸಹಿಸಲು ಅಸಾಧ್ಯವಾದಾಗ ಹಿಂಸೆಗೆ ಗುರಿಯಾದವರು ತಾವು ವಾಸಿಸುತ್ತಿರುವ ಪ್ರದೇಶವನ್ನು ಅಥವಾ ದೇಶವನ್ನು ಬಿಟ್ಟು ಧರ್ಮವನ್ನು ಶಾಂತಿಯಿಂದ ಆಚರಿಸಲು ಸಾಧ್ಯವಿರುವಲ್ಲಿಗೆ ವಲಸೆ ಹೋಗಬೇಕು. ಈ ಮೇಲಿನ ಮಾರ್ಗದರ್ಶನದೊಂದಿಗೆ ಇಸ್ಲಾಮ್ ಹೀಗೆ ಸಹ ಉಪದೇಶಿಸುತ್ತದೆ: ಯಾವನೇ ವ್ಯಕ್ತಿ ನಿಯಮವನ್ನು ತನ್ನ ಕೈಗೆ ತೆಗೆದುಕೊಳ್ಳಬಾರದು ಮತ್ತು ದೇಶದ ವಿರುದ್ಧ ಗೂಢ ಪಿತೂರಿಗಳಲ್ಲಿ ಭಾಗವಹಿಸಬಾರದು. ಇದು ಇಸ್ಲಾಮ್ ಧರ್ಮ ವಿಧಿಸುವ ಸ್ಪಷ್ಟ ನಿಸ್ಸಂಧಿಗ್ಧ ಆದೇಶವಾಗಿದೆ.

**ವಿದ್ರೋಹ ಕೃತ್ಯಗಳಿಂದ ದೂರವಿರುವುದು:** ಪವಿತ್ರ ಖುರ್‌ಆನ್ ದೇಶದ ನಿಷ್ಠೆಗೆ ಸಂಬಂಧಿಸಿ ನೀಡಿರುವ ಇನ್ನೊಂದು ಉಪದೇಶವೇನೆಂದರೆ, ಜನರು ತಮ್ಮನ್ನು ಅಸಭ್ಯ, ಅನಿಷ್ಟಕರ ಮತ್ತು ಎಲ್ಲ ರೀತಿಯ ವಿದ್ರೋಹ ಕೃತ್ಯಗಳಿಂದ ದೂರವಿರಿಸಬೇಕು. ಇಸ್ಲಾಮ್ ಧರ್ಮದ ಸುಂದರವೂ ವೈಶಿಷ್ಟ್ಯಪೂರ್ಣವೂ ಆಗಿರುವ ನಿಲುವೇನೆಂದರೆ, ಕೊನೆಯ ಅಪಾಯಕಾರಿ ಸನ್ನಿವೇಶಗಳಿಗೆ ತಲುಪುವಂತಹ ಕೃತ್ಯಗಳನ್ನು ಅದು ಪ್ರಥಮ ಹೆಜ್ಜೆಯಲ್ಲಿಯೇ ತಡೆಗಟ್ಟುತ್ತದೆ. ಆದುದರಿಂದ ಇಸ್ಲಾಮಿನ ಮಾರ್ಗದರ್ಶನವನ್ನು ಸರಿಯಾದ ರೀತಿಯಲ್ಲಿ ಅನುಸರಿಸುವುದಾದರೆ ಯಾವುದೇ ಸನ್ನಿವೇಶವು ಅಪಾಯಕಾರಿ ಹಂತವನ್ನು ತಲುಪುವ ಮೊದಲೇ ಅದಕ್ಕೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

**ಆರ್ಥಿಕ ಲಾಭದ ಲಾಲಸೆ:** ಉದಾಹರಣೆಗೆ, ದೇಶಕ್ಕೆ ಬಹಳ ಹಾನಿಯನ್ನು ಉಂಟುಮಾಡುವ ಒಂದು ವಿಷಯ ವ್ಯಕ್ತಿಗಳ ಆರ್ಥಿಕ ಲಾಭದ ಲಾಲಸೆಯಾಗಿದೆ. ಜನರು ಲೌಕಿಕ ಲಾಭದ ದುರಾಸೆಗಳಿಂದ ಪೀಡಿತರಾಗುತ್ತಾರೆ ಮತ್ತು ಅದು ಅನಿಯಂತ್ರಿತವಾಗಿ ಮುಂದುವರಿಯುತ್ತದೆ. ಅಂತಹ ದುರಾಸೆಗಳು ಅವರನ್ನು ದೇಶಕ್ಕೆ ಹಾನಿಕಾರಕವಾಗಿ ವರ್ತಿಸುವಂತೆ ಮಾಡುತ್ತದೆ. ಕೊನೆಗೆ ಅದು ದೇಶವನ್ನು ವಂಚಿಸುವುದಕ್ಕೆ ಕಾರಣವಾಗುತ್ತದೆ. ಇದನ್ನು ಅರಬಿ ಭಾಷೆಯಲ್ಲಿ "ಬಘಾ" ಎಂದು ಹೇಳುತ್ತಾರೆ. ದೇಶಕ್ಕೆ ಹಾನಿಯುಂಟು ಮಾಡುವ ವಿದ್ರೋಹಕರ ಕೃತ್ಯಗಳು "ಬಘಾ" ಆಗಿವೆ. ಕೆಟ್ಟ ಕೆಲಸ ಮಾಡುವವರನ್ನೂ ಇತರರಿಗೆ ಹಾನಿಯನ್ನುಂಟು ಮಾಡುವವರನ್ನೂ ಈ ಪದ ಸೂಚಿಸುತ್ತದೆ. ವಿಶ್ವಾಸದ್ರೋಹದ ಮೂಲಕ ಅನ್ಯಾಯದಿಂದ ಸಂಪತ್ತು ಗಳಿಸುವುದು ಸಹ ಇದರಲ್ಲಿ ಸೇರುತ್ತದೆ. ಅತಿರೇಕದಿಂದ ವರ್ತಿಸಿ ಹಾನಿಯನ್ನುಂಟು ಮಾಡುವವರು ಇವರಾಗಿದ್ದಾರೆ.

ಈ ರೀತಿ ವರ್ತಿಸುವವರು ದೇಶಕ್ಕೆ ನಿಷ್ಠಾವಂತರಾಗಲಾರರೆಂದು ಇಸ್ಲಾಮ್ ಉಪದೇಶಿಸುತ್ತದೆ. ಏಕೆಂದರೆ ದೇಶನಿಷ್ಠೆಯು ಉನ್ನತ ನೈತಿಕ ಗುಣಗಳೊಂದಿಗೆ ಹಾಸುಹೊಕ್ಕಾಗಿರುತ್ತದೆ. ಉನ್ನತ ನೈತಿಕ ಗುಣಗಳಿಲ್ಲದಿದ್ದರೆ ದೇಶನಿಷ್ಠೆಯು ಉಂಟಾಗಲಾರದು. ಬೇರೆ ಬೇರೆ ಗುಂಪಿನ ಜನರು ಉನ್ನತ ನೈತಿಕ ಗುಣಗಳ ಬಗ್ಗೆ ವಿವಿಧ ಅಭಿಪ್ರಾಯಗಳನ್ನು ಹೊಂದಿರಬಹುದೆಂಬುದು ಸತ್ಯವಾಗಿದೆ. ಆದರೆ ಇಸ್ಲಾಮ್ ಧರ್ಮವು ದೇವನ ಪ್ರೀತಿ ಗಳಿಸುವ ಏಕಮಾತ್ರ ಉದ್ದೇಶ ಲಕ್ಷ್ಯವನ್ನು ಹೊಂದಿದೆ. ಆದುದರಿಂದ ಮುಸ್ಲಿಮರು ಅಲ್ಲಾಹನ ಸಂಪ್ರೀತಿ ಗಳಿಸುವ ರೀತಿಯಲ್ಲಿ ಯಾವಾಗಲೂ ವರ್ತಿಸಬೇಕೆಂದು ಉಪದೇಶಿಸಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ದೇಶದ ವಿರುದ್ಧ ಅಥವಾ ಸರಕಾರದ ವಿರುದ್ಧ ಮಾಡುವ ಎಲ್ಲ ರೀತಿಯ ವಿದ್ರೋಹಕರ ಕೃತ್ಯಗಳನ್ನು ದೇವನು ನಿಷಿದ್ಧಗೊಳಿಸಿದ್ದಾನೆ. ದೇಶದ ವಿರುದ್ಧ ವಿದ್ರೋಹ ಮಾಡುವುದು ದೇಶದಲ್ಲಿ ಗಲಭೆದೊಂಬಿಗಳನ್ನು ಹುಟ್ಟು ಹಾಕುತ್ತದೆ ಮತ್ತು ಶಾಂತಿಯನ್ನು ಕೆಡಿಸಿ ದೇಶದ ಭದ್ರತೆಗೆ ಅಪಾಯ ಉಂಟುಮಾಡುತ್ತದೆ. ಒಂದು ದೇಶದಲ್ಲಿ ಆಂತರಿಕ ಗಲಭೆಗಳು ಮತ್ತು ವಿದ್ರೋಹಕರ ಕೃತ್ಯಗಳು ನಡೆಯುವಾಗ ಬಾಹ್ಯ ಶತ್ರುಗಳು ಧೈರ್ಯಗೊಂಡು ಆ ದೇಶದಲ್ಲಿ ಹಸ್ತಕ್ಷೇಪ ನಡೆಸಲು ಮುಂದಾಗುತ್ತಾರೆ. ಆದುದರಿಂದ ತನ್ನ ದೇಶದ ವಿರುದ್ಧ ಮಾಡುವ ವಿದ್ರೋಹಗಳ ಕಾರಣದಿಂದ ಅತ್ಯಂತ ತೀವ್ರ ಅಪಾಯಕರ ಪರಿಣಾಮಗಳು ತಲೆದೋರಬಹುದು.ಎಲ್ಲ ವಿಧಗಳ ಹಾನಿಕಾರಕ ಕೃತ್ಯಗಳು "ಬಘಾ" ಶಬ್ದದಲ್ಲಿ ಸೇರಿವೆ. ಒಟ್ಟಾರೆ ಹೇಳುವುದಾದರೆ, ಒಂದು ದೇಶದ ಬಗ್ಗೆ ನಿಷ್ಠೆ ಮತ್ತು ಭಕ್ತಿ ತೋರಿಸಬೇಕಾದುದು ಸಹನೆ ತೋರುವುದರ ಮೂಲಕ, ನೈತಿಕ ಗುಣಗಳನ್ನು ಅನುಸರಿಸುವ ಮೂಲಕ ಮತ್ತು ದೇಶದ ನಿಯಮಗಳನ್ನು ಅನುಸರಿಸುವ ಮೂಲಕವಾಗಿದೆ.

**ರಾಷ್ಟ್ರೀಯ ಪ್ರಗತಿ:** ಸಾಮಾನ್ಯವಾಗಿ ಹೇಳುವುದಾದರೆ, ಇಂದಿನ ಕಾಲದಲ್ಲಿ ಬಹುತೇಕ ದೇಶಗಳು ಪ್ರಜಾಪ್ರಭುತ್ವವನ್ನು ಹೊಂದಿವೆ.

ಆದುದರಿಂದ ಒಬ್ಬ ವ್ಯಕ್ತಿ ಅಥವಾ ಗುಂಪು ಸರಕಾರವನ್ನು ಬದಲಾಯಿಸಲು ಬಯಸಿದರೆ ಪ್ರಜಾಪ್ರಭುತ್ವ ವಿಧಾನವನ್ನು ಬಳಸಿ ಹಾಗೆ ಮಾಡಬಹುದು. ಅವರು ಚುನಾವಣೆ ಮೂಲಕ ತಮ್ಮ ಅಭಿಪ್ರಾಯವನ್ನು ಪ್ರಕಟಿಸಬೇಕು. ಚುನಾವಣೆಯಲ್ಲಿ ಮತದಾನ ಮಾಡುವಾಗ ಸ್ವಾರ್ಥ ಉದ್ದೇಶವನ್ನು ಹೊಂದದೆ ದೇಶದ ಹಿತವನ್ನು ಪರಿಗಣಿಸಬೇಕೆಂದು ಇಸ್ಲಾಮ್ ಹೇಳುತ್ತದೆ. ಯಾವ ಉಮೇದುದಾರನಿಂದ ಅಥವಾ ಯಾವ ಪಕ್ಷದಿಂದ ತನಗೆ ಪ್ರಯೋಜನ ಸಿಗುವುದು ಎಂದು ಪರಿಗಣಿಸದೆ ಯಾವ ವ್ಯಕ್ತಿಯಿಂದ ಅಥವಾ ಯಾವ ಪಕ್ಷದಿಂದ ದೇಶಕ್ಕೆ ಪ್ರಯೋಜನ ಸಿಗುವುದು ಎಂಬುದನ್ನು ಪರಿಗಣಿಸಿ ಮತದಾನ ಮಾಡಬೇಕು. ಸರಕಾರದ ನಿರ್ಮಾಣಕ್ಕೆ ನೀಡುವ ಮತ ಒಂದು ವಿಶ್ವಸ್ತ ನಿಧಿಯಾಗಿದೆ. ಅದನ್ನು ಅರ್ಹರಾದವರಿಗೆ ಮಾತ್ರ ನೀಡಬೇಕಾಗಿದೆ. ನೈಜ ಇಸ್ಲಾಮ್ ಇದನ್ನೇ ಉಪದೇಶಿಸುತ್ತದೆ. ಇದೇ ನಿಜವಾದ ದೇಶನಿಷ್ಠೆ ಮತ್ತು ದೇಶಭಕ್ತಿಯಾಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 59ರಲ್ಲಿ ಅಲ್ಲಾಹನು ಹೇಳಿರುವುದೇನೆಂದರೆ, ಜನರು ವಿಶ್ವಸ್ತ ನಿಧಿಗಳನ್ನು ಅದಕ್ಕೆ ಅರ್ಹರಾದವರಿಗೆ ನೀಡಬೇಕೆಂದೂ ಅಧಿಕಾರಿಗಳು ತೀರ್ಪು ನೀಡುವಾಗ ನ್ಯಾಯಯುತವಾಗಿಯೂ ಪ್ರಾಮಾಣಿಕತೆಯಿಂದಲೂ ತೀರ್ಪು ನೀಡಬೇಕೆಂದೂ ಆಗಿದೆ. ದೇಶಕ್ಕೆ ನಿಷ್ಠರಾದ ದೇಶಭಕ್ತರು ಮತದಾನದ ಮೂಲಕ ಅಧಿಕಾರ ನೀಡುವಾಗ ಅರ್ಹರಾದವರಿಗೆ ಅಧಿಕಾರ ನೀಡಿದರೆ ದೇಶವು ಪ್ರಗತಿ ಹೊಂದಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸೇರುವುದು.

**ಮುಷ್ಕರ ಮತ್ತು ಪ್ರತಿಭಟನೆ:** ಲೋಕದ ಅನೇಕ ದೇಶಗಳಲ್ಲಿ ಸರಕಾರದ ವಿರುದ್ಧ ಜನರು ಮುಷ್ಕರಗಳಲ್ಲೂ ಪ್ರತಿಭಟನೆ – ಪ್ರಕಟನೆಗಳಲ್ಲೂ ಭಾಗವಹಿಸುವುದು ಕಾಣುತ್ತದೆ. ತೃತೀಯ ದೇಶಗಳಲ್ಲಿ ಪ್ರತಿಭಟನೆ ನಡೆಸುವ ಪ್ರದರ್ಶನಾಕಾರರು ಸರಕಾರಿ ಆಸ್ತಿಗಳನ್ನೂ ಜನರ ಆಸ್ತಿಗಳನ್ನೂ ಧ್ವಂಸಗೊಳಿಸುತ್ತಾರೆ. ಇಂತಹ ಕೃತ್ಯಗಳಿಗೆ ದೇಶನಿಷ್ಠೆಯೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಮುಷ್ಕರಗಳನ್ನೂ ಪ್ರತಿಭಟನೆ – ಪ್ರದರ್ಶನಗಳನ್ನೂ ಶಾಂತಿಯುತವಾಗಿ ನಡೆಸಿದರೂ ಅದರ ಪರಿಣಾಮ ಹಾನಿಕರವೇ ಆಗಿರುತ್ತದೆ. ಶಾಂತಿಯುತ ಮುಷ್ಕರಗಳಿಂದಲೂ ಹೆಚ್ಚಿನ ಸಂದರ್ಭಗಳಲ್ಲಿ ಮಿಲಿಯಗಟ್ಟಲೆ ಹಣದ ಆರ್ಥಿಕ ನಷ್ಟವುಂಟಾಗುತ್ತದೆ. ಯಾವ ಸಂದರ್ಭದಲ್ಲೂ ಇಂತಹ ಪ್ರತಿಭಟನೆಗಳನ್ನು ದೇಶಕ್ಕೆ ನಿಷ್ಠೆ ಎಂದು ಪರಿಗಣಿಸಲಾಗದು. ಅಹ್ಮದಿಯಾ ಜಮಾಅತಿನ ಸ್ಥಾಪಕರು ಒಂದು ಸುವರ್ಣ ತತ್ವವನ್ನು ಪ್ರತಿಪಾದಿಸಿದ್ದಾರೆ. ನಾವು ಎಲ್ಲ ಸಂದರ್ಭಗಳಲ್ಲೂ ಅಲ್ಲಾಹನಿಗೆ, ಅವನ ಸಂದೇಶವಾಹಕರಿಗೆ ಮತ್ತು ದೇಶವನ್ನು ಆಳುವವರಿಗೆ ವಿಧೇಯರಾಗಬೇಕೆಂಬುದೇ ಆ ತತ್ವವಾಗಿದೆ. ಇದು ಪವಿತ್ರ ಖುರ್‌ಆನ್ ಉಪದೇಶಿಸುವ ತತ್ವವೇ ಆಗಿದೆ. ಆದುದರಿಂದ ಮುಷ್ಕರಗಳಿಗೆ ಅನುಮತಿ ಇರುವ ದೇಶಗಳಲ್ಲೂ ಮುಷ್ಕರಗಳನ್ನೂ ಪ್ರತಿಭಟನೆಗಳನ್ನೂ ಹೇಗೆ ನಡೆಸಬೇಕೆಂದರೆ, ಅದರಿಂದ ದೇಶಕ್ಕೆ ಮತ್ತು ಆರ್ಥಿಕ ವ್ಯವಸ್ಥೆಗೆ ಯಾವ ಹಾನಿಯೂ ಉಂಟಾಗಬಾರದು. ಒಟ್ಟಿನಲ್ಲಿ, ಇವು ನೈಜ ಮುಸ್ಲಿಮರನ್ನು ದೇಶಭಕ್ತಿ ಮತ್ತು ದೇಶನಿಷ್ಠೆಯ ಯಥಾರ್ಥ ಆವಶ್ಯಕತೆಯ ಕಡೆಗೆ ಮಾರ್ಗದರ್ಶನವನ್ನೀಯುವ ಇಸ್ಲಾಮಿಕ ಪಾಠಗಳ ಕೆಲವು ಅಂಶಗಳಾಗಿವೆ.

**ರಾಷ್ಟ್ರ ನಾಯಕರು:** ಕೊನೆಯದಾಗಿ ನಾನು ಹೇಳಲು ಬಯಸುವುದೇನೆಂದರೆ, ಇಂದು ಲೋಕವು ಒಂದು ಜಾಗತಿಕ ಗ್ರಾಮವಾಗಿರುವುದಾಗಿ ನಾವು ಕಾಣುತ್ತೇವೆ. ಮಾನವರೆಲ್ಲರೂ ಪರಸ್ಪರ ಬಹಳ ಹತ್ತಿರವಾಗಿರುವರು. ಎಲ್ಲ ದೇಶಗಳಲ್ಲೂ ಎಲ್ಲ ಜನಾಂಗಗಳ, ಎಲ್ಲ ಧರ್ಮಗಳ ಮತ್ತು ಎಲ್ಲ ಸಂಸ್ಕೃತಿಗಳ ಜನರನ್ನು ಕಾಣಬಹುದಾಗಿದೆ. ಪ್ರತಿ ದೇಶದ ನಾಯಕರು ತಮ್ಮ ದೇಶದ ನಿವಾಸಿಗಳಾದ ಎಲ್ಲರ ಭಾವನೆಗಳನ್ನು ಗೌರವಿಸಬೇಕು. ರಾಜಕಾರಣಿಗಳು ಮತ್ತು ಸರಕಾರಗಳು ಸತ್ಯ ಮತ್ತು ನ್ಯಾಯಪಾಲನೆ ಮಾಡುವಂತಹ ನಿಯಮಗಳನ್ನು ರಚಿಸಲು ಕಠಿಣ ಪ್ರಯತ್ನ ಮಾಡಬೇಕು. ಜನರಿಗೆ ಕಷ್ಟಕರವಾದ ಮತ್ತು ನಿರಾಶದಾಯಕ ನಿಯಮಗಳನ್ನು ರಚಿಸಬಾರದು. ಅನ್ಯಾಯ ಮತ್ತು ದೌರ್ಜನ್ಯವನ್ನು ಅಳಿಸಿಬಿಡಬೇಕು ಮತ್ತು ನಿಜವಾದ ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸಬೇಕು.

**ಸೃಷ್ಟಿಕರ್ತನನ್ನು ಗುರುತಿಸಬೇಕು:** ಇದಕ್ಕೆ ಇರುವ ಉತ್ತಮ ಮಾರ್ಗ ಸೃಷ್ಟಿಕರ್ತನಾದ ದೇವನನ್ನು ಲೋಕವು ಗುರುತಿಸಬೇಕು ಎಂಬುದಾಗಿದೆ. ಎಲ್ಲ ರೀತಿಯ ನಿಷ್ಠೆಗಳು ದೇವನೊಂದಿಗೆ ಇರುವ ನಿಷ್ಠೆಯೊಂದಿಗೆ ಜೋಡಿಸಲ್ಪಡಬೇಕು. ಹೀಗೆ ಮಾಡಲು ಸಾಧ್ಯವಾದರೆ ಅತ್ಯುನ್ನತ ಮಟ್ಟದ ದೇಶನಿಷ್ಠೆಯು ಎಲ್ಲ ದೇಶಗಳಲ್ಲಿ ಸ್ಥಾಪಿತವಾಗುವುದನ್ನು ನಾವು ಕಾಣುವೆವು. ಲೋಕದಾದ್ಯಂತ ಶಾಂತಿ ಮತ್ತು ಭದ್ರತೆ ಸ್ಥಾಪನೆಯಾಗುವ ಮಾರ್ಗಗಳು ತೆರೆದುಕೊಳ್ಳುವುವು."

***ಮೇಲಿನ ಉದ್ಧರಣೆಯನ್ನು ಲೋಕದಾದ್ಯಂತ ವ್ಯಾಪಿಸಿರುವ ಅಹ್ಮದಿಯಾ ಜಮಾಅತಿನ ಸರ್ವೋನ್ನತ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಮಾಡಿದ ಭಾಷಣದಿಂದ ಸಂಗ್ರಹಿಸಲಾಗಿದೆ. ಅವರು ವಾಗ್ದತ್ತ ಮಸೀಹ್ ಮತ್ತು ಇಮಾಮ್ ಮಹ್‌ದಿಯರ ಐದನೆಯ ಖಲೀಫರಾಗಿದ್ದಾರೆ. ಈ ಭಾಷಣದ ಪೂರ್ಣರೂಪ "ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ" ಎಂಬ ಪುಸ್ತಕದಲ್ಲಿ ಲಭ್ಯವಿದೆ. ಈ ಪುಸ್ತಕದಲ್ಲಿ ಅವರು ಬ್ರಿಟಿಷ್ ಪಾರ್ಲಿಮೆಂಟ್, ಯೂರೋಪಿಯನ್ ಪಾರ್ಲಿಮೆಂಟ್, ನ್ಯೂಝಿಲೆಂಡಿನ ಪಾರ್ಲಿಮೆಂಟ್ ಮತ್ತು ವಾಶಿಂಗ್‌ಟನ್ ಡಿ.ಸಿ.ಯ ಕೆಪಿಟೋಲ್ ಹಿಲ್‌ನಲ್ಲಿ ಮಾಡಿದ ಭಾಷಣಗಳನ್ನು ಒಳಪಡಿಸಲಾಗಿದೆ.***

***ಅಲ್ಲಾಹನು ನಮ್ಮನ್ನೆಲ್ಲ ಭಾರತದ ನಿಷ್ಠಾವಂತ ಮತ್ತು ದೇಶಭಕ್ತ ಪ್ರಜೆಯನ್ನಾಗಿ ಮಾಡಲಿ – ಆಮೀನ್.***

# ಇಸ್ಲಾಮಿನ ಸಂದೇಶ

◆ ಸರ್ ಮುಹಮ್ಮದ್ ಝಫರುಲ್ಲಾ ಖಾನ್
ಅಂತರಾಷ್ಟ್ರೀಯ ನ್ಯಾಯಾಲಯದ ಮಾಜಿ ಅಧ್ಯಕ್ಷ

**ಇಸ್ಲಾಮ್ ಅದ್ವಿತೀಯ ಧರ್ಮ**

ಲೋಕದಲ್ಲಿರುವ ಮಹಾನ್ ಧರ್ಮಗಳಲ್ಲಿ ಇಸ್ಲಾಮ್ ಅದ್ವಿತೀಯ ಸ್ಥಾನವನ್ನು ಹೊಂದಿದೆ. ಅದು ಪುರಾಣ ಕಥೆಗಳನ್ನು ಅವಲಂಬಿಸದ ಏಕಮಾತ್ರ ಧರ್ಮವಾಗಿದೆ. ಅದು ಸಾಬೀತಾದ ಮತ್ತು ಅಂಗೀಕರಿಸಲಾದ ಸತ್ಯಗಳ ಮೇಲೆ ಆಧಾರಗೊಂಡಿರುವ ಧರ್ಮವಾಗಿದೆ. ಇಸ್ಲಾಮಿನ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಚಾರಿತ್ರಿಕ ವ್ಯಕ್ತಿಯಾಗಿದ್ದು ಅವರ ಜೀವನ ಚರಿತ್ರೆಯು ದಾಖಲಿಸಲ್ಪಟ್ಟಿದೆ. ಇಪ್ಪತ್ತಮೂರು ವರ್ಷಗಳ ಕಾಲ ಅವರಿಗೆ ದೇವನಿಂದ ಅವತೀರ್ಣವಾದ ಸಂದೇಶವಾಣಿಗಳು ಪವಿತ್ರ ಖುರ್‌ಆನಿನಲ್ಲಿ ಸಂಪೂರ್ಣವಾಗಿ ಸಂರಕ್ಷಿಸಲ್ಪಟ್ಟಿವೆ. ಪವಿತ್ರ ಖುರ್‌ಆನಿನಲ್ಲಿ ಇದರ ಬಗ್ಗೆ ಅಲ್ಲಾಹನು ಹೀಗೆ ಹೇಳಿರುವನು:

"ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದ್ದು. ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು." (15:10).

ಈ ಪವಿತ್ರ ವಚನ ಹೀಗೆ ಸೂಚಿಸುತ್ತದೆ:

ಒಂದನೆಯದಾಗಿ, ಪವಿತ್ರ ಖುರ್‌ಆನಿನ ಮೂಲ ಪಾಠವು ಸಂಪೂರ್ಣವಾಗಿ ಪರಿಶುದ್ಧವಾಗಿ ಸಂರಕ್ಷಿಸಲ್ಪಟ್ಟಿದೆ. ಪವಿತ್ರ ಖುರ್‌ಆನಿನ ವಚನಗಳು ಇಪ್ಪತ್ತಮೂರು ವರ್ಷಗಳ ಕಾಲದಲ್ಲಿ ಅವತೀರ್ಣವಾಗುತ್ತಾ ಇದ್ದವು. ಮೊದಲು ಮಕ್ಕದಲ್ಲೂ ಅನಂತರ ಮದೀನದಲ್ಲಿಯೂ ಪವಿತ್ರ ಖುರ್‌ಆನ್ ವಚನಗಳು ಅವತೀರ್ಣವಾಗುತ್ತಾ ಇದ್ದವು. ಈ ಕಾಲಘಟ್ಟದಲ್ಲಿ ಹಿಂಸಾಚಾರ, ಗಲಭೆಗೊಂದಲಗಳು, ಯುದ್ಧಗಳು ನಡೆಯುತ್ತಿದ್ದುವು. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಅಕ್ಷರಾಭ್ಯಾಸ ಗಳಿಸಿದವರಾಗಿರಲಿಲ್ಲ. ಬಾಯಿಪಾಠ ಮೂಲಕ ಹೊರತು ಅವತೀರ್ಣಗೊಂಡ ವಚನಗಳನ್ನು ದಾಖಲಿಸಿಡುವ ಅನ್ಯ ಸುರಕ್ಷಿತ ಮಾರ್ಗಗಳು ಲಭ್ಯವಾಗಿರಲಿಲ್ಲ. ಪವಿತ್ರ ಖುರ್‌ಆನಿನ ಮೂಲ ಪಾಠ ಸಂಪೂರ್ಣವಾಗಿ ಸಂರಕ್ಷಿಸಲ್ಪಟ್ಟದ್ದು ಒಂದು ಮಹಾ ಅದ್ಭುತ ಸತ್ಯವಾಗಿದೆ. ಅದರ ಪ್ರತಿಯೊಂದು ಅಕ್ಷರ ಮತ್ತು ಬಿಂದುಗಳು ಸಂರಕ್ಷಿಸಲ್ಪಟ್ಟಿವೆ. ಪವಿತ್ರ ಖುರ್‌ಆನ್ ದೈವಿಕವಾಗಿ ಅವತೀರ್ಣವಾದುದೆಂದು ನಂಬದ ಪಾಶ್ಚಿಮಾತ್ಯ ವಿದ್ವಾಂಸರು ಹೀಗೆ ಹೇಳಿದ್ದಾರೆ: "ಮುಹಮ್ಮದ್ ದೈವಿಕ ಸಂದೇಶವೆಂದು ಹೇಳಿ ಬಹಿರಂಗಪಡಿಸಿದ ವಚನಗಳೇ ಇಂದಿನ ಖುರ್‌ಆನ್‌ನಲ್ಲಿದೆ."

ಎರಡನೆಯದಾಗಿ, ಯಾವ ಭಾಷೆಯಲ್ಲಿ ಪವಿತ್ರ ಖುರ್‌ಆನ್ ಅವತೀರ್ಣಗೊಂಡಿದೆಯೋ ಅದು ಈಗಲೂ ಜೀವಂತ ಭಾಷೆಯಾಗಿ ಮುಂದುವರಿಯಬೇಕು. ಪವಿತ್ರ ಖುರ್‌ಆನಿನ ಭಾಷೆಯಾದ ಶುದ್ಧ ಅರಬಿ ಭಾಷೆ ಇಂದು ಲೋಕದ ಅನೇಕ ದೇಶಗಳಲ್ಲಿ ತಮ್ಮ ಭಾಷೆಯಾಗಿ ಜನರು ಬಳಸುತ್ತಾ ಇದ್ದಾರೆ. ಹಝ್ರತ್ ಪೈಗಂಬರರ(ಸ)ಕಾಲದಲ್ಲಿ ಈ ಭಾಷೆಯನ್ನು ಬಳಸುತ್ತಿದ್ದವರಿಗಿಂತ ಈ ಸಂಖ್ಯೆ ನೂರಾರು ಪಟ್ಟು ಹೆಚ್ಚಿಗೆ ಇದೆ.

ಮೇಲೆ ವಿವರಿಸಿದ ಎರಡು ಅಂಶಗಳು ಪವಿತ್ರ ಖುರ್‌ಆನನ್ನು ಸಂರಕ್ಷಿಸಲು ಅತ್ಯಾವಶ್ಯಕವಾಗಿದ್ದು ಅದರ ಬಗ್ಗೆ ಹಝ್ರತ್ ಪೈಗಂಬರರಿಗೆ(ಸ) ಮುಂಚಿತವಾಗಿ ಖಾತರಿ ನೀಡಲು ಸಾಧ್ಯವಿರಲಿಲ್ಲ.

ಮೂರನೆಯದಾಗಿ, ಇನ್ನಷ್ಟು ಹೆಚ್ಚು ಸಂರಕ್ಷಣೆಯ ಆವಶ್ಯಕತೆ ಇತ್ತು. ಜೀವನವು ಚಲನಾತ್ಮಕವಾಗಿದೆ. ಮನುಷ್ಯನ ಜೀವಿತದ ರೀತಿ ಬದಲಾಯಿಸುತ್ತಾ ಇರುತ್ತದೆ. ಸಮಯವು ದಾಟಿ ಹೋದ ಹಾಗೆ ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳಲ್ಲಿ ಅವನತಿ ಉಂಟಾಗುತ್ತದೆ ಎಂದು ಚರಿತ್ರೆ ಸಾಕ್ಷ್ಯ ನುಡಿಯುತ್ತದೆ. ಆದುದರಿಂದ ಪವಿತ್ರ ಖುರ್‌ಆನಿನ ಮಾರ್ಗದರ್ಶನಗಳನ್ನು ವಸ್ತುನಿಷ್ಠವಾಗಿ ಮನವರಿಕೆ ಮಾಡಿಕೊಳ್ಳುವುದರಲ್ಲಿ ಮತ್ತು ಆಯಾ ಕಾಲದ ಸನ್ನಿವೇಶಗಳಿಗೂ ಪರಿಸ್ಥಿತಿಗಳಿಗೂ ಅಳವಡಿಸಿಕೊಳ್ಳುವುದರಲ್ಲಿ ಕುಂದು ಕೊರತೆಗಳು ಉಂಟಾಗುವುದು ಅನಿವಾರ್ಯವಾಗಿತ್ತು. ದೈವಿಕ ಸಂದೇಶದ ಪರಿಪೂರ್ಣ ಸಂರಕ್ಷಣೆಯೊಂದಿಗೆ ಆಧ್ಯಾತ್ಮಿಕ ಪುನಶ್ಚೇತನಗೊಳಿಸುವಿಕೆಯ ಆವಶ್ಯಕತೆಯೂ ಇತ್ತು. ಈ ಆವಶ್ಯಕತೆಗಳನ್ನು ಈಡೇರಿಸಲು ಮುಸ್ಲಿಮ್ ಸಮುದಾಯದಲ್ಲಿ ಪ್ರತಿ ಶತಮಾನದ ಆದಿಭಾಗದಲ್ಲಿ ಒಬ್ಬ ಸುಧಾರಕರನ್ನು ನೇಮಿಸಿ ಆಯಾ ಕಾಲದ ಪರಿಸ್ಥಿತಿಗೆ ಅನುಸಾರವಾಗಿ ಪವಿತ್ರ ಖುರ್‌ಆನಿನ ಮಾರ್ಗದರ್ಶನದ ಕಡೆಗೆ ಜನರ ಗಮನ ಹರಿಸುವಂತೆ ಅಲ್ಲಾಹನು ಮಾಡುವನೆಂದು ಹಝ್ರತ್ ಪೈಗಂಬರರು(ಸ) ಹೇಳಿರುವರು. ಹಝ್ರತ್ ಪೈಗಂಬರರ(ಸ)ಈ ಭವಿಷ್ಯವಾಣಿ ಈಡೇರಿದುದಾಗಿ ಚರಿತ್ರೆ ಸಾಕ್ಷ್ಯವಹಿಸಿದೆ.

**ಜೀವಂತ ಸಂದೇಶ**

ಕಳೆದ ಶತಮಾನದಲ್ಲಿ ಮಾನವರ ಜೀವಿತದ ಎಲ್ಲ ವಿಭಾಗಗಳಲ್ಲೂ ಮಹತ್ವದ ಕ್ರಾಂತಿ ಕಂಡುಬಂತು. ಶತಮಾನಗಳಷ್ಟು ಕಾಲ ಅಂಗೀಕರಿಸಲಾದ ಮೌಲ್ಯಗಳು ವೇಗವಾಗಿ ಬದಲಾಯಿಸಲು ತೊಡಗಿದುವು. ಮಾನವ ಜೀವಿತ ರೀತಿಯೇ ಬದಲಾಗಿದ್ದು ವಿದ್ವಾಂಸರು ಮತ್ತು ಚಿಂತಕರು ಹೊಸ ದೈವಿಕ ಸಂದೇಶಗಳ ಆವಶ್ಯಕತೆ ಬಗ್ಗೆ ಒತ್ತಿ ಹೇಳಲು ತೊಡಗಿರುವರು. ಆದರೆ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳುವುದೇನೆಂದರೆ ಅದರಲ್ಲಿ ಅಡಕವಾದ ಮಾರ್ಗದರ್ಶನ ಎಲ್ಲ ಕಾಲಗಳಿಗೂ ಎಲ್ಲ ಸನ್ನಿವೇಶಗಳಿಗೂ ಸಾಕಾಗುವಂತೆ ಇದೆ.

ಇಂದಿನ ಕಾಲದ ಪರಿಸ್ಥಿತಿಗಳಿಗೆ ಮತ್ತು ಮುಂದೆ ಹೆಚ್ಚು ವರ್ಧಿಸುವ ಪರಿಸ್ಥಿತಿಗಳಿಗೆ ಅನುಯೋಜ್ಯವಾದ ಮಾರ್ಗದರ್ಶನ ಪವಿತ್ರ ಖುರ್‌ಆನ್ ಹೇಗೆ ನೀಡುವುದು? ಇಂತಹ ಸನ್ನಿವೇಶಗಳನ್ನು ಎದುರಿಸಲು ಹಝ್ರತ್ ಪೈಗಂಬರ್[ಸ]ಅವರು ಜೀವಿಸಿದ ಪೀಳಿಗೆಗೆ ನೇಮಿಸಲ್ಪಟ್ಟ ಹಾಗೆಯೇ ಆ ಪೀಳಿಗೆಯೊಂದಿಗೆ ಇನ್ನೂ ಸೇರದ ಬೇರೆ ಪೀಳಿಗೆಯಲ್ಲೂ ನೇಮಿಸಲ್ಪಡುವರು ಎಂದು ಪವಿತ್ರ ಖುರ್‌ಆನ್ ಅಧ್ಯಾಯ 62 ವಚನ 3–4ರಲ್ಲಿ ಹೇಳಿದೆ. ಇದರ ಅರ್ಥ ಹೀಗೆ: ಹಝ್ರತ್ ಪೈಗಂಬರರು[ಸ]ಆಧ್ಯಾತ್ಮಿಕವಾಗಿ ಪುನರಾಗಮಿಸಿ ಹೊಸ ಯುಗದ ಆವಶ್ಯಕತೆಗಳಿಗೆ ಅನುಸಾರ ಪವಿತ್ರ ಖುರ್‌ಆನಿನಿಂದ ಮಾರ್ಗದರ್ಶನ ನೀಡುವರು. ಖಾದಿಯಾನಿನಲ್ಲಿ ಜನಿಸಿದ ಅಹ್ಮದ್ (1835–1908) ರವರ ಮೂಲಕ ಈ ವಾಗ್ದಾನ ಈಗ ಈಡೇರಿದೆ. ಆದಮ್[ಅ] ಆಗಮಿಸಿದ ಕಾಲದ ಪರಿಸ್ಥಿತಿಯೇ ಅವರು ಆಗಮಿಸಿದ ಹತ್ತೊಂಬತ್ತನೆಯ ಶತಮಾನದ ಅಂತಿಮ ಕಾಲದ ಸ್ಥಿತಿಯಾಗಿದೆ ಎಂದು ಅವರು ಮಾನವರಿಗೆ ಮುನ್ನೆಚ್ಚರಿಕೆ ನೀಡಿದರು. ಅವರು ತನಗೆ ಅಲ್ಲಾಹನಿಂದ ದೊರೆತ ಸಂದೇಶವಾಣಿಗಳ ಬೆಳಕಿನಲ್ಲಿ ಈ ಕಾಲಘಟ್ಟದ ಜನರಿಗೆ ಅತ್ಯಾವಶ್ಯಕವಾದ ಮಾರ್ಗದರ್ಶನವನ್ನು ಪವಿತ್ರ ಖುರ್‌ಆನ್‌ನಿಂದ ನೀಡಿದರು.

ಹೀಗೆ ಇಸ್ಲಾಮ್ ತನ್ನ ಪುನಶ್ಚೇತನದ ವ್ಯವಸ್ಥೆ ತನ್ನಲ್ಲಿಯೇ ಹೊಂದಿದೆ. ಅದು ವಿದ್ವಾಂಸರ ವ್ಯಾಖ್ಯಾನಗಳ ಮೂಲಕ ಮಾತ್ರವಲ್ಲ, ದೇವನ ಸಂದೇಶವಾಣಿಗಳ ಮೂಲಕ ಅವನು ಆಯ್ಕೆ ಮಾಡಿದ ಮಹಾ ಪುರುಷರ ಮೂಲಕ ವಿವಿಧ ಕಾಲಘಟ್ಟಗಳಲ್ಲಿ ಸಂಭವಿಸುತ್ತದೆ. ಇಲ್ಲಿ ಇನ್ನೊಂದು ವಿಷಯವನ್ನು ನೆನಪಿಡಬೇಕಾಗಿದೆ. ಪವಿತ್ರ ಖುರ್‌ಆನ್ ಆದಿಯಿಂದ ಅಂತ್ಯದ ತನಕ ದೇವ ವಚನಗಳನ್ನು ಒಳಗೊಂಡಿದೆ. ಆದುದರಿಂದ ಅದು ಅತ್ಯಂತ ಶಕ್ತಿಶಾಲಿಯೂ ಅನೇಕ ಅರ್ಥಗಳನ್ನು ಹೊಂದಿರುವುದೂ ಆಗಿದೆ. ವಿಶ್ವವು ದೇವನ ಕೃತಿಯಾಗಿರುವ ಹಾಗೆ ಪವಿತ್ರ ಖುರ್‌ಆನ್ ದೇವನ ವಚನಗಳಾಗಿವೆ. ಈ ಕಾರಣದಿಂದ ದೇವ ವಚನವಾದ ಪವಿತ್ರ ಖುರ್‌ಆನ್ ಮತ್ತು ದೇವ ಸೃಷ್ಟಿಯಾದ ವಿಶ್ವದ ಮಧ್ಯೆ ಸಂಪೂರ್ಣ ಒಮ್ಮತವಿದೆ. ವಿಶ್ವವು ದೇವ ನಿಯಮಗಳಿಗೆ ಅಧೀನವಾಗಿದೆ ಎಂದೂ ಅದನ್ನು ಮನುಷ್ಯನ ಸೇವೆಗೋಸ್ಕರ ಸೃಷ್ಟಿಸಲಾಗಿದೆ ಎಂದೂ ಪವಿತ್ರ ಖುರ್‌ಆನ್ ಹೇಳುತ್ತದೆ. ಉದಾಹರಣೆಗೆ ಈ ವಚನಗಳನ್ನು ನೋಡಿರಿ:

"ಅಲ್ಲಾಹನು ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದವನೂ ಮುಗಿಲಿನಿಂದ ಮಳೆ ಸುರಿಸಿ ಅದರ ಮೂಲಕ ನಿಮಗೆ ಆಹಾರವಾಗಿ ಹಣ್ಣು ಹಂಪಲುಗಳನ್ನು ಉತ್ಪಾದಿಸಿದವನೂ ಆಗಿದ್ದಾನೆ. ಸಮುದ್ರದಲ್ಲಿ ಅವನ ಆಜ್ಞೆಯಂತೆ ಚಲಿಸುವ ನೌಕೆಗಳನ್ನು ಸಹ ಅವನು ನಿಮಗೆ ಒದಗಿಸಿ ಕೊಟ್ಟಿರುವನು. (ನಿಮ್ಮ ಉಪಯೋಗಕ್ಕಾಗಿ) ಅವನು ನದಿಗಳನ್ನೂ ನಿಮಗೆ ಒದಗಿಸಿ ಕೊಟ್ಟಿರುವನು. ಅವನು ಸೂರ್ಯನನ್ನೂ ಚಂದ್ರನನ್ನೂ ಅವುಗಳು ನಿರಂತರವಾಗಿ ತಮ್ಮ ಕಾರ್ಯಗಳನ್ನು ನಿರ್ವಹಿಸುವಂತೆ ನಿಮ್ಮ ಪ್ರಯೋಜನಕ್ಕಾಗಿ ಏರ್ಪಾಡು ಮಾಡಿ ಕೊಟ್ಟಿರುವನು. (ಅದೇ ಪ್ರಕಾರ) ರಾತ್ರಿಯನ್ನೂ ಹಗಲನ್ನೂ ನಿಮಗಾಗಿ ಏರ್ಪಡಿಸಿದ್ದಾನೆ. ನೀವು ಅವನಿಂದ ಬೇಡಿದನ್ನೆಲ್ಲ ಅವನು ನಿಮಗೆ ಒದಗಿಸಿರುವನು. ಅಲ್ಲಾಹನ ಅನುಗ್ರಹಗಳನ್ನು ಎಣಿಕೆ ಮಾಡಲು ನೀವು ಪ್ರಯತ್ನಿಸಿದರೆ ಅವನ್ನೆಲ್ಲ ಲೆಕ್ಕ ಹಾಕಲು ನಿಮ್ಮಿಂದ ಸಾಧ್ಯವಿಲ್ಲ." (14:33–35).

ಪುನಃ ಹೀಗೆ ಹೇಳಲಾಗಿದೆ: "ಇರುಳನ್ನೂ ಹಗಲನ್ನೂ ಸೂರ್ಯನನ್ನೂ ಚಂದ್ರನನ್ನೂ ನಿಮ್ಮ ಪ್ರಯೋಜನಕ್ಕಾಗಿ ಅವನು ವ್ಯವಸ್ಥೆಗೊಳಿಸಿದ್ದಾನೆ. ನಕ್ಷತ್ರಗಳನ್ನು ಸಹ ಅವನ ಆಜ್ಞೆ ಪ್ರಕಾರ ನಿಮ್ಮ ಪ್ರಯೋಜನಕ್ಕಾಗಿ ವ್ಯವಸ್ಥೆಗೊಳಿಸಲಾಗಿದೆ. ವಿವೇಕಶಾಲಿಗಳಿಗೆ ಖಂಡಿತವಾಗಿಯೂ ಅದರಲ್ಲಿ ದೃಷ್ಟಾಂತಗಳಿವೆ. ವಿವಿಧ ಬಣ್ಣಗಳಲ್ಲಿ ಭೂಮಿಯಲ್ಲಿ ಅವನು ನಿಮಗೋಸ್ಕರ ಸೃಷ್ಟಿಸಿರುವ ವಸ್ತುಗಳನ್ನು ಸಹ (ಅವನು ನಿಮ್ಮ ಪ್ರಯೋಜನಕ್ಕಾಗಿ ವ್ಯವಸ್ಥೆ ಗೊಳಿಸಿರುವನು). ಬುದ್ಧಿಶಾಲಿಗಳಿಗೆ ಅದರಲ್ಲಿ ಖಂಡಿತವಾಗಿಯೂ ಹಲವು ದೃಷ್ಟಾಂತಗಳಿವೆ. ಸಮುದ್ರವನ್ನು ಅವನು ನಿಮ್ಮ ಪ್ರಯೋಜನಕ್ಕಾಗಿ ಏರ್ಪಡಿಸಿದ್ದಾನೆ– ಅದರಿಂದ ನೀವು (ಮೀನಿನ) ತಾಜಾ ಮಾಂಸವನ್ನು ತಿನ್ನಲಿಕ್ಕಾಗಿ ಮತ್ತು ನೀವು ಧರಿಸುವ ಅಲಂಕಾರ ವಸ್ತುಗಳನ್ನು ಅದರಿಂದ ಹೊರತೆಗೆಯಲಿಕ್ಕಾಗಿ. ಅದರಲ್ಲಿ (ಜಲವನ್ನು) ಸೀಳಿ ಓಡುತ್ತಿರುವ ನೌಕೆಗಳನ್ನು ನೀನು ಕಾಣಬಹುದು. ಇವೆಲ್ಲ ನೀವು ಅವನ ಅನುಗ್ರಹವನ್ನು ಅರಸಲಿಕ್ಕೂ ಅವನಿಗೆ ಕೃತಜ್ಞರಾಗಿರಲಿಕ್ಕೂ ಆಗಿದೆ." (16:13–15).

ದೇವನ ದೃಷ್ಟಾಂತಗಳ ಬಗ್ಗೆ ಹೇಳಿದುದು ಅವುಗಳ ಬಗ್ಗೆ ಅಧ್ಯಯನ ನಡೆಸಲು ಮತ್ತು ಸಂಶೋಧನೆ ನಡೆಸಿ ಅವುಗಳಿಂದ ಪ್ರಯೋಜನ ಪಡೆಯುವುದನ್ನು ಒತ್ತಿ ಹೇಳಲಿಕ್ಕಾಗಿದೆ. ಅವುಗಳ ಗುಣಗಳ ಬಗ್ಗೆ ಮತ್ತು ಅವುಗಳು ಯಾವ್ಯಾವ ನಿಯಮಗಳಿಗೆ ಅಧೀನವಾಗಿವೆ ಎಂದು ಕಂಡು ಹಿಡಿಯಬೇಕು. ವಿಶ್ವವನ್ನು ಮಾನವನ ಸೇವೆಗೋಸ್ಕರ ಒದಗಿಸಲಾಗಿದೆ ಎಂದು ಹೇಳಿದುದು ಮತ್ತು ಅದು ದೇವನ ನಿಯಮಗಳಿಗೆ ಅಧೀನವಾಗಿದೆ ಎಂದು ಹೇಳಿದುದು ಅದರ ಬಗ್ಗೆ ಜ್ಞಾನ ಗಳಿಸಲು ಮತ್ತು ಅದರ ಬಗ್ಗೆ ಸಂಶೋಧನೆ ನಡೆಸಲು ಒತ್ತಾಯಿಸುವಂತೆ ಇದೆ. ದೇವನ ಬೇರೊಂದು ನಿಯಮ ಮಾತ್ರ ಪ್ರಯತ್ನವನ್ನು ಸೀಮಿತಗೊಳಿಸುತ್ತದೆ:

"ನೀವು ಕೃತಜ್ಞತೆಯುಳ್ಳವರಾದರೆ ನಾನು ಖಂಡಿತವಾಗಿಯೂ ನಿಮಗೆ ಅನುಗ್ರಹಗಳನ್ನು ವೃದ್ಧಿಗೊಳಿಸುವೆನು; ನೀವು ಕೃತಘ್ನರಾದರೆ ನನ್ನ ಶಿಕ್ಷೆ ಕಠೋರವಾಗಿರಬಹುದು." (14:8).

ಮೇಲೆ ಉಲ್ಲೇಖಿಸಿದ ವಚನದಲ್ಲಿ ಹೀಗೆ ಸೂಚಿಸಲಾಗಿದೆ: ದೇವನು ದಯಪಾಲಿಸಿದ ಕೊಡುಗೆಗಳನ್ನು ಮನುಷ್ಯನು ಉತ್ತಮ ರೀತಿಯಲ್ಲಿ ಉಪಯೋಗಿಸುತ್ತಾ ಇದ್ದರೆ ದೇವನು ಆ ಕೊಡುಗೆಗಳನ್ನು ವರ್ಧಿಸುತ್ತಾ ಹೋಗುವನು. ಆದರೆ ಮನುಷ್ಯನು ಅವುಗಳನ್ನು ದುರುಪಯೋಗಪಡಿಸಿದರೆ ದೇವನು ಅದರ ಬಗ್ಗೆ ವಿಚಾರಣೆ ಮಾಡುವನು. ಆಗ ಆ ಕೊಡುಗೆಗಳೇ ಮಾನವನ ನಾಶಕ್ಕೆ ಹೇತುವಾಗಬಲ್ಲವು.

**ಸಾರ್ವಲೌಕಿಕ ಮಾರ್ಗದರ್ಶನ**

ಪವಿತ್ರ ಖುರ್‌ಆನ್ ಪ್ರಕಾರ ದೇವನು ಎಲ್ಲ ಕಾಲಘಟ್ಟಗಳಲ್ಲೂ ಜನರಿಗೆ ತನ್ನ ಪ್ರವಾದಿಗಳಿಗೆ ಅವತೀರ್ಣಗೊಳಿಸಿದ ಸಂದೇಶವಾಣಿಗಳ ಮೂಲಕ ಮಾರ್ಗದರ್ಶನ ನೀಡಿದ್ದನು. ಎಲ್ಲ ಪ್ರವಾದಿಗಳನ್ನು ನಂಬಬೇಕೆಂದು ಸಹ ಪವಿತ್ರ ಖುರ್‌ಆನ್ ಹೇಳಿದುದರಿಂದ ಎಲ್ಲ ಪ್ರವಾದಿಗಳನ್ನು ಮುಸ್ಲಿಮರು ನಂಬಿ ಗೌರವಿಸುತ್ತಾರೆ. ಆದರೆ ಹಿಂದಿನ ಕಾಲದಲ್ಲಿ ಅವತೀರ್ಣವಾದ ಸಂದೇಶವಾಣಿಗಳಿಗೆ ಸೀಮಿತ ಉದ್ದೇಶವಿತ್ತು ಎಂದು ಸಹ ಪವಿತ್ರ ಖುರ್‌ಆನ್ ಹೇಳುತ್ತದೆ. ಪ್ರತಿಯೊಂದು ಜನಾಂಗಕ್ಕೆ ಅದು ತಲಪಿದ್ದ ಬೆಳವಣಿಗೆಗೆ ಅನುಸಾರವಾಗಿ ಸಂದೇಶವಾಣಿ ದೇವನಿಂದ ಅವತೀರ್ಣವಾಗುತ್ತಾ ಇತ್ತು. ಪ್ರತಿಯೊಬ್ಬ ಪ್ರವಾದಿಗೆ ಅವತೀರ್ಣವಾದ ಸಂದೇಶವಾಣಿಗಳಲ್ಲಿ ಮೂಲಭೂತ ಸತ್ಯಗಳು ಅಡಕವಾಗಿದ್ದುವು. ಅವು ಎಲ್ಲ ಮನುಷ್ಯರಿಗೂ ಎಲ್ಲ ಕಾಲಘಟ್ಟಗಳಲ್ಲೂ ಅನ್ವಯಿಸುವಂಥವುಗಳಾಗಿದ್ದುವು. ಆದರೆ ಅದರೊಂದಿಗೆ ಪ್ರಾದೇಶಿಕವಾಗಿ ಅನ್ವಯಿಸುವಂತಹ ಮತ್ತು ತಾತ್ಕಾಲಿಕವಾಗಿ ಅನ್ವಯಿಸುವಂತಹ ಮಾರ್ಗದರ್ಶನಗಳೂ ಅವುಗಳಲ್ಲಿದ್ದುವು. ಅಲ್ಲದೆ ಕಾಲ ದಾಟಿಹೋದ ಹಾಗೆ ಆ ಸಂದೇಶಗಳ ಕೆಲವು ಭಾಗಗಳು ನಷ್ಟವಾದುವು, ಮರೆತು ಹೋದುವು ಅಥವಾ ಮಾರ್ಪಡಿಸಲಾದುವು. ಹಿಂದಿನ ಕಾಲದ ಪ್ರವಾದಿಗಳಿಗೆ ಅವತೀರ್ಣವಾದ ದೈವಿಕ ಸಂದೇಶವಾಣಿಗಳಲ್ಲಿ ಅಡಕವಾಗಿದ್ದ ಶಾಶ್ವತ ಮೌಲ್ಯಗಳನ್ನೊಳಗೊಂಡ ಭಾಗಗಳು ಪವಿತ್ರ ಖುರ್‌ಆನಿನಲ್ಲಿ ಸ್ಥಿರೀಕರಿಸಲಾಗಿದೆ. ಹಿಂದಿನ ಕಾಲದ ಪ್ರವಾದಿಗಳಿಗೆ ಅವತೀರ್ಣವಾದ ಸಂದೇಶವಾಣಿಗಳಲ್ಲಿ ನಷ್ಟವಾದವು, ಮರೆತು ಹೋದವು ಮೊದಲಾದುವು ಪುನಃ ಆವಶ್ಯಕವಾಗಿದ್ದರೆ ಅವುಗಳನ್ನು ಪುನಶ್ಚೇತನಗೊಳಿಸಲಾಯಿತು. ಪ್ರಾದೇಶಿಕವಾಗಿದ್ದುವುಗಳನ್ನೂ ತಾತ್ಕಾಲಿಕವಾಗಿದ್ದುವುಗಳನ್ನೂ ಬಿಟ್ಟು ಬಿಡಲಾಯಿತು. ಹಿಂದಿನ ಕಾಲದ ಸಂದೇಶವಾಣಿಗಳಲ್ಲಿ ಇಲ್ಲದವು ಆದರೆ ಮುಂದೆ ಆವಶ್ಯಕವಾಗಿರುವುವು ಸೇರಿಸಲ್ಪಟ್ಟವು. (ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 107 ಮತ್ತು ಅಧ್ಯಾಯ 3 ವಚನ 8 ನೋಡಿರಿ).

ಹಿಂದೆ ಅವತೀರ್ಣವಾದ ಸಂದೇಶವಾಣಿಗಳನ್ನು ಒಳಗೊಂಡ ಗ್ರಂಥಗಳನ್ನು ಪರಿಶೀಲಿಸಿದರೆ ಅವುಗಳ ಅಧಿಕೃತತೆಯ ಬಗ್ಗೆ, ಭಾಷಾಂತರಗಳ ನಿಖರತೆ ಬಗ್ಗೆ ಮತ್ತು ವ್ಯಾಖ್ಯಾನಗಳ ಬಗ್ಗೆ ಅನೇಕ ಗಂಭೀರ ಪ್ರಶ್ನೆಗಳಿಗೆ ಅವು ಈಡಾಗಿವೆ. ಅನೇಕ ಆಜ್ಞೆಗಳು ಮತ್ತು ವಿಶ್ವಾಸಗಳು ತಾತ್ಕಾಲಿಕ ಸ್ವಭಾವವುಳ್ಳವುಗಳಾಗಿವೆ. ಅಥವಾ ಪ್ರಾದೇಶಿಕವೂ ಕಾಲಹರಣಗೊಂಡವುಗಳೂ ಆಗಿವೆ. ಆ ಗ್ರಂಥಗಳ ಅನುಯಾಯಿಗಳು ಅನುಸರಿಸುವ ವಿಶ್ವಾಸಗಳು ಪ್ರವಾದಿ ಆಗಮಿಸಿದ ನಂತರ ಜನರು ಮಾಡಿದ ವ್ಯಾಖ್ಯಾನ ಅಥವಾ ವಿಶ್ವಾಸ ರೂಪೀಕರಣದಿಂದುಂಟಾದವುಗಳಾಗಿವೆ. ಅವು ವಾಸ್ತವಿಕವಾಗಿ ಮೂಲ ಸಂದೇಶವಾಣಿಗಳಿಗೆ ಸಂಬಂಧವಿಲ್ಲದವುಗಳೂ ಕೆಲವು ಸಾರಿ ಅವುಗಳಿಗೆ ವಿರುದ್ಧವೂ ಆಗಿರುತ್ತವೆ. ಪವಿತ್ರ ಖುರ್‌ಆನ್ ಈ ಎಲ್ಲ ವಿಷಯಗಳನ್ನು ಪ್ರಸ್ತಾಪಿಸಿದೆ. ಎಲ್ಲ ಧಾರ್ಮಿಕ ಗ್ರಂಥಗಳಲ್ಲಿರುವ ಮತ್ತು ಹಿಂದಿನ ಎಲ್ಲ ಪ್ರವಾದಿಗಳಿಗೆ ಲಭಿಸಿದ ಸಂದೇಶವಾಣಿಗಳಲ್ಲಿ ಅಡಕವಾದ ಏಕದೇವ ವಿಶ್ವಾಸ ಮತ್ತು ಪರಲೋಕದ ಬಗ್ಗೆ ವಿಶ್ವಾಸ, ಸಾತ್ವಿಕ ನಡೆವಳಿಕೆ ಮೂಲಕ ದೇವೇಚ್ಛೆಯನ್ನು ಈಡೇರಿಸುವ ಬಗ್ಗೆ ಒತ್ತಿ ಹೇಳಿದೆ. ಹಿಂದಿನ ಪ್ರವಾದಿಗಳು ಸತ್ಯವಂತರೆಂದು ಪವಿತ್ರ ಖುರ್‌ಆನ್ ಪ್ರತಿಪಾದಿಸಿ ಎಲ್ಲ ಕಾಲಗಳಿಗೂ ಎಲ್ಲ ಮಾನವರಿಗೂ ಮಾರ್ಗದರ್ಶನ ನೀಡುವ ಉಪದೇಶಗಳನ್ನು ಹೊಂದಿರುತ್ತದೆ. ಪವಿತ್ರ ಖುರ್‌ಆನ್ ಸಾರ್ವಜನಿಕವಾಗಿ ಎಲ್ಲರಿಗೂ ದೊರೆತದ್ದೂ ಎಲ್ಲರಿಗೂ ಅನ್ವಯಿಸುವಂತಹದ್ದೂ ಆದ ಉಪದೇಶವಾಗಿದೆ. (ಪವಿತ್ರ ಖುರ್‌ಆನ್ 7:159). ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದೆ ಖುರ್‌ಆನ್. (ಪವಿತ್ರ ಖುರ್‌ಆನ್ 2:186).

ಎಲ್ಲ ವಿಚಾರಗಳನ್ನು ವಿಶದಪಡಿಸಲು ಹಾಗೂ ಅಲ್ಲಾಹನಿಗೆ ಶರಣಾಗುವವರಿಗೆ ಮಾರ್ಗದರ್ಶನ ನೀಡಲು ಪವಿತ್ರ ಖುರ್‌ಆನನ್ನು ಅವತೀರ್ಣಗೊಳಿಸಲಾಗಿದೆ. (ಪವಿತ್ರ ಖುರ್‌ಆನ್ 16:90).ದೇವನ ದೃಷ್ಟಾಂತಗಳನ್ನು ವಿವರಿಸುವ ಮೂಲಕ ಪವಿತ್ರ ಖುರ್‌ಆನ್ ದೇವನ ಅಸ್ತಿತ್ವದ ಬಗ್ಗೆ ವಿಶ್ವಾಸವನ್ನು ಮೂಡಿಸುತ್ತದೆ. ಅದು ಮನುಷ್ಯನ ಲೌಕಿಕ, ನೈತಿಕ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಗೆ ಮಾರ್ಗದರ್ಶನ ನೀಡುತ್ತದೆ. ಮನುಷ್ಯನ ಜೀವಿತವನ್ನು ಕ್ರಮಬದ್ಧವಾಗಿ ಮಾಡಲು ಅದು ಆವಶ್ಯಕವಾದುದನ್ನು ಕಲಿಸಿಕೊಡುತ್ತದೆ. ಅದು ತನ್ನ ಉಪದೇಶಗಳಿಗೆ ಕಾರಣವನ್ನು ನೀಡಿ ವೈಚಾರಿಕವಾಗಿ ಉಪದೇಶಗಳನ್ನು ಅಂಗೀಕರಿಸುವಂತೆ ಮಾಡುತ್ತದೆ. ದೇವನೊಂದಿಗೆ ಸಂಬಂಧ ಸ್ಥಾಪನೆಯ ಆವಶ್ಯಕತೆಯನ್ನು ಅದು ವಿವರಿಸುತ್ತದೆ. ಅದು ದೇವನ ಗುಣ ವಿಶೇಷಗಳನ್ನು ವಿವರಿಸಿ ಅವುಗಳ ಬಗ್ಗೆ ಜ್ಞಾನ ಗಳಿಸಿ ಅದರಿಂದ ಲಾಭಗಳಿಸುವ ವಿಧಾನಗಳನ್ನು ವಿವರಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮನುಷ್ಯನನ್ನು ಎಲ್ಲ ಕ್ಷೇತ್ರಗಳಲ್ಲೂ ಅಭಿವೃದ್ಧಿಗೆ ಒಯ್ಯುವ ತತ್ವಗಳನ್ನೂ ನಡೆವಳಿಕೆಗಳನ್ನೂ ಪವಿತ್ರ ಖುರ್‌ಆನ್ ವಿವರಿಸುತ್ತದೆ.(ಪವಿತ್ರ ಖುರ್‌ಆನ್ 16:90).

ಯಾವುದೇ ಕಾಲಘಟ್ಟದಲ್ಲಿ ಪವಿತ್ರ ಖುರ್‌ಆನಿನ ಸಂಪೂರ್ಣ ಅರ್ಥವನ್ನಾಗಲಿ, ವ್ಯಾಖ್ಯಾನವನ್ನಾಗಲಿ ನೀಡಲು ಸಾಧ್ಯವಿಲ್ಲ. ಅದರ ಒಂದು ಭಾಗದ ವ್ಯಾಖ್ಯಾನವನ್ನು ಕೂಡ ಪೂರ್ಣವಾಗಿ ಮಾಡಲು ಸಾಧ್ಯವಿಲ್ಲ. ಪ್ರತಿಯೊಂದು ಕಾಲಘಟ್ಟದಲ್ಲಿ ಅದು ಹೊಸ ಸತ್ಯಗಳನ್ನೂ ಹೊಸ ಮಾರ್ಗದರ್ಶನಗಳನ್ನೂ ನೀಡುತ್ತದೆ. ಅದೊಂದು ಶಾಶ್ವತ ಅದ್ಭುತವೇ ಆಗಿದೆ. (ಪವಿತ್ರ ಖುರ್‌ಆನ್ 18:110). ವಿಶ್ವವು ಸದಾ ಶಕ್ತಿಭರಿತವಾಗಿದೆ. ಪವಿತ್ರ ಖುರ್‌ಆನ್ ಸಹ ಹಾಗೆಯೇ ಇದೆ. ಅದು ಲೋಕದ ಪರಿವರ್ತನೆಯ ಮುಂದಿದೆ ಹೊರತು ಎಂದೂ ಹಿಂದೆ ಆಗಿಲ್ಲ. ಮಾನವ ಜೀವಿತ ಎಷ್ಟು ವೇಗವಾಗಿ ಬದಲಾದರೂ ಪವಿತ್ರ ಖುರ್‌ಆನ್ ಹಾಗೆಯೇ ಮಾರ್ಗದರ್ಶನ ನೀಡುತ್ತಾ

ಹೋಗುವುದು. ಕಳೆದ ಹದಿನಾಲ್ಕು ಶತಮಾನಗಳಲ್ಲಿ ಇದು ಸಾಬೀತಾಗಿದೆ. ಮುಂದೆ ಸಹ ಹೀಗೆಯೇ ಆಗುವುದು.

ಪವಿತ್ರ ಖುರ್‌ಆನ್ ಹೀಗೆ ಘೋಷಿಸಿದೆ: "ಅಸತ್ಯ ಅದರ ಹಿಂದಿನಿಂದಾಗಲಿ, ಅದರ ಮುಂದಿನಿಂದಾಗಲಿ ಅದನ್ನು ಸಮೀಪಿಸಲಾರದು." (ಪವಿತ್ರ ಖುರ್‌ಆನ್ 41:43). ಹಿಂದಿನ ಕಾಲದ ಬಗ್ಗೆ ಸಂಶೋಧನೆ ಮತ್ತು ಮುಂದಿನ ಎಲ್ಲ ಸಂಶೋಧನೆಗಳೂ ಆವಿಷ್ಕಾರಗಳೂ ಈ ಸತ್ಯವನ್ನು ಬೆಂಬಲಿಸುವುವು. ಪವಿತ್ರ ಖುರ್‌ಆನ್ ಎಲ್ಲ ಹಂತಗಳಲ್ಲೂ ಉಪದೇಶಿಸುತ್ತದೆ. ಅದು ಎಲ್ಲ ರೀತಿಯ ಜನರನ್ನು ನೀತಿಕಥೆಗಳು, ಉದಾಹರಣೆಗಳು, ಸಾಕ್ಷ್ಯಾಧಾರಗಳು, ವೈಚಾರಿಕ ಅಂಶಗಳು, ಪ್ರಕೃತಿಯ ನಿರೀಕ್ಷೆ ಮತ್ತು ಅಧ್ಯಯನ, ನೈಸರ್ಗಿಕ, ನೈತಿಕ ಮತ್ತು ಆಧ್ಯಾತ್ಮಿಕ ನಿಯಮಗಳ ಮೂಲಕ ಉಪದೇಶಿಸುತ್ತದೆ. (ಪವಿತ್ರ ಖುರ್‌ಆನ್ 18:55, 39:28, 59:22).

ಪವಿತ್ರ ಖುರ್‌ಆನ್ ಶಾರೀರಿಕ ಮತ್ತು ಸ್ಪರ್ಶೀಯ ಉದಾಹರಣೆ ನೀಡಿ ಆಧ್ಯಾತ್ಮಿಕ ಮತ್ತು ಸ್ಪರ್ಶಿಸಲಾಗದುದನ್ನು ವಿವರಿಸುತ್ತದೆ. ಉದಾಹರಣೆಗೆ ಈ ವಚನ ನೋಡಿರಿ:

"ಇದು ಸಹ ಅವನ ದೃಷ್ಟಾಂತಗಳಲ್ಲಿ ಸೇರುತ್ತದೆ: ನೀನು ಭೂಮಿಯನ್ನು ಶುಷ್ಕವಾಗಿ ಕಾಣುತ್ತಿ. ನಾವು ಅದರ ಮೇಲೆ ಮಳೆ ಸುರಿಸಿದರೆ, ಅದು ಚೈತನ್ಯ ಹೊಂದಿ ಬೆಳೆಯುತ್ತದೆ. ಅದಕ್ಕೆ ಜೀವ ಕೊಡುವವನು ಖಂಡಿತವಾಗಿಯೂ ಮೃತಪಟ್ಟವರನ್ನು ಸಹ ಬದುಕಿಸುವವನು. ನಿಶ್ಚಯವಾಗಿಯೂ ಸರ್ವವಿಚಾರಗಳಲ್ಲೂ ಅವನಿಗೆ ಸಾಮರ್ಥ್ಯವಿದೆ."(ಪವಿತ್ರ ಖುರ್‌ಆನ್ 41:40).

ಈ ವಚನದಲ್ಲಿ ಮನುಷ್ಯರು ಪುನರುಜ್ಜೀವಿಸಲ್ಪಡುವ ಬಗ್ಗೆ ವಿವರಿಸಲಾಗಿದೆ. ಮೃತಪ್ರಾಯವಾದ ಭೂಮಿಯ ಮೇಲೆ ಮಳೆ ಸುರಿದಾಗ ಅದು ಪುನಶ್ಚೇತನಗೊಳ್ಳುವ ಹಾಗೆ ಮೃತರಂತೆ ತೋರುವ ಜನತೆಗೆ ಆಕಾಶದಿಂದ ಆಧ್ಯಾತ್ಮಿಕ ನೀರು ಸುರಿಯುವಾಗ, ಎಂದರೆ ದೇವನ ಸಂದೇಶವಾಣಿಯ ಅವತೀರ್ಣ ಮೂಲಕ ಪುನಶ್ಚೇತನ ಪಡೆಯುತ್ತದೆ. ಈ ವಿಚಾರವನ್ನು ಪವಿತ್ರ ಖುರ್‌ಆನಿನಲ್ಲಿ ಅನೇಕ ಸ್ಥಳಗಳಲ್ಲಿ ವಿವರಿಸಲಾಗಿದೆ. ಪುನರುತ್ಥಾನ ಮತ್ತು ಪುನಶ್ಚೇತನವನ್ನು ಬರಡು ಭೂಮಿ ಮಳೆಯ ಮೂಲಕ ಪುನಶ್ಚೇತನಗೊಳ್ಳುವುದಕ್ಕೆ ಹೋಲಿಸಿ ಹೇಳಲಾಗಿದೆ. (ಪವಿತ್ರ ಖುರ್‌ಆನ್ 22: 6–8)

ಪ್ರಕೃತಿಯನ್ನು ವೀಕ್ಷಿಸಲು, ಚಿಂತಿಸಲು ಮತ್ತು ಬುದ್ಧಿಯನ್ನು ಉಪಯೋಗಿಸಲು ಪವಿತ್ರ ಖುರ್‌ಆನ್ ಪದೇ ಪದೇ ಉಪದೇಶಿಸಿದೆ. (ಪವಿತ್ರ ಖುರ್‌ಆನ್ 3:191–192).

ದೇವನ ದೃಷ್ಟಾಂತಗಳ ಕಡೆಗೆ ಪವಿತ್ರ ಖುರ್‌ಆನ್ ಗಮನ ಹರಿಸಬೇಕೆಂದು ಹೇಳಿರುವುದು ಪ್ರಕೃತಿ ಘಟನೆಗಳ ಬಗ್ಗೆ ಯೋಚಿಸಬೇಕೆಂದಾಗಿದೆ. ಅದರಿಂದ ನಾವು ಪಾಠ ಕಲಿತು ಸತ್ಯವನ್ನು ಮನವರಿಕೆ ಮಾಡಿಕೊಳ್ಳಬಹುದು. ದೇವನ ಗುಣ ವಿಶೇಷಗಳು ಹೇಗೆ ಕಾರ್ಯ ನಿರತವಾಗಿವೆ ಎಂದು ತಿಳಿಯಬಹುದು. ಆಧ್ಯಾತ್ಮಿಕ ಮೌಲ್ಯಗಳನ್ನು ಅರಿತುಕೊಂಡು ಅವುಗಳನ್ನು ನಮ್ಮ ಜೀವಿತದಲ್ಲಿ ಅಳವಡಿಸುವುದು ಮತ್ತು ಆ ಮೂಲಕ ನಮ್ಮ ಎಲ್ಲ ಚಟುವಟಿಕೆಗಳು ಎಲ್ಲ ಕ್ಷೇತ್ರಗಳಲ್ಲೂ ಹಿತಕರವಾಗಬೇಕು. ಇದೇ ಕಾರಣದಿಂದ ಸತ್ಯವಿಶ್ವಾಸಿಗಳಿಗೆ ಪವಿತ್ರ ಖುರ್‌ಆನಿನ ಮಾರ್ಗದರ್ಶನವನ್ನು ರೋಗೋಪಶಮನ ಎಂದೂ ಕಾರುಣ್ಯವೆಂದೂ ವಿವರಿಸಲಾಗಿದೆ. (ಪವಿತ್ರ ಖುರ್‌ಆನ್ 17:83).

ಪವಿತ್ರ ಖುರ್‌ಆನ್ ಹೀಗೆ ಸಹ ಹೇಳಿದೆ:

"ಎಲೈ ಜನರೇ, ನಿಶ್ಚಯವಾಗಿಯೂ ನಿಮ್ಮ ಪ್ರಭುವಿನ ಕಡೆಯಿಂದ ಒಂದು ತತ್ವೋಪದೇಶ ಮತ್ತು ಹೃದಯದಲ್ಲಿರುವ ಎಲ್ಲ ರೋಗಗಳಿಗೂ ಶಮನಕಾರಿ ಔಷಧ ನಿಮಗೆ ಬಂದಿರುತ್ತದೆ. ಅದು ಸತ್ಯವಿಶ್ವಾಸಿಗಳಿಗೆ ಮಾರ್ಗದರ್ಶನವೂ ಕರುಣೆಯೂ ಆಗಿದೆ." (10:58).

**ಧಾರ್ಮಿಕ ಸ್ವಾತಂತ್ರ್ಯ**

ಮನುಷ್ಯನು ಸ್ವಂತ ಇಷ್ಟ ಪ್ರಕಾರ ಸತ್ಯವನ್ನು ಅಂಗೀಕರಿಸುವ ಅಧಿಕಾರ ಇಸ್ಲಾಮ್ ನೀಡಿದೆ.ಧರ್ಮವನ್ನು ಅಧಿಕಾರ ಪ್ರಯೋಗಿಸಿ ಅಂಗೀಕರಿಸಲು ಆಜ್ಞಾಪಿಸಿಲ್ಲ. ಆದರೆ ಧರ್ಮವನ್ನು ಮನವರಿಕೆ ಮಾಡಿ ಅಂಗೀಕರಿಸಲು ಆಹ್ವಾನಿಸಲಾಗುತ್ತದೆ. (ಪವಿತ್ರ ಖುರ್‌ಆನ್ 12:109).

ಪವಿತ್ರ ಖುರ್‌ಆನಿನ ಇನ್ನಿತರ ವಚನಗಳು ಹೀಗಿವೆ:

"(ಇದು) ನಾವು ನಿನಗೆ ಅವತೀರ್ಣಗೊಳಿಸಿದ ಅನುಗ್ರಹದಾಯಕ ಗ್ರಂಥವಾಗಿದೆ. ಅವರು ಇದರ ವಚನಗಳ ಬಗ್ಗೆ ಚಿಂತನೆ ಮಾಡಲಿಕ್ಕೂ ವಿವೇಕಶಾಲಿಗಳು ಲಕ್ಷ್ಯಗೊಡಲಿಕ್ಕೂ." (38:30).

ನಂಬಲು ಅಥವಾ ನಂಬದಿರಲು ಸಂಪೂರ್ಣ ಸ್ವಾತಂತ್ರ್ಯವಿದೆ. ಈ ಕೆಳಗಿನ ವಚನ ನೋಡಿರಿ:

"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ." (2:257)

ಪುನಃ ಹೀಗೆ ಹೇಳಲಾಗಿದೆ:

"ಎಲೈ ಪ್ರವಾದಿ, ಹೇಳು: ಇದು ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ." (18:30).

ಧರ್ಮವನ್ನು ಅಂಗೀಕರಿಸಲು ಮತ್ತು ನಿರಾಕರಿಸಲು ಸ್ವಾತಂತ್ರ್ಯ ನೀಡಲಾಗಿದ್ದರೂ ಅದರ ಪರಿಣಾಮ ದೈವಿಕ ನಿಯಮ ಪ್ರಕಾರ ಸಂಭವಿಸುವುದು. ಯಾರನ್ನೂ ಬಲಾತ್ಕರಿಸಲಾಗಿಲ್ಲ. ಪ್ರತಿಯೊಬ್ಬನು ತನ್ನ ಜೀವಿತವನ್ನು ತನ್ನ ವಿಶ್ವಾಸಕ್ಕೆ ಅನುಸರಿಸಿ ರೂಪಿಸಲು ಸ್ವತಂತ್ರನಾಗಿದ್ದಾನೆ. ಅವನು ಸತ್ಯದ ಕಡೆಯಿಂದ ಮುಖ ತಿರುಗಿಸಿ ತನ್ನ ಆತ್ಮವನ್ನು ತನ್ನಿಷ್ಟಪ್ರಕಾರ ನಾಶಮಾಡಲು ಸ್ವತಂತ್ರನಾಗಿದ್ದಾನೆ.

ದೈವಿಕ ಸಂದೇಶದ ಬಗ್ಗೆ ವಿಶ್ವಾಸ ಮತ್ತು ಅದರ ಅಂಗೀಕಾರದಿಂದ ಬುದ್ಧಿಯ ಒರಟುತನ ಮತ್ತು ಸಂಕುಚಿತತೆ ಉಂಟಾಗುತ್ತದೆ ಎಂದು ಕೆಲವು ಸಾರಿ ಸೂಚಿಸಲಾಗುತ್ತದೆ. ಆದರೆ ಸತ್ಯವು ಇದಕ್ಕೆ ವಿರುದ್ಧವಾಗಿದೆ. ದೈವಿಕ ಸಂದೇಶ ಬುದ್ಧಿಯನ್ನು ಉತ್ತೇಜಿಸುತ್ತದೆ. ಎಲ್ಲ ವಿಧದ ಸಂಶೋಧನೆ ಮತ್ತು ಜ್ಞಾನ ವರ್ಧನೆಯ ಬಾಗಿಲು ತೆರೆಯುತ್ತದೆ. ನೈಸರ್ಗಿಕ ಘಟನೆಗಳ ಬಗ್ಗೆ ಚಿಂತನೆ ನಡೆಸಲು ಪವಿತ್ರ ಖುರ್‌ಆನ್ ಪದೇ ಪದೇ ಉಪದೇಶಿಸುತ್ತದೆ. ಅದು ಜ್ಞಾನವರ್ಧನೆಗೆ ಪೂರಕವಾಗಿದೆ. ಚರಿತ್ರೆ ಇದಕ್ಕೆ ಖಂಡಿಸಲಾಗದ ಸಾಕ್ಷ್ಯಗಳನ್ನು ನೀಡುತ್ತದೆ. ಪವಿತ್ರ ಖುರ್‌ಆನಿನ ಸಂದೇಶವಾಣಿಗಳನ್ನು ಆಲಿಸಿದ ನಂತರ ಭೂಮಿಯ ಬಹಳ ದೊಡ್ಡ ಭಾಗದಿಂದ ಅಂಧಕಾರ ಮತ್ತು ಗೊಂದಲ ನಿವಾರಣೆಗೊಂಡಿತು. ವ್ಯವಸ್ಥೆಯು ರೂಪಿತವಾಯಿತು. ಎಲ್ಲ ವಿಧಗಳ ಪ್ರಜಾ ಹಿತಕಾರಿ ಸಂಸ್ಥೆಗಳು ಸಜೀವವಾದುವು. ಉನ್ನತ ನೈತಿಕ ಮಟ್ಟವು ಸ್ಥಾಪಿಸಲ್ಪಟ್ಟಿತು. ಜ್ಞಾನ, ವಿದ್ಯೆ ಮತ್ತು ವಿಜ್ಞಾನ ವಿಶಾಲವಾಗಿ ಹಬ್ಬಲು ತೊಡಗಿತು. ಮನುಷ್ಯನ ಬುದ್ಧಿ ಕೆಲವು ಶತಮಾನಗಳ ಕಾಲ ಸ್ಥಗಿತಗೊಂಡಿತ್ತು. ಹಠಾತ್ತಾಗಿ ಪುನಶ್ಚೇತನಗೊಂಡಿತು ಮತ್ತು ಭೌತಿಕ, ನೈತಿಕ, ಆಧ್ಯಾತ್ಮಿಕವಾಗಿ ಆಶ್ಚರ್ಯಕರವಾದ ಕ್ರಾಂತಿ ಸಂಭವಿಸಿತು. ಇದು ಪಕ್ಕನೆ ಮೇಲೆದ್ದು ಕೂಡಲೇ ಬಿದ್ದು ಬಿಡಲಿಲ್ಲ. ಅದು ಶಕ್ತಿಯುತವೂ ಹಿತಕಾರಿಯೂ ಬಾಳ್ವಿಕೆವುಳ್ಳದ್ದೂ ಆಗಿತ್ತು. ಅದು ಮನುಷ್ಯ ಶರೀರದ, ಬುದ್ಧಿಯ ಮತ್ತು ಆತ್ಮದ ಆವಶ್ಯಕತೆಗಳನ್ನು ಅತ್ಯಂತ ಚೆನ್ನಾಗಿ ಈಡೇರಿಸಿತು. ಅದು ಮಾನವ ಚರಿತ್ರೆಯ ಓಟವನ್ನು ಬದಲಾಯಿಸಿತು. ಅದು ಜ್ಞಾನ ಮತ್ತು ಅಭಿವೃದ್ಧಿಯ ಬಾಗಿಲುಗಳನ್ನು ಎಲ್ಲ ದಿಕ್ಕುಗಳಲ್ಲೂ ತೆರೆಯಿತು. ಅದರ ಪ್ರಭಾವ ಇಂದು ಸಹ ಅನೇಕ ವಿಧಗಳಲ್ಲಿ ಅನುಭವಕ್ಕೆ ಬರುತ್ತಾ ಇರುತ್ತದೆ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ನಿಶ್ಚಯವಾಗಿಯೂ ಅಲ್ಲಾಹನಿಂದ ಒಂದು ಪ್ರಕಾಶ ಮತ್ತು ಸ್ಪಷ್ಟವಾದೊಂದು ಗ್ರಂಥ ನಿಮಗೆ ಬಂದಿರುತ್ತದೆ. ಅದರ ಮೂಲಕ ಅಲ್ಲಾಹನು ತನ್ನ ಸಂಪ್ರೀತಿಯನ್ನು ಬಯಸುವವರಿಗೆ ರಕ್ಷಾಮಾರ್ಗದ ಕಡೆಗೆ ದಾರಿ ತೋರಿಸುತ್ತಾನೆ; ತನ್ನ ಇಚ್ಛಾನುಸಾರ ಅವನು ಅವರನ್ನು ಅಂಧಕಾರದಿಂದೆಲ್ಲ ಹೊರಗೆ ತಂದು ಪ್ರಕಾಶದ ಕಡೆಗೆ ಕೊಂಡೋಯ್ಯುತ್ತಾನೆ. ಹಾಗೂ ಅವರಿಗೆ ಸತ್ಪಥದೆಡೆಗೆ ದಾರಿ ತೋರಿಸುತ್ತಾನೆ." (5:16–17).

ಪ್ರತಿಯೊಂದು ವಿಷಯವನ್ನು ದೈವಿಕ ಆಜ್ಞೆಯಿಂದ ನಿಯಂತ್ರಿಸುವುದನ್ನು ಪವಿತ್ರ ಖುರ್‌ಆನ್ ನಿರುತ್ಸಾಹಪಡಿಸಿದೆ. ಅದರಿಂದ ಜನರಿಗೆ ತೊಂದರೆಯಾಗಬಹುದೆಂದು ಪವಿತ್ರ ಖುರ್‌ಆನ್ ಉಪದೇಶಿಸಿದೆ.(ಪವಿತ್ರ ಖುರ್‌ಆನ್ 5:102).

"ಪರಿಶುದ್ಧರಾದವರು ಹೊರತು ಬೇರೆ ಯಾರೂ ಅದನ್ನು ಸ್ಪರ್ಶಿಸಲಾರದು" ಎಂದು ಪವಿತ್ರ ಖುರ್‌ಆನ್ ಹೇಳಿದೆ.(56:80). ಪವಿತ್ರ ಖುರ್‌ಆನನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಲು ಅರಬಿ ಭಾಷೆಯ ಜ್ಞಾನದೊಂದಿಗೆ ಮತ್ತು ವ್ಯಾಖ್ಯಾನದ ನಿಯಮಗಳ ಅರಿವಿನೊಂದಿಗೆ ಯೋಚನೆಗಳ ಪರಿಶುದ್ಧತೆಯೂ ಆವಶ್ಯಕವಾಗಿದೆ. ಮನುಷ್ಯನ ಜೀವಿತದ ಪರಿಶುದ್ಧತೆಯ ಮಟ್ಟವು ಹೆಚ್ಚಿದ ಹಾಗೆ ಪರಿಶುದ್ಧ ಖುರ್‌ಆನ್ ಬಗ್ಗೆ ಅವನ ಜ್ಞಾನವು ವರ್ಧಿಸುವುದು.

◆◆◆

## ಮರುವಸಂತ

◆ ರಚನೆ : ಮೆ.ಭೋ.ರಾ

ಪಾವನ ದೀನಿನ ಹೂಬನವಿಂದು ಬಿಸಿಲಿಗೆ ಬಾಡಿಹುದು!
ಬಿಸಿಲಿನ ಬೇಗೆಯ ಘೋರತಾಪಕೆ ಗಿಡಮರ ಒಣಗಿಹುದು!
ದಾಹವ ನೀಗುವ ಕೆರೆಕಟ್ಟೆಗಳು ಜಲವೆ ಇಲ್ಲದೆ ಬತ್ತಿಹವು!
ಖಗಸಂಕುಲಕೆ ಆಸರೆಯಾಗಿಹ ವೃಕ್ಷಕೆ ರೋಗವು ತಗುಲಿಹುದು!
ಸೌರಭ ಸೂಸುವ ಹೂವುಗಳಲ್ಲಿ ಹೆಸರಿಗೂ ಇಲ್ಲ ಸುಗಂಧ!
ಅಂದದಿ ಬಿರಿದ ಹೂಗಳ ಎದೆಯಲಿ ಇಲ್ಲವೋ ಹನಿ ಮಕರಂದ!
ಪಾವನ ದೀನಿನ ಹೂಬನವಿಂದು ಬಿಸಿಲಿಗೆ ಬಾಡಿಹುದು!
ಆತ್ಮಶಕ್ತಿಯು ಕುಂದಿಹುದು ಪರಮಾತ್ಮನ ಧ್ಯಾನವು ನಂದಿಹುದು!
ಹೃದಯಕೆ ಸಿಡಿಲು ಬಡಿದಿಹುದು ಚಿತ್ತಕೆ ಮಂಪರು ಕವಿದಿಹುದು!
ಸುಂದರಾದರ್ಶಗಳ ತೊರೆದಿಹರು ಅಂಧ ವಿಶ್ವಾಸದಿ ಮುಳುಗಿಹರು!
ಶವ ಕುಶೀರಗಳ ಕಟ್ಟುವರು ಸುಗಂಧ ದ್ರವ್ಯಗಳ ಉರಿಸುವರು!
ಚಂಡೆ ಮದ್ದಳೆ ಭಾರಿಸುತ ಸಾಷ್ಟಾಂಗ ವಂದನೆ ಮಾಡುವರು!
ಸತ್ಯಾತ್ಮನನು ಮರೆತಿಹರು ಮೃತರಲಿ ಮುಕ್ತಿಯ ಬೇಡುವರು!
ಪಾವನ ದೀನಿನ ಹೂಬನವಿಂದು ಬಿಸಿಲಿಗೆ ಬಾಡಿಹುದು!
ನಬಿವರೇಣ್ಯರು ನುಡಿದಿರುವಂತೆಯೆ ಇಂದಿನ ಕಾಲವು ಆಗಿಹುದು!
ಗ್ರಂಥದಿ ಲಿಪಿಯು ದೀನಿನ ಹೆಸರು ಮಾತ್ರವೆ ಧರೆಯಲಿ ಉಳಿದಿಹುದು!
ಈಮಾನೆಂದೋ ದೂರಕೆ ಸರಿದು ಸುರಯ್ಯ ತಾರೆಯ ಸೇರಿಹುದು!
ಯೋಚಿಸಿ ನೋಡಿರಿ ಬಂಧುಗಳೆ ಈ ಸಂಕಟಕಿಲ್ಲವೆ ಪರಿಹಾರ!
ಪಾವನ ದೀನಿನ ಪುನರುತ್ಥಾನಕೆ ಇಳಿಯರು ಯಾರೂ ಬಾನಿಂದ!
ಬಾನಲಿ ದಿಟ್ಟಿಸಿ ಕಾದಿಹ ನಿಮಗೆ ಏಸುಮಸೀಹರು ಕಾಣಿಸರು!
ಪಾವನ ದೀನಿನ ಹೂಬನವಿಂದು ಬಿಸಿಲಿಗೆ ಬಾಡಿಹುದು!
ಈರೇಳನೆ ಶತಕದ ಆದಿಯಲೇ ಧರ್ಮೋದ್ಧಾರಕ ಬಂದಿಹರು!
ನಬಿವರೇಣ್ಯರ ಆಜ್ಞೆಯ ಪಾಲಿಸಿ ಮಹದಿಗೆ ಅಸ್ಸಲಾಂ ತಲುಪಿಸಿರಿ!
ದೀನಿನ ಸಾರಥಿ ಗುರು ಮಸ್‌ರೂರರ ಕೈಯಲಿ ಬೈಅತ್ ಆಗಿಬಿಡಿ!
ಪಾವನ ದೀನಿನ ಹೂಬನಕಿಂದು ಮರುವಸಂತವು ಬಂದಿಹುದು!
ಮರುವಸಂತವು ಬಂದಿಹುದು!

# ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು

## ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರ ಮರಣ ಮತ್ತು ಜೀವಿತದ ಬಗ್ಗೆ ನಂಬಿಕೆಯ ಮಹತ್ವ.

**◆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಎಂ.ಎ.**

ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರ(ಅ) ಮರಣ ಮತ್ತು ಜೀವಿತದ ಬಗ್ಗೆ ನಂಬಿಕೆಗೆ ವಿಶೇಷ ಮಹತ್ವವಿರುವುದು ಈ ಕೆಳಗಿನ ಮೂರು ಕಾರಣಗಳಿಂದಾಗಿದೆ.

**ಒಂದು:** ಲೋಕದ ನಿವಾಸಿಗಳಲ್ಲಿ ಬಹಳ ದೊಡ್ಡ ಭಾಗ ಕ್ರೈಸ್ತ ಧರ್ಮಾನುಯಾಯಿಗಳಾಗಿದ್ದಾರೆ. ಹಝ್ರತ್ ಈಸಾ ಮಸೀಹ್(ಅ) ದೇವಪುತ್ರನೆಂದೂ ಕೆಲವು ವರ್ಷ ಭೂಲೋಕದಲ್ಲಿ ಜೀವಿಸಿದ ನಂತರ ಅವರು ಆಕಾಶವನ್ನೇರಿ ಹೋದರೆಂದೂ ಅಲ್ಲಿ ಅವರು ಈಗಲೂ ಜೀವಿಸುತ್ತಾ ಅಲ್ಲಾಹನ ಶಾಶ್ವತ ಅಧಿಕಾರದಲ್ಲಿ ಭಾಗೀದಾರರು (ನಊಧುಬಿಲ್ಲಾಹ್– ಹಾಗೆ ಹೇಳುವುದರಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ) ಆಗಿರುವರೆಂದು ಅವರು ನಂಬುತ್ತಾರೆ.

**ಎರಡು:** ಹಝ್ರತ್ ಈಸಾ ಮಸೀಹ್(ಅ) ದೇವನೋ ದೇವಪುತ್ರನೋ ಅಲ್ಲ; ಅವರೊಬ್ಬ ಪ್ರವಾದಿಯಾಗಿದ್ದಾರೆಂದು ಮುಸ್ಲಿಮರು ನಂಬುತ್ತಾರೆ. ಆದರೆ ಕ್ರೈಸ್ತ ಧರ್ಮಾನುಯಾಯಿಗಳಿಂದ ಪರೋಕ್ಷ ಪ್ರಭಾವಿತರಾಗಿ ಹಾಗೂ ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನೂ ಕೆಲವು ಹದೀಸುಗಳನ್ನೂ ತಪ್ಪಾಗಿ ವ್ಯಾಖ್ಯಾನಿಸಿ ಹಝ್ರತ್ ಈಸಾ ಮಸೀಹರನ್ನು(ಅ) ಯಹೂದಿಯರು ಶಿಲುಬೆಗೇರಿಸಲು ನಿರ್ಧರಿಸಿದಾಗ ಅಲ್ಲಾಹನು ಅವರನ್ನು ದೇಹಸಮೇತ ಆಕಾಶಕ್ಕೆ ಎತ್ತಿಕೊಂಡನೆಂದೂ ಅವರು ಅಲ್ಲಿ ಈಗಲೂ ಜೀವಿಸಿರುವರೆಂದೂ ಲೋಕದ ಅಂತಿಮ ಕಾಲಘಟ್ಟದಲ್ಲಿ ಭೂಮಿಗೆ ಆಕಾಶದಿಂದ ಇಳಿದು ಬಂದು ಮುಸ್ಲಿಮ್ ಸಮುದಾಯದ ಸುಧಾರಣೆ ಮಾಡುವರೆಂದೂ ಬಹುತೇಕ ಮುಸ್ಲಿಮರು ನಂಬುತ್ತಾರೆ.

**ಮೂರು:** ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ತಾನು ಮಸೀಹ್ ಮೌಊದ್ (ವಾಗ್ದತ್ತ ಮಸೀಹ್) ಎಂದು ವಾದಿಸಿರುವರು.

ಆದರೆ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮ್ ಮೃತರಾಗಿರುವರೋ ಜೀವಿಸಿರುವರೋ ಎಂದು ತೀರ್ಮಾನವಾಗುವ ತನಕ ಯಾವುದೇ ಮುಸ್ಲಿಮನು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರ ತಾನು ವಾಗ್ದತ್ತ ಮಸೀಹ್ ಎಂಬ ವಾದದ ಕುರಿತು ಲಕ್ಷ್ಯಗೊಟ್ಟು ಗಮನಿಸಲಾರನು.

ಮೇಲೆ ವಿವರಿಸಿದ ಮೂರು ಕಾರಣಗಳಿಂದ ಪವಿತ್ರ ಖುರ್‌ಆನ್, ಸಹೀಹ್ ಹದೀಸ್‌ಗಳು ಮತ್ತು ಅಲ್ಲಾಹನು ದಯಪಾಲಿಸಿದ ಬುದ್ಧಿಯ ಬೆಳಕಿನಲ್ಲಿ ಈ ವಿಷಯವನ್ನು ವಿಶದೀಕರಿಸಿ ಜನರಿಗೆ ಮಾರ್ಗದರ್ಶನ ನೀಡುವುದು ಆವಶ್ಯಕವಾಗಿದೆ.

### ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರ ವಾದ ಮತ್ತು ಹಝ್ರತ್ ಈಸಾ ಅಲೈಹಿಸ್ಸಲಾಮರ ಮರಣ

ಮೇಲೆ ವಿವರಿಸಿದ ಹಾಗೆ ಅಹ್ಮದಿಯಾ ಜಮಾಅತಿನ ಸ್ಥಾಪಕರು ತಾನು ಮಸೀಹ್ ಆಗಿರುವುದಾಗಿ ವಾದಿಸಿದ ಮಾರ್ಗದಲ್ಲಿ ತಲೆದೋರುವ ಪ್ರಥಮ ಪ್ರಶ್ನೆ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರು ಮೃತರಾಗಿರುವರೋ? ಎನ್ನುವುದಾಗಿದೆ. ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮ್ ಮೃತರಾಗಿರುವರು ಎಂದು ಸಾಬೀತು ಆಗುವ ತನಕ – ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರ ಸತ್ಯತೆಗೆ ಸಾವಿರಾರು ಸೂರ್ಯರನ್ನು ಉದಿಸುವಂತೆ ಮಾಡಿದರೂ – ಮನುಷ್ಯ ಪ್ರಕೃತಿಯಲ್ಲಿ ಒಂದು ರೀತಿಯ ಸಂಶಯವು ನಿಶ್ಚಯವಾಗಿಯೂ ಬಾಕಿಯಾಗಿ ಇರುವುದು. ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ತಾನು ಮಸೀಹ್ ಪದವಿ ಗಳಿಸಿದುದಾಗಿ ವಾದಿಸುತ್ತಾರಾದರೂ ಆ ಪದವಿಯ ಪೀಠವು ಬರಿದಾಗಿದೆ ಎಂದು ಸಾಬೀತಾಗುವ ತನಕ ಅದರ ಬಗ್ಗೆ ಹೃದಯವು ಸಮಾಧಾನ ಪಡೆಯಲಾರದು. ಆದುದರಿಂದ ಎಲ್ಲದಕ್ಕಿಂತಲೂ ಮೊದಲು ಈ ತಡೆಗಟ್ಟನ್ನು ನಿವಾರಿಸಿಕೊಳ್ಳಬೇಕಾಗಿದೆ.

ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಂದ ತಿಳಿಯುವುದೇನೆಂದರೆ ಲೋಕದ ಕೊನೆಯ ಕಾಲಘಟ್ಟದಲ್ಲಿ ಮುಸ್ಲಿಮರು ಬಹಳ ಬಲಹೀನ ಸ್ಥಿತಿಯಲ್ಲಿರುವಾಗ, ಕ್ರೈಸ್ತ ಧರ್ಮ ವಿಶ್ವಾಸಗಳು ಪ್ರಭಾವಶಾಲಿಯಾಗಿರುವಾಗ, ಧರ್ಮ ರಾಹಿತ್ಯವು ಎಲ್ಲ ಕಡೆಗಳಲ್ಲೂ ವ್ಯಾಪಿಸಿರುವಾಗ ಅಲ್ಲಾಹನು ಮುಸ್ಲಿಮ್ ಸಮುದಾಯದಲ್ಲಿ ಒಬ್ಬ ಮಸೀಹರನ್ನು ಕಳುಹಿಸುವನು. ಅವರು ಮುಸ್ಲಿಮ್ ಸಮುದಾಯದ ಸುಧಾರಣೆ ಮಾಡುವರಲ್ಲದೆ ಅಖಂಡನೀಯ ಸಾಕ್ಷ್ಯಾಧಾರಗಳ ಮೂಲಕ ಅವರು ಇಸ್ಲಾಮನ್ನು ಜಯಶಾಲಿಯನ್ನಾಗಿ ಮಾಡುವರು.

ಮೇಲೆ ಬರೆದುದರ ಬಗ್ಗೆ ಮುಸ್ಲಿಮರೆಲ್ಲರೂ ಒಮ್ಮತವನ್ನು ಹೊಂದಿದ್ದಾರೆ. ಅನಂತರ ಭಿನ್ನಾಭಿಪ್ರಾಯ ಪ್ರಾರಂಭವಾಗುತ್ತದೆ. ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ವಿರೋಧಿಸುವ ಮತಪಂಡಿತರು ಹೇಳುವುದೇನೆಂದರೆ ಶಿಲುಬೆಯ ಘಟನೆಯ ಸಂದರ್ಭದಲ್ಲಿ ಆಕಾಶಕ್ಕೇರಿಸಲ್ಪಟ್ಟು ಈಗಲೂ ಆಕಾಶದಲ್ಲಿ ಜೀವಿಸಿರುವ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರೇ ಪುನಃ ಭೂಮಿಗೆ ಲೋಕದ ಅಂತಿಮ ಕಾಲಘಟ್ಟದಲ್ಲಿ ಇಳಿದು ಬರುವರು. ಇದಕ್ಕೆದುರಾಗಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಮತ್ತು ಅವರು ಸ್ಥಾಪಿಸಿದ ಅಹ್ಮದಿಯಾ

ಜಮಾಅತ್ ನಂಬುವುದು ಹೀಗೆ: ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರು ನಿಧನ ಹೊಂದಿರುವರು. ಆದುದರಿಂದ ಆಗಮಿಸುವವರೆಂದು ವಾಗ್ದಾನ ನೀಡಲ್ಪಟ್ಟ ಮಸೀಹರು ಬೇರೊಬ್ಬರೇ ಆಗಬೇಕಾಗಿದೆ. ಹಾಗೆ ಆಗಮಿಸುವವರು ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರಿಗೆ ಹೋಲಿಕೆ ಹೊಂದಿದವರಾಗಿ ಆಗಮಿಸುವರು.

ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮ್ ಮೃತರಾಗಿರುವರೆಂದು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ಸಾಬೀತುಗೊಳಿಸಬೇಕಾದ ಆವಶ್ಯಕತೆಯೇನೂ ಇರಲಿಲ್ಲ. ಪವಿತ್ರ ಖುರ್‌ಆನ್ ಮತ್ತು ಸಹೀಹ್ ಹದೀಸುಗಳ ಮೂಲಕ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮ್ ಈಗಲೂ ಜೀವಿಸಿರುವರೆಂದು ಸಾಬೀತುಗೊಳಿಸಬೇಕಾದುದು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ವಿರೋಧಿಸುವವರ ಕಡ್ಡಾಯ ಕರ್ತವ್ಯವಾಗಿತ್ತು. ಏಕೆಂದರೆ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರು ಈಗಲೂ ಜೀವಿಸಿರುವರು ಎಂದು ಹೇಳುವುದು ನಾವು ನಿತ್ಯವೂ ಕಾಣುವ ಘಟನೆಗಳಿಗೆ ವಿರುದ್ಧವಾಗಿರುವುದರಿಂದ ಯಾವುದಾದರೂ ಸ್ಪಷ್ಟ ಪುರಾವೆ ದೊರಕದೆ ಖಂಡಿತವಾಗಿಯೂ ಅದನ್ನು ಅಂಗೀಕರಿಸಲು ಸಾಧ್ಯವಿಲ್ಲ. ಜನಿಸಿ ದೀರ್ಘಕಾಲ ದಾಟಿಹೋದುದರಿಂದ ಒಬ್ಬ ವ್ಯಕ್ತಿ ಮೃತನಾಗಿರುವನೆಂದು ಹೇಳುವುದು ನೈಸರ್ಗಿಕ ನಿಯಮಗಳಿಗೆ ಅನುರೂಪವಾಗಿದೆ. ಅದಕ್ಕೋಸ್ಕರ ಬಾಹ್ಯ ಸಾಕ್ಷ್ಯಾಧಾರಗಳ ಆವಶ್ಯಕತೆ ಇರುವುದಿಲ್ಲ. ಹೀಗಿದ್ದರೂ ಜನರ ಸುಧಾರಣೆಯ ಉದ್ದೇಶದಿಂದ ಅಹ್ಮದಿಯಾ ಜಮಾಅತಿನ ಸ್ಥಾಪಕರು ಈ ಕೆಲಸದ ಜವಾಬ್ದಾರಿ ವಹಿಸಿ ಅದನ್ನು ಎಷ್ಟು ಉತ್ತಮವಾಗಿ ಈಡೇರಿಸಿದರೆಂದರೆ ಸಾಮಾನ್ಯರ ಮಾತು ಬಿಡಿ, ದೊಡ್ಡ ದೊಡ್ಡ ಅಹ್ಮದಿಯೇತರ ಮತಪಂಡಿತರು ಈ ವಿಷಯಕ್ಕೆ ಸಂಬಂಧಿಸಿ ಯಾವುದಾದರೂ ಅಹ್ಮದೀ ಮುಸ್ಲಿಮನೊಂದಿಗೆ ಮಾತನಾಡಲು ಹಿಂಜರಿಯುತ್ತಾರೆ. ಕೆಲವು ಸಾರಿ ಈ ವಿಷಯದ ಬಗ್ಗೆ ಏನನ್ನೂ ಹೇಳಲು ನಿರಾಕರಿಸುತ್ತಾರೆ ಮತ್ತು "ಮಿರ್ಝಾ ಸಾಹೇಬರ ವಾದದೊಂದಿಗೆ ಈ ವಿಷಯಕ್ಕೆ ಏನು ಸಂಬಂಧವಿದೆ?"ಎಂದು ಪ್ರಶ್ನಿಸುತ್ತಾರೆ.

ವಾಸ್ತವಿಕವೇನೆಂದರೆ ಸಾಮಾನ್ಯ ಬುದ್ಧಿಶಕ್ತಿಯನ್ನು ಹೊಂದಿದವನು ಕೂಡ ಹೀಗೆ ಮನವರಿಕೆ ಮಾಡಿಕೊಳ್ಳಬಲ್ಲನು: ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರ ಕುರಿತು ಅಧ್ಯಯನ ನಡೆಸುವಾಗ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರು ಮೃತರೋ ಜೀವಂತರೋ ಎಂಬ ಮೊತ್ತ ಮೊದಲ ಪ್ರಶ್ನೆಗೆ ಉತ್ತರ ಪಡೆಯುವುದು ಆವಶ್ಯಕವಾಗಿದೆ.

**ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮ್ ಆಕಾಶಕ್ಕೆ ಎತ್ತಲ್ಪಡಲಿಲ್ಲ**

ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರು ಆಕಾಶಕ್ಕೆ ಎತ್ತಲ್ಪಡಲಿಲ್ಲ ಎಂಬುದರ ಕುರಿತು ಸುಲಭವಾಗಿ ಮನವರಿಕೆಯಾಗುವ ಕೆಲವು ಸ್ಪಷ್ಟ ವಿಷಯಗಳನ್ನು ವಿವರಿಸಲು ಬಯಸುತ್ತೇನೆ. ಇವುಗಳಿಂದ ಅವರು ಭೂಮಿಯಲ್ಲಿಯೇ ವಾಸಿಸಿ ಭೂಮಿಯಲ್ಲಿಯೇ ಮೃತರಾಗಿರುವರು ಎಂದು ಸ್ಪಷ್ಟವಾಗುವುದು.

**ಮನುಷ್ಯನ ಜೀವಿತ ಮತ್ತು ಮರಣ ಇಹಲೋಕದೊಂದಿಗೆ ಸಂಬಂಧಿಸಿದೆ**

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಎಲ್ಲ ಮನುಷ್ಯರನ್ನು ಸಂಬೋಧಿಸಿ ಹೀಗೆ ಹೇಳಿರುತ್ತಾನೆ: "ಅದರಲ್ಲೇ (ಭೂಮಿಯಲ್ಲೇ) ನೀವು ಬದುಕುವಿರಿ; ಅದರಲ್ಲೇ ಮಡಿಯುವಿರಿ." (7:26).

ಮೇಲಿನ ವಚನದಲ್ಲಿ ಅಲ್ಲಾಹನು ಹೀಗೆ ಹೇಳಿರುತ್ತಾನೆ: ಎಲ್ಲ ಮನುಷ್ಯರು ಈ ಭೂಮಿಯಲ್ಲಿಯೇ ತಮ್ಮ ಜೀವಿತ ಕಾಲವನ್ನು ಕಳೆಯುವರು. ಅವರ ಜೀವಿತದ ಕಾಲವು ಕೊನೆಗೊಂಡ ನಂತರ ಅವರು ಭೂಮಿಯಲ್ಲಿಯೇ ಮೃತರಾಗುವರು. ಮನುಷ್ಯನಿಗೆ ಲೋಕದಲ್ಲಿ ಎರಡು ಕಾಲಘಟ್ಟಗಳು ಇರುತ್ತವೆ. ಒಂದು ಜೀವಿಸಿರುವ ಕಾಲ; ಇನ್ನೊಂದು ಮೃತನಾಗುವ ಕಾಲ. ಇವೆರಡು ಕಾಲಘಟ್ಟಗಳನ್ನು ಅಲ್ಲಾಹನು ಭೂಮಿಯೊಂದಿಗೆ ಜೋಡಿಸಿರುವನು.

ಇಲ್ಲಿ ಉದ್ಭವಿಸುವ ಪ್ರಶ್ನೆ ಏನೆಂದರೆ ಹಝ್ರತ್ ಈಸಾ ಅಲೈಹಿಸ್ಸಲಾಮರು ಒಬ್ಬ ಮನುಷ್ಯನಾಗಿದ್ದರೂ ಅವರು ತನ್ನ ದೇಹ ಸಮೇತ ಜೀವಂತವಾಗಿ ಆಕಾಶಕ್ಕೇರಿ ಹೋಗಿ ಅಲ್ಲಿ ವಾಸಿಸಲು ತೊಡಗಿದುದಾದರೂ ಹೇಗೆ? ಮನುಷ್ಯನು ಭೂಮಿಯಲ್ಲಿಯೇ ಜೀವಿಸಿ ಭೂಮಿಯಲ್ಲಿಯೇ ಮೃತನಾಗುವನು ಎಂದು ಅಲ್ಲಾಹನು ಮಾಡಿರುವ ತೀರ್ಮಾನವನ್ನು ಮರೆತುಬಿಟ್ಟು ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ಆಕಾಶಕ್ಕೆ ಕರೆದುಕೊಂಡು ಹೋದನೇ?

ಅಲ್ಲಾಹನು ಪವಿತ್ರ ಖುರ್‌ಆನಿನ ಇನ್ನೊಂದು ವಚನದಲ್ಲಿ ಹೀಗೆ ಹೇಳುತ್ತಾನೆ: "ನಾವು ಭೂಮಿಯನ್ನು ಅದು (ತನ್ನೆಡೆಗೆ) ಸೆಳೆದಿಟ್ಟುಕೊಳ್ಳುವಂತೆ ಮಾಡಲಿಲ್ಲವೇ? ಜೀವಿಗಳನ್ನೂ ನಿರ್ಜೀವಿಗಳನ್ನೂ." (77:26).

ಈ ವಚನದ ವ್ಯಾಖ್ಯಾನ ಹೀಗೆ: ಅಲ್ಲಾಹನು ಹೇಳುತ್ತಾನೆ– ನಾವು ಭೂಮಿಯನ್ನು ಹೇಗೆ ನಿರ್ಮಿಸಿರುವೆವೆಂದರೆ ಮನುಷ್ಯನು ಜೀವಿಸಿರುವಾಗಲೂ ಮೃತನಾಗುವಾಗಲೂ ಭೂಮಿಯು ಅವನನ್ನು ತನ್ನ ಕಡೆಗೆ ಸೆಳೆದುಕೊಂಡು ತನ್ನಲ್ಲಿಯೇ ಇರಿಸಿಕೊಳ್ಳುತ್ತದೆ.

ಈ ವಚನ ಇದರ ಮೊದಲು ವಿವರಿಸಿದ ವಚನವನ್ನು ವಿಶದೀಕರಿಸುತ್ತದೆ. ಭೂಮಿಯನ್ನು ಅಲ್ಲಾಹನಿಂದ ಹೇಗೆ ಸೃಷ್ಟಿಸಲಾಗಿದೆ ಎಂದರೆ ಅದು ಜೀವಿಸಿರುವವರನ್ನೂ

ಮೃತರಾದವರನ್ನೂ ತನ್ನೊಂದಿಗೆ ಇರಿಸುತ್ತದೆ. ಮನುಷ್ಯ ಶರೀರ ಭೂಮಿಯನ್ನು ಬಿಟ್ಟು ಹೋಗಲು ಅದು ಬಿಡುವುದಿಲ್ಲ.

ಈ ವಚನ ಹಝ್ರತ್ ಈಸಾ ಅಲೈಹಿಸ್ಸಲಾಮ್ ಆಕಾಶವನ್ನೇರಿ ಹೋದರೆಂದು ಹೇಳುವುದು ತಪ್ಪೆಂದು ಸಾಬೀತುಗೊಳಿಸುತ್ತದೆ.

**ಜೀವಂತ ದೇಹ ಸಮೇತ ಆಕಾಶಕ್ಕೇರುವುದು ಮನುಷ್ಯನಿಗೆ ಸಾಧ್ಯವಿಲ್ಲ ಎಂದು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ ಸಂದರ್ಭ**

ಮಕ್ಕದ ಅವಿಶ್ವಾಸಿಗಳು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ನೀವು ಸತ್ಯವಂತರಾದರೆ ಆಕಾಶವನ್ನೇರಿ ನಮಗೆ ತೋರಿಸಿ ಕೊಡಿರಿ. ಆಗ ನಾವು ನಂಬುವೆವು. ಆಗ ಅಲ್ಲಾಹನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅವಿಶ್ವಾಸಿಗಳಿಗೆ ಹೀಗೆ ಉತ್ತರ ನೀಡಲು ಹೇಳಿದನು: "ನನ್ನ ಪ್ರಭು ಪರಿಶುದ್ಧನು. ನಾನೊಬ್ಬ ಸಂದೇಶವಾಹಕನಾದ ಮನುಷ್ಯನು ಮಾತ್ರ ಆಗಿದ್ದೇನೆ." (17:94).

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೇಳುತ್ತಾನೆ: ಒಬ್ಬ ಮನುಷ್ಯನು ದೇಹಸಮೇತವಾಗಿ ಜೀವಂತನಾಗಿರುವಾಗ ಆಕಾಶವನ್ನೇರಿ ಹೋಗುವುದು ತನ್ನ ನಡೆವಳಿಕೆಗಳಿಗೆ ಮತ್ತು ವಾಗ್ದಾನಗಳಿಗೆ ವಿರುದ್ಧವಾಗಿದೆ. ಅಲ್ಲಾಹನು ತಾನು ಮಾಡಿದ ನಿರ್ಧಾರಗಳನ್ನು ಮುರಿಯುವುದಿಲ್ಲ. ಅವನು ಪರಿಶುದ್ಧನಾಗಿದ್ದಾನೆ.

ಇಲ್ಲಿ ಚಿಂತಿಸಬೇಕಾದ ಒಂದು ವಿಷಯವಿದೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಂತಹ ಮಹಾವೈಭವಶಾಲಿಯೊಂದಿಗೆ ಅವಿಶ್ವಾಸಿಗಳು ಆಕಾಶವನ್ನೇರಿ ಹೋಗುವ ಪವಾಡ ತೋರಿಸಲು ಹೇಳುತ್ತಾರೆ. ಆ ಪವಾಡವನ್ನು ಕಂಡರೆ ತಾವು ನಂಬುವೆವು ಎಂದು ಸಹ ಹೇಳುತ್ತಾರೆ. ಆಗ ಹಝ್ರತ್ ಪೈಗಂಬರರು(ಸ) ಸ್ಪಷ್ಟವಾಗಿ ಉತ್ತರ ಹೇಳುತ್ತಾರೆ: ನಾನು ಮನುಷ್ಯನಾದ ಒಬ್ಬ ಸಂದೇಶವಾಹಕನಾಗಿದ್ದೇನೆ. ನಾನು ಜೀವಂತವಾಗಿರುವಾಗ ದೇಹ ಸಮೇತ ಆಕಾಶಕ್ಕೇರಿ ಹೋಗಲು ಸಾಧ್ಯವಿಲ್ಲ.

ಪವಿತ್ರ ಖುರ್‌ಆನಿನ ವಚನವು ಮೇಲೆ ವಿವರಿಸಿದ ಹಾಗೆ ಸ್ಪಷ್ಟಪಡಿಸುವಾಗ ಒಬ್ಬ ಕ್ರೈಸ್ತನು ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮ್ ಬಗ್ಗೆ ಅವರು ಆಕಾಶಕ್ಕೆ ಜೀವಂತವಾಗಿ ದೇಹ ಸಮೇತ ಹೋದರು ಎಂದು ಹೇಳಲು ಧೈರ್ಯಪಡುವವನಾದರೆ ಹಾಗೆ ಮಾಡಲಿ. ಆದರೆ ಒಬ್ಬ ಮುಸ್ಲಿಮ್ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರನ್ನು ಒಬ್ಬ ಮನುಷ್ಯನೆಂದೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಬಹಳ ಚಿಕ್ಕ ಪದವಿ ಹೊಂದಿದ್ದ ಪ್ರವಾದಿ ಎಂದೂ ನಂಬುತ್ತಿರುವಾಗ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮ್ ತನ್ನ ದೇಹ ಸಮೇತ ಜೀವಂತವಾಗಿ ಆಕಾಶಕ್ಕೇರಿ ಹೋದರೆಂದು ಒಂದು ಕ್ಷಣದಷ್ಟು ಕಾಲ ಅಂಗೀಕರಿಸಲು ಸಾಧ್ಯವಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವಿಶ್ವಾಸಿಗಳೊಂದಿಗೆ, "ಮನುಷ್ಯನು ಆಕಾಶಕ್ಕೆ ದೇಹ ಸಮೇತ ಸಜೀವ ಏರಿ ಹೋಗುವುದು ಅಲ್ಲಾಹನ ನಡೆವಳಿಕೆಗಳಿಗೂ ಅವನ ನಿರ್ಧಾರಗಳಿಗೂ ವಿರುದ್ಧ" ಎಂದು ಹೇಳುತ್ತಿದ್ದಾರೆ. ಆದರೆ ಮುಸ್ಲಿಮರು ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ಮನುಷ್ಯನೆಂದು ಅಂಗೀಕರಿಸಿದ ನಂತರವೂ ಅವರನ್ನು ಆಕಾಶದಲ್ಲಿ ಕುಳಿತುಕೊಳ್ಳುವಂತೆ ಮಾಡುತ್ತಾರೆ. ವಾಸ್ತವಿಕವಾಗಿ ಹಝ್ರತ್ ಈಸಾ ಅಲೈಹಿಸ್ಸಲಾಮ್ ಆಕಾಶದಲ್ಲಿ ಜೀವಂತವಾಗಿ ಕುಳಿತಿದ್ದರೆ ಪವಿತ್ರ ಖುರ್‌ಆನಿನ ವಚನದ ಪ್ರಕಾರ ಅವರು ಅತಿಮಾನುಷರೆಂದು ಸಾಬೀತು ಆಗುವುದಿಲ್ಲವೇ?

ಒಬ್ಬ ಕ್ರೈಸ್ತನು ಮುಸ್ಲಿಮರೊಂದಿಗೆ ಹೀಗೆ ಹೇಳಲಾರನೆ?– ನಿಮ್ಮ ಪ್ರವಾದಿ ತಾನು ಆಕಾಶಕ್ಕೆ ಜೀವಂತವಾಗಿ ಹೋಗುವುದಕ್ಕೆ ಕಾರಣ ತಾನು ಮನುಷ್ಯನಾಗಿರುವುದು ಎಂದು ಹೇಳಿದುದು ಪವಿತ್ರ ಖುರ್‌ಆನ್ ಮೂಲಕ ತಿಳಿಯುತ್ತದೆ. ಹಝ್ರತ್ ಈಸಾ ಅಲೈಹಿಸ್ಸಲಾಮ್ ನೀವು ನಂಬುವ ಹಾಗೆ ಜೀವಂತವಾಗಿ ಶರೀರ ಸಮೇತ ಆಕಾಶಕ್ಕೆ ಏರಿ ಹೋಗಿರುವರು. ಹೀಗೆ ಅವರು ನಿಮ್ಮ ಪ್ರವಾದಿಗಿಂತ ಶ್ರೇಷ್ಠರೆಂದೂ ಮನುಷ್ಯರಿಗಿಂತ ಶ್ರೇಷ್ಠತೆ ಇರುವ ಒಂದು ಸೃಷ್ಟಿ ಎಂದೂ ಸಾಬೀತಾಗುವುದಿಲ್ಲವೇ?

ಈ ಪ್ರಶ್ನೆಗೆ ಉತ್ತರವಾಗಿ ಮುಸ್ಲಿಮರು ನಾಚಿಕೆ ಹೊರತು ಇನ್ನೇನು ತೋರ್ಪಡಿಸಬಲ್ಲರು? ದುಃಖಕರವಾದ ವಿಷಯವೇನೆಂದರೆ ಮುಸ್ಲಿಮರು ಸ್ವತಃ ತಮ್ಮ ಕೈಗಳಿಂದಲೇ ಧರ್ಮತ್ಯಾಗದ ಮಾರ್ಗವನ್ನು ತೆರೆದರು. ತಮ್ಮ ಯಜಮಾನರಾದ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸರ್ವಶ್ರೇಷ್ಠತೆಯ ಮೇಲೆ ಸ್ವತಃ ತಮ್ಮ ಕೈಗಳಿಂದಲೇ ಶರ ಪ್ರಯೋಗ ಮಾಡಿರುವರು ಎನ್ನುವುದು ಎಷ್ಟು ಖೇದಕರವಾಗಿದೆ. ಒಬ್ಬ ಕವಿ ಹೀಗೆ ಹೇಳಿರುವರು:

**ಮನ್ ಅಝ್ ಬೇಗಾನಗಾಂ ಹರ್‌ಗಿಝ್ ನ ನಾಲಮ್**
**ಕೆ ಬಾಮನ್ ಹರ್‌ಚ ಕರ್‌ದ್ ಆಂ ಆಶ್‌ನಾ ಕರ್‌ದ್.**

"ನಾನು ಅನ್ಯರನ್ನು ದೂರುವುದಿಲ್ಲ. ನನ್ನೊಂದಿಗೆ ಏನೆಲ್ಲ ಮಾಡಲಾಗಿದೆಯೋ ಅವುಗಳನ್ನು ನನ್ನ ಸ್ನೇಹಿತರೇ ಮಾಡಿದ್ದಾರೆ."

**ಮಿಅ್‌ರಾಜ್**

ಇಲ್ಲಿ ಒಂದು ಪ್ರಶ್ನೆ ಸಹಜವಾಗಿ ಉಂಟಾಗುತ್ತದೆ. ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜೀವಂತವಾಗಿ ಶರೀರ ಸಮೇತ ಆಕಾಶಕ್ಕೆ ಏರಿ ಹೋಗುವುದು ಅವರು ಮನುಷ್ಯರಾದುದರಿಂದ ಅಸಾಧ್ಯ

ಎಂದು ಅಲ್ಲಾಹನು ಹೇಳಿರುವಾಗ ಅವರು ಮಿಅ್‌ರಾಜ್ ಸಂದರ್ಭದಲ್ಲಿ ಆಕಾಶಕ್ಕೆ ತಲಪಿದುದಾದರೂ ಹೇಗೆ? ಇದಕ್ಕೆ ಉತ್ತರವೇನೆಂದರೆ ಮಿಅ್‌ರಾಜ್ ಸಂದರ್ಭದಲ್ಲಿ ಹಝ್ರತ್ ಪೈಗಂಬರ್[ಸ] ತನ್ನ ದೇಹದೊಂದಿಗೆ ಆಕಾಶಕ್ಕೆ ಹೋಗಿರಲಿಲ್ಲ. ವಾಸ್ತವಿಕ ವಿಷಯವೇನೆಂದರೆ ಅದು ಅತ್ಯಂತ ಸೂಕ್ಷ್ಮವಾದ ಒಂದು ದರ್ಶನವಾಗಿತ್ತು. ಅದನ್ನು ಪೈಗಂಬರರಿಗೆ[ಸ] ತೋರಿಸಲಾಯಿತು. ಮಲಗಿ ನಿದ್ರಿಸುತ್ತಾ ಇರುವಾಗ ಕನಸಿನಲ್ಲಿ ದೂರದೇಶಗಳಿಗೆ ಹೋದ ಹಾಗೆ ಕಾಣಿಸುವ ರೀತಿಯಲ್ಲಿಯೇ ಮಿಅ್‌ರಾಜ್ ಎಂಬ ದರ್ಶನದಲ್ಲಿಯೂ ಸಂಭವಿಸಿತು. ಹಿಂದಿನ ಕಾಲದ ಅನೇಕ ವಿದ್ವಾಂಸರಾದ ಮಹಾನುಭಾವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ದೇಹಸಮೇತ ಆಕಾಶಾರೋಹಣ ಮಾಡಿರಲಿಲ್ಲ ಎಂದು ಹೇಳಿರುವರು. ಅದೊಂದು ಆಧ್ಯಾತ್ಮಿಕ ದರ್ಶನವಾಗಿತ್ತೆಂದೂ ಹಝ್ರತ್ ಪೈಗಂಬರರ[ಸ] ಮತ್ತು ಅವರ ಸಮುದಾಯದ ಮುಂದಿನ ಅಭಿವೃದ್ಧಿಯ ದೃಶ್ಯಗಳು ಆಕಾಶದ ಪ್ರಯಾಣದಲ್ಲಿ ತೋರಿಸಲ್ಪಟ್ಟವು ಎಂದೂ ಅವರು ಹೇಳಿರುವರು. ಕೆಲವು ಮುಸ್ಲಿಮರು ನಿಶ್ಚಯವಾಗಿಯೂ ಅದು ಹಝ್ರತ್ ಪೈಗಂಬರರ[ಸ] ದೇಹಸಮೇತ ನಡೆಸಿದ ಆಕಾಶಾರೋಹಣವೆಂದು ನಂಬುತ್ತಾರೆ.

ಆದರೆ ಪವಿತ್ರ ಖುರ್‌ಆನ್ ಮತ್ತು ಸಹೀಹ್ ಆದ ಹದೀಸುಗಳು ಈ ಅಭಿಪ್ರಾಯವನ್ನು ಬಹಳ ಸ್ಪಷ್ಟವಾಗಿ ರದ್ದುಗೊಳಿಸುತ್ತವೆ. ಬೇರೆ ಸಾಕ್ಷ್ಯಾಧಾರಗಳ ಜೊತೆಗೆ ಪವಿತ್ರ ಖುರ್‌ಆನಿನ **'ಹಲ್ ಕುನ್‌ತು ಇಲ್ಲಾ ಬಶರರ್ರಸೂಲ'–** ನಾನೊಬ್ಬ ಸಂದೇಶವಾಹಕನಾದ ಮನುಷ್ಯನು ಮಾತ್ರವಾಗಿದ್ದೇನೆ ಎಂಬ ವಚನ (17:94) ಹಝ್ರತ್ ಪೈಗಂಬರರು[ಸ] ದೇಹಸಮೇತ ಜೀವಂತವಾಗಿ ಆಕಾಶಾರೋಹಣ ಮಾಡಿದರೆಂದು ಅಭಿಪ್ರಾಯವನ್ನು ರದ್ದುಗೊಳಿಸುತ್ತದೆ.

ಹಝ್ರತ್ ಪೈಗಂಬರರು[ಸ] ಶರೀರ ಸಮೇತ ಜೀವಂತವಾಗಿ ಆಕಾಶಾರೋಹಣ ಮಾಡಬಲ್ಲವರಾಗಿದ್ದರೆ ಮಕ್ಕದ ಅವಿಶ್ವಾಸಿಗಳ ಅಪೇಕ್ಷೆಯನ್ನು ನಿರಾಕರಿಸಿ ಅವರು ಇಸ್ಲಾಮ್ ಧರ್ಮವನ್ನು ಸೇರಲಾಗದ ಸ್ಥಿತಿ ಏಕೆ ಉಂಟುಮಾಡಿದರು? ಮಿಅ್‌ರಾಜ್ ವಾಸ್ತವಿಕವಾಗಿ ದೇಹಸಮೇತವಾಗಿದ್ದರೆ ಹಝ್ರತ್ ಪೈಗಂಬರರಿಗೆ[ಸ] ಅವಿಶ್ವಾಸಿಗಳ ಅಪೇಕ್ಷೆ ಈಡೇರಿಸುವುದು ಸಾಮಾನ್ಯ ವಿಷಯವಾಗುತ್ತಿತ್ತು. ಅವಿಶ್ವಾಸಿಗಳ ಅಪೇಕ್ಷೆ ಪ್ರಕಾರ ಅವರಿಗೆ ಆಕಾಶಾರೋಹಣದ ಪವಾಡ ತೋರಿಸಬಹುದಾಗಿತ್ತು. ಆದರೆ ತಾನು ಮನುಷ್ಯನಾಗಿರುವುದರಿಂದ ದೇಹಸಮೇತ ಆಕಾಶಾರೋಹಣಕ್ಕೆ ತಡೆಯಾಗಿದೆ ಎಂದು ಹಝ್ರತ್ ಪೈಗಂಬರರು[ಸ] ಹೇಳಿದರು. ಆದುದರಿಂದ ಮಿಅ್‌ರಾಜ್ ಸಂದರ್ಭದಲ್ಲಿ ಹಝ್ರತ್ ಪೈಗಂಬರರು[ಸ] ದೇಹಸಮೇತ ಆಕಾಶಾರೋಹಣ ಮಾಡಲಿಲ್ಲ ಎಂದು ಸ್ಪಷ್ಟವಾಗುತ್ತದೆ.

ಪವಿತ್ರ ಖುರ್‌ಆನ್ ಮಿಅ್‌ರಾಜನ್ನು ರೂಯಾ (ಸ್ವಪ್ನದರ್ಶನ, ದಿವ್ಯದರ್ಶನ) ಎಂದು ಹೇಳಿದೆ. ಪವಿತ್ರ ಖುರ್‌ಆನಿನ ಈ ವಚನ ನೋಡಿರಿ: "ನಾವು ನಿನಗೆ ತೋರಿಸಿದ ದಿವ್ಯದರ್ಶನ ಜನರಿಗೆ ಒಂದು ಪರೀಕ್ಷೆಯಾಗಿತ್ತು." (17:61).

ಹಝ್ರತ್ ಪೈಗಂಬರರ[ಸ] ಪತ್ನಿ ಹಝ್ರತ್ ಆಯಿಶಾ[ರ] ಹೀಗೆ ವರದಿ ಮಾಡಿದ್ದಾರೆ: "ಮಿಅ್‌ರಾಜ್ ರಾತ್ರಿ ಹಝ್ರತ್ ಪೈಗಂಬರರ[ಸ] ದೇಹ ಭೂಮಿಯನ್ನು ಬಿಟ್ಟು ಹೋಗಿರಲಿಲ್ಲ." (ಸೀರತ್ ಇಬ್ನು ಹಿಶಾಮ್ ಸಂಪುಟ 1).

ಮಿಅ್‌ರಾಜ್ ಸಂಭವಿಸಿದುದು ಹಝ್ರತ್ ಪೈಗಂಬರರ[ಸ] ಮನುಷ್ಯ ದೇಹದೊಂದಿಗೆ ಅಲ್ಲ. ಅವರಿಗೆ ಆ ಸಂದರ್ಭದಲ್ಲಿ ಸೂಕ್ಷ್ಮ ದೇಹ ದಯಪಾಲಿಸಲ್ಪಟ್ಟಿದ್ದಿತೆಂದು ತಿಳಿಯುತ್ತದೆ. ಸ್ವಪ್ನ ದರ್ಶನಗಳಲ್ಲಿ ಹೀಗೆಯೇ ಸಂಭವಿಸುತ್ತದೆ.

ಹದೀಸು ಸಂಗ್ರಹ ಗ್ರಂಥಗಳಲ್ಲಿ ಅತ್ಯಂತ ವಿಶ್ವಾಸಾರ್ಹವೂ ಸರಿಯಾದುದೆಂದೂ ಗಣಿಸಲ್ಪಡುವ ಬುಖಾರಿಯಲ್ಲಿ ಹೀಗೆ ಬರೆದಿದೆ: ಸುಮ್ಮಸ್ತಯ್‌ಖಝು ವ ಹುವ ಫಿಲ್ ಮಸ್‌ಜಿದಿಲ್ ಹರಾಮ್. (ಬುಖಾರಿ ಕಿತಾಬು ತೌಹೀದ್).

ಅಂದರೆ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಿಅ್‌ರಾಜ್ ರಾತ್ರಿ ಎಲ್ಲ ದೃಶ್ಯಗಳನ್ನು ಕಂಡ ನಂತರ ನಿದ್ರೆಯಿಂದ ಎಚ್ಚರಗೊಂಡರು. ಆಗ ಅವರು ಪರಿಶುದ್ಧ ಮಸ್‌ಜಿದ್‌ನಲ್ಲಿದ್ದರು.

ಈ ಹದೀಸಿನಿಂದ ಸಹ ಮಿಅ್‌ರಾಜ್ ಸಂಭವ ಒಂದು ದಿವ್ಯದರ್ಶನವಾಗಿತ್ತೆಂದೂ ಅವರು ದೇಹಸಮೇತ ಆಕಾಶಾರೋಹಣ ನಡೆಸಲಿಲ್ಲವೆಂದೂ ಸ್ಪಷ್ಟವಾಗುತ್ತದೆ. ◆◆◆

**ಎಲ್ಲರೊಂದಿಗೆ ಪ್ರೀತಿ**
**ಯಾರೊಂದಿಗೂ ದ್ವೇಷವಿಲ್ಲ**

# ಖುರ್‌ಆನಿನ ಜಿನ್ನ್

◆ ಮೌಲಾನಾ ಬಿ.ಅಬ್ದುಲ್ಲಾಹ್ ಎಚ್.ಎ.

ಭೂತ ಪ್ರೇತಾದಿಗಳ ಕುರಿತು ವಿವಿಧ ತರ ಅಂಧ ವಿಶ್ವಾಸಗಳು ನಾನಾ ಜಾತಿ ಮತಸ್ಥರ ಎಡೆಯಲ್ಲಿ ನುಸುಳಿಕೊಂಡಿದೆ ಎಂಬುದು ಎಲ್ಲರೂ ಒಪ್ಪುವ ವಿಚಾರವಾಗಿದೆ. ಅಂಥ ಅಂಧವಿಶ್ವಾಸಗಳು ಮುಸ್ಲಿಮರನ್ನೂ ಬಾಧಿಸದಿರಲಿಲ್ಲ. ಈ ಮೂಢನಂಬಿಕೆಗಳಿಗೆ ಹೆಚ್ಚಿನಾಂಶ ಆಧಾರವಾಗಿರುವುದು ಊಹಾಪೋಹಗಳೂ ಗ್ರಹಿಸಲು ಅಸಾಧ್ಯವಾದ ತರದಲ್ಲಿ ನಡೆದುದಾಗಿ ಹೇಳಲ್ಪಡುವ ಕೆಲವು ವಿಚಾರಗಳೂ ಆಗಿವೆ. ಬಾಹ್ಯ ದೃಷ್ಟಿಗೆ ಅಗೋಚರರಾದ ಕೆಲವು ಶಕ್ತಿಗಳು ಪ್ರಪಂಚದಲ್ಲಿ ವರ್ತಿಸುತ್ತಿವೆಯೆಂದು ಒಪ್ಪಬಹುದಾದರೂ ಅವುಗಳ ಬಗ್ಗೆ ಸಾಮಾನ್ಯವಾಗಿ ನಂಬಿಕೊಂಡು ಬರುವ ಸಂಗತಿಗಳಲ್ಲಿ ದೊಡ್ಡದಾದೊಂದು ಅಂಶ ಬರೇ ಅತಿಶಯೋಕ್ತಿ ಮಾತ್ರವೆಂದು ಭಾವಿಸಬೇಕಾಗಿದೆ.

'ಜಿನ್ನ್' ಎಂದರೆ ದೃಷ್ಟಿಗೆ ಅಗೋಚರವಾದ ಒಂದು ತರ ಸೂಕ್ಷ್ಮ ಸೃಷ್ಟಿಗಳೆಂದೂ ಅವರು ಸ್ಥೂಲ ದೇಹಿಗಳಲ್ಲವಾದರೂ ನಮ್ಮ ಹಾಗೆಯೇ ಬುದ್ಧಿಯೂ ಜ್ಞಾನವೂ ಉಳ್ಳವರೂ ಧರ್ಮಶಾಸನಗಳನ್ನನುಸರಿಸಿ ಜೀವಿಸಲು ಬದ್ಧರೂ; ಆದರೆ ಕ್ಷಣಮಾತ್ರದಲ್ಲಿ ಬಯಸುವುದನ್ನೆಲ್ಲ ಮಾಡಲು, ಇಚ್ಛಿಸುವೆಡೆಗಳಲ್ಲೆಲ್ಲ ತಲಪಲು, ಇಷ್ಟವುಳ್ಳ ರೂಪ ತಾಳಲು ಶಕ್ತರೆಂದು ಹೇಳಲಾಗುತ್ತದೆ. ನಮ್ಮ ಇಂದ್ರಿಯಗಳಿಗೆ ತಿಳಿಯಲಾಗದ ಸೃಷ್ಟಿಗಳಿವೆ ಎಂಬ ವಿಷಯ ನಮ್ಮ ಪರಿಮಿತವಾದ ಅರಿವಿಗಿಂತ ಉನ್ನತವಾಗಿರುವುದರಿಂದ ಹಾಗೆ ಒಂದು ಸೃಷ್ಟಿಯೇ ಇಲ್ಲವೆಂದು ನಿರಾಕರಿಸುವುದು ಎಂದಿಗೂ ಸಮರ್ಥನೀಯವಲ್ಲ. ಏಕೆಂದರೆ ನಮಗೆ ಅರಿವಿಲ್ಲದ ಕಾರಣ ಅದನ್ನು ನಿರಾಕರಿಸುತ್ತೇವೆ ಎಂದು ಮಾತ್ರ ಅದಕ್ಕೆ ಅರ್ಥವಿದೆ. ಆದರೆ ಆತ್ಮಮಯಗಳಾದ ಕೆಲವು ಸೂಕ್ಷ್ಮ ಸೃಷ್ಟಿಗಳಿವೆಯೆಂದು, ಬುದ್ಧಿಗೂ ಅನುಭವಕ್ಕೂ ಧರ್ಮಶಾಸ್ತ್ರಕ್ಕೂ ವಿರುದ್ಧವಾಗಿ ಹೆಚ್ಚುಕಮ್ಮಿ ಸರ್ವ ಶಕ್ತಿತ್ವ ಮತ್ತು ಸರ್ವವ್ಯಾಪಿತ್ವವುಳ್ಳವರೂ, ಅದೇ ಸಂದರ್ಭದಲ್ಲೇ ಸ್ಥೂಲದೇಹಿಗಳಾದ ಮನುಷ್ಯರ ಹಾಗೆ ಧರ್ಮಶಾಸನಗಳನ್ನನುಸರಿಸಿ ಜೀವಿಸಲು ಬದ್ಧರಾದ ಸೃಷ್ಟಿಗಳು ಜಿನ್ನುಗಳು ಎಂದು ಭಾವಿಸಲು ನಿರ್ವಾಹವಿಲ್ಲ.

'ಜಿನ್ನ್' ಎಂಬುದರ ಶಬ್ದಾರ್ಥ ಮರೆಯಲ್ಲಿರುವುದು ಎಂದಾಗಿದೆ. ಅರಬಿ ಸಾಹಿತ್ಯದಲ್ಲಿ ಆಧ್ಯಾತ್ಮಿಕ ಸೃಷ್ಟಿಗೂ ದೃಷ್ಟಿಯಿಂದ ಸಾಮಾನ್ಯವಾಗಿ ಮರೆಯಲ್ಲಿರುವ ಹಾವು, ಕ್ರಿಮಿ, ಅಣು ಇತ್ಯಾದಿಗಳಿಗೂ ಮನುಷ್ಯರಲ್ಲಿ ಶಕ್ತಿ ಮತ್ತು ಗಾಂಭೀರ್ಯವುಳ್ಳ ವ್ಯಕ್ತಿಗಳಿಗೂ 'ಜಿನ್ನ್' ಎಂದು ಪ್ರಯೋಗಿಸಲಾಗುತ್ತದೆ. 'ಮರೆಯಲ್ಲಿರುವುದು' ಎಂದು ಶಬ್ದಾರ್ಥವಿರುವುದರಿಂದ ಸ್ಥಾನ ಮಹತ್ವದಿಂದಾಗಲಿ, ಪ್ರಾಬಲ್ಯದಿಂದಾಗಲಿ, ಕುಲೀನತೆಯಿಂದಾಗಲಿ ಸಾಮಾನ್ಯ ಜನರೊಂದಿಗೆ ಬೆರೆಯದೆ ದೂರನಿಲ್ಲುವವರಿಗೂ 'ಜಿನ್ನ್' ಎಂದು ಹೇಳಬಹುದು.

ಜಿನ್ನ್ ಎಂಬುದಕ್ಕೆ ಏನೆಲ್ಲ ಅರ್ಥಗಳಿದ್ದರೂ ಪವಿತ್ರ ಖುರ್‌ಆನಿನಲ್ಲಿ ಈ ಪದ 'ಇನ್ಸ್' ಎಂಬ ಪದದೊಂದಿಗೆ ಸೇರಿಸಿ ಹೇಳಿದಲ್ಲೆಲ್ಲ ಮನುಷ್ಯನು ಎಂದೇ ಉದ್ದೇಶಿಸಲ್ಪಟ್ಟದ್ದೆಂದೂ ಅದ್ಭುತ ಶಕ್ತಿಗಳಿಂದ ಕೂಡಿದ ಅದೃಶ್ಯ ಸೃಷ್ಟಿಗಳಲ್ಲವೆಂದೂ ಆ ಪವಿತ್ರ ಗ್ರಂಥದಲ್ಲಿ ಗಾಢವಾಗಿ ಚಿಂತನೆ ಮಾಡಿದರೆ ಮನವರಿಕೆಯಾಗುವುದು.

**ಜಿನ್ನುಗಳಲ್ಲಿ ಪ್ರವಾದಿ**

ನ್ಯಾಯ ವಿಚಾರಣೆ ದಿನದಂದು ಅಲ್ಲಾಹನು ಸಂಬೋಧನೆ ಮಾಡುವನೆಂದು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

يَا مَعْشَرَ الْجِنِّ وَالْإِنسِ أَلَمْ يَأْتِكُمْ رُسُلٌ مِّنكُمْ يَقُصُّونَ عَلَيْكُمْ آيَاتِي
وَيُنذِرُونَكُمْ لِقَاءَ يَوْمِكُمْ هَٰذَا

"ಎಲೈ ಜಿನ್ನ್ ಮತ್ತು ಇನ್ಸ್ ಸಮೂಹವೇ, ನನ್ನ ದೃಷ್ಟಾಂತಗಳನ್ನು ನಿಮಗೆ ವಿವರಿಸಿಕೊಡುವ ಮತ್ತು ನೀವು ಭೇಟಿಯಾಗಲಿರುವ ಈ ದಿನದ ಬಗ್ಗೆ ನಿಮಗೆ ಮುನ್ನೆಚ್ಚರಿಕೆಯನ್ನೀಯುವ ನಿಮ್ಮ ಪೈಕಿಯ ಸಂದೇಶವಾಹಕರು ನಿಮ್ಮ ಬಳಿಗೆ ಬಂದಿರಲಿಲ್ಲವೇ?" (6:131)

ಈ ವಚನದಲ್ಲಿ ಹೇಳಿರುವುದು ಜಿನ್ನುಗಳಿಂದ ಮತ್ತು ಇನ್ಸುಗಳಿಂದ ಪ್ರವಾದಿಗಳು ಅವರ ಬಳಿಗೆ ಬಂದಿರುತ್ತಾರೆಂದಾಗಿದೆ. ಇಲ್ಲಿ ಜಿನ್ನ್ ಎಂದು ಹೇಳಿದ್ದು ಒಂದು ಸೂಕ್ಷ್ಮ ಸೃಷ್ಟಿಯ ಕುರಿತಾಗಿದ್ದರೆ ಆ ಕೂಟದಿಂದ ಪ್ರವಾದಿಗಳು ಆವಿರ್ಭವಿಸಬೇಕಾದುದು ಮತ್ತು ಅವರ ವೃತ್ತಾಂತಗಳು ಖುರ್‌ಆನಿನಲ್ಲಿ ಪ್ರಸ್ತಾವಿಸಬೇಕಾದುದು ಆವಶ್ಯಕವಾಗಿದೆ. ಆದರೆ ಮನುಷ್ಯರಾದ ಪ್ರವಾದಿಗಳ ಕುರಿತುಳ್ಳ ವಿವರಗಳೇ ಖುರ್‌ಆನಿನಲ್ಲಿ ಕಾಣಲ್ಪಡುತ್ತವೆ. ಜಿನ್ನ್ ಎಂದು ಹೇಳಿದ್ದು ಮನುಷ್ಯರನ್ನು ಉದ್ದೇಶಿಸಿಯೇ ಆಗಿದೆ ಎಂಬುದಕ್ಕೆ ಇದು ಒಂದು ತಕ್ಕುದಾದ ಪುರಾವೆಯಾಗಿದೆ.

'ಇನ್ಸ್' ಎಂದರೆ ಸಾಮಾನ್ಯ ರೀತಿಯಲ್ಲಿ ಜೀವಿಸುವವರಾಗಿದ್ದಾರೆ. ಏಕೆಂದರೆ ಈ ಪದ ಸ್ನೇಹ, ಸಖ್ಯ ಎಂಬೀ ಅರ್ಥದಿಂದ ಕೂಡಿದ 'ಉನ್ಸ್' ಎಂಬ ಧಾತುವಿನಿಂದ ಉತ್ಪತ್ತಿಯಾಗಿದೆ. 'ಜಿನ್ನ್' ಎಂದು ಹೇಳಿದ್ದು ಸಾಮಾನ್ಯ ಜನರಿಂದ ಅಗಲಿ ನಿಲ್ಲುವ, ಇತರರಿಗೆ ಸುಲಭವಾಗಿ ಕಾಣಲು ಮತ್ತು ಬೆರೆಯಲು ಸಾಧ್ಯವಾಗದ ದೊಡ್ಡ ಜನರ ಕುರಿತಾಗಿದೆ. ಏಕೆಂದರೆ 'ಜಿನ್ನ್' ಎಂಬುದರ ಅರ್ಥ ಮರೆಯಲ್ಲಿರುವುದು ಎಂದಾಗಿದೆ. ಹೀಗೆ ಜಿನ್ನ್, ಇನ್ಸ್ ಎಂಬುದು ರಾಜ–ಪ್ರಜೆ, ಯಜಮಾನ–ನೌಕರ, ಸರ್ವಾಧಿಕಾರಿ–ಸಾಮಾನ್ಯ ಮುಂತಾದ ಸ್ಥಾನಗಳನ್ನು ಸೂಚಿಸುವಂತಹ ಎರಡು ಸಾಂಕೇತಿಕ ಪದಗಳಾಗಿವೆ. ಮೇಲೆ ಉದ್ಧರಿಸಿದ ಖುರ್‌ಆನ್ ವಚನಗಳ ನಂತರದ ವಚನಗಳಲ್ಲಿ, ಹಾಗೆ ಪ್ರವಾದಿಗಳನ್ನು ಕಳುಹಿಸದೆ ಅಲ್ಲಾಹನು ಯಾವುದೇ ಪಟ್ಟಣವನ್ನು ಅನ್ಯಾಯವಾಗಿ ನಾಶಪಡಿಸುವವನಲ್ಲ

ಎಂದು ಪ್ರಸ್ತಾಪಿಸಲಾಗಿದೆ. ಹಾಗಿರುವಾಗ ಅದರಲ್ಲಿ ಹೇಳಲಾದ ಜಿನ್ನ್ ಮತ್ತು ಇನ್ಸ್ ಪಟ್ಟಣವಾಸಿಗಳಾಗಿದ್ದರೆಂದು ಮತ್ತು ಮನುಷ್ಯರ ಪೈಕಿಯ ಒಂದು ವರ್ಗವೇ ಜಿನ್ನ್ ಎಂದು ಸ್ಪಷ್ಟವಾಗುತ್ತದೆ.

**ಜಿನ್ನ್ ಪ್ರಭಾವಶಾಲಿಗಳು**

ಅಲ್ಲಾಹನು ಪ್ರಶ್ನಿಸುವನೆಂದು ಪವಿತ್ರ ಖುರ್‌ಆನ್ ಪುನಃ ಹೇಳುತ್ತದೆ:

يَا مَعْشَرَ الْجِنِّ قَدِ اسْتَكْثَرْتُم مِّنَ الْإِنسِ ۖ وَقَالَ أَوْلِيَاؤُهُم مِّنَ الْإِنسِ
رَبَّنَا اسْتَمْتَعَ بَعْضُنَا بِبَعْضٍ

“ಎಲೈ ‘ಜಿನ್ನ್’ ಸಮೂಹವೇ, ನೀವು ‘ಇನ್ಸ್’ ಸಮೂಹದಿಂದ ಹೆಚ್ಚಿನವರನ್ನು ನಮ್ಮ ಅಧೀನಕ್ಕೊಳಪಡಿಸಲು ಪ್ರಯತ್ನಿಸಿದ್ದೀರಿ.” ಆಗ ‘ಇನ್ಸ್’ ಪೈಕಿ ಅವರ ಮಿತ್ರರು ಹೇಳುವರು: “ನಮ್ಮ ಪ್ರಭೂ, ನಮ್ಮ ಪೈಕಿ ಕೆಲವರು ಬೇರೆ ಕೆಲವರಿಂದ ಪ್ರಯೋಜನ ಪಡೆದಿರುವರು.” (6:129).

ಈ ವಚನದಿಂದ ತಿಳಿಯುವುದೇನೆಂದರೆ, ಜಿನ್ನ್ ಇನ್ಸ್‌ಗಿಂತ ಶಕ್ತರೂ ಇನ್ಸನ್ನು ಅಧೀನಪಡಿಸುವವರೂ ಎರಡು ಸಮೂಹಗಳೂ ಪರಸ್ಪರ ಸಹಕರಿಸುವವರೂ ಆಗಿದ್ದಾರೆ. ಹಾಗಿರುವಾಗ ಜಿನ್ನ್ ಮನುಷ್ಯರಲ್ಲದ ಬೇರೊಂದು ಸೃಷ್ಟಿಯಾಗಲು ಸಾಧ್ಯವಿಲ್ಲ. ಏಕೆಂದರೆ ಸಾಮಾನ್ಯರನ್ನು ಅಧೀನದಲ್ಲಿಟ್ಟು ಅವರಿಂದ ದುಡಿಸುವವರು ಪ್ರಭುಗಳೂ ದೊಡ್ಡ ದೊಡ್ಡ ಧನಿಕರೂ ಆಗಿದ್ದಾರೆ; ಅದೃಶ್ಯವಾದ ಒಂದು ಅನ್ಯ ಸೃಷ್ಟಿಯಲ್ಲ. ಮನುಷ್ಯರಿಗಿಂತ ಶ್ರೇಷ್ಠತೆಯುಳ್ಳ ಮತ್ತು ಮನುಷ್ಯರನ್ನು ಸ್ವಾಧೀನ ವಲಯದಲ್ಲಿರಿಸುವ ಬೇರೊಂದು ಸೃಷ್ಟಿ ಇಲ್ಲವಷ್ಟೆ. ಇಲ್ಲಿ ಜಿನ್ನ್ ಮತ್ತು ಇನ್ಸ್ ಎರಡು ಹೆಸರು ಹೇಳಿರುವುದಾದರೂ ಅವರ ವರ್ತನೆ ಮತ್ತು ಜೀವಿತಾವಸ್ಥೆಗಳ ಸಂಬಂಧಿಸಿ ಹೇಳಿದ್ದು ಮನುಷ್ಯರಿಗೆ ಮಾತ್ರ ಅನ್ವಯಿಸುವಂಥ ರೀತಿಯಲ್ಲಾಗಿದೆ.

**ಜಿನ್ನ್‌ನಲ್ಲಿ ಪ್ರವಾದಿ ಶತ್ರು**

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

وَكَذَٰلِكَ جَعَلْنَا لِكُلِّ نَبِيٍّ عَدُوًّا شَيَاطِينَ الْإِنسِ وَالْجِنِّ يُوحِي بَعْضُهُمْ
إِلَىٰ بَعْضٍ زُخْرُفَ الْقَوْلِ غُرُورًا ۚ

“ನಾವು ಪ್ರತಿಯೊಬ್ಬ ಪ್ರವಾದಿಗೆ ‘ಇನ್ಸ್’ ಮತ್ತು ‘ಜಿನ್ನ್’ಗಳಿಂದ ದುರ್ಜನರನ್ನು ಶತ್ರುಗಳನ್ನಾಗಿ ಮಾಡಿದ್ದೇವೆ. ಅವರು ವಂಚಿಸಲಿಕ್ಕಾಗಿ ಪರಸ್ಪರ ಮಧುರ ಮಾತುಗಳನ್ನಾಡುತ್ತಾರೆ.” (6:113).

ಈ ವಚನದಲ್ಲಿ ಪ್ರವಾದಿಗಳ ಶತ್ರುಗಳಾಗಿ ಜಿನ್ನ್ ಮತ್ತು ಇನ್ಸ್ ಇದ್ದಾರೆಂದು ಹೇಳಲಾಗಿದೆ. ಮನುಷ್ಯನು ಪ್ರವಾದಿಗಳಿಗೆ ಶತ್ರುಗಳಾಗಿರುವುದು ಮತ್ತು ಹಲವಿಧ ಅಕ್ರಮಗಳನ್ನು ಮಾಡಿದ್ದು ಖುರ್‌ಆನ್ ಮತ್ತು ಇತರ ಧರ್ಮ ಗ್ರಂಥಗಳು ಧಾರಾಳವಾಗಿ ಹೇಳಿವೆ. ಆದರೆ, ಜಿನ್ನ್ ಎಂಬ ಒಂದು ಅನ್ಯ ಸೃಷ್ಟಿ ಪ್ರವಾದಿಗಳ ವಿರುದ್ಧ ವರ್ತಿಸಿರುವುದಾಗಿ ಎಲ್ಲಿಯೂ ಹೇಳಿದ್ದು ಕಾಣುವುದಿಲ್ಲ. ಜಿನ್ನ್ ಮತ್ತು ಇನ್ಸ್ ಪ್ರವಾದಿಗಳಿಗೆ ವಿರುದ್ಧವಾಗಿ ಅನ್ಯೋನ್ಯ ಹಲವು ಗೂಢಾಲೋಚನೆಗಳನ್ನು ನಡೆಸಿ ಮಧುರ ಮಾತುಗಳನ್ನು ಆಡುತ್ತಿದ್ದರೆಂದು ಮೇಲಿನ ಖುರ್‌ಆನ್ ವಚನದಲ್ಲಿ ಹೇಳಲಾಗಿದೆ. ಪ್ರವಾದಿಗಳ ಶತ್ರುಗಳಾದ ಮನುಷ್ಯರು ಜಿನ್ನುಗಳೆಂಬ ಅನ್ಯ ಸೃಷ್ಟಿಗಳೊಂದಿಗೆ ಸೇರಿಕೊಂಡು ಪ್ರವಾದಿಗಳನ್ನು ದ್ರೋಹಿಸಿದ ಬಗ್ಗೆ ತಿಳಿದು ಬರುವುದಿಲ್ಲ. ಪ್ರವಾದಿಗಳ ವಿರುದ್ಧ ಗೂಢಾಲೋಚನೆ ನಡೆಸುತ್ತಿದ್ದ ಪಿಶಾಚಿಗಳು ಜಿನ್ನ್ ಮತ್ತು ಇನ್ಸ್ ವರ್ಗಕ್ಕೆ ಸೇರಿದವರಾದ ಮನುಷ್ಯರೇ ಆಗಿರಲಿಕ್ಕೆ ನಿರ್ವಾಹವಿದೆ.

**ಜಿನ್ನ್ ಸ್ಥೂಲದೇಹಿ**

ಇನ್ನೊಂದೆಡೆ ಅಲ್ಲಾಹನು ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

قُل لَّئِنِ اجْتَمَعَتِ الْإِنسُ وَالْجِنُّ عَلَىٰ أَن يَأْتُوا بِمِثْلِ هَٰذَا الْقُرْآنِ لَا
يَأْتُونَ بِمِثْلِهِ وَلَوْ كَانَ بَعْضُهُمْ لِبَعْضٍ ظَهِيرًا
وَلَقَدْ صَرَّفْنَا لِلنَّاسِ فِي هَٰذَا الْقُرْآنِ مِن كُلِّ مَثَلٍ فَأَبَىٰ أَكْثَرُ النَّاسِ
إِلَّا كُفُورًا

“ಹೇಳು ಈ ಖುರ್‌ಆನಿಗೆ ಸಮಾನವಾದ ಮತ್ತೊಂದನ್ನು ತರಲಿಕ್ಕಾಗಿ ಇನ್ಸ್‌ಮತ್ತು ಜಿನ್ನ್ ಒಟ್ಟುಸೇರಿ ಪ್ರಯತ್ನಿಸಿದರೂ– ಅವರು ಪರಸ್ಪರ ಸಹಾಯ ಮಾಡಿದರೂ – ಅದಕ್ಕೆ ತುಲ್ಯವಾದುದನ್ನು ತರಲಿಕ್ಕೆ ಅವರಿಂದ ಸಾಧ್ಯವಿಲ್ಲ. ಮನುಷ್ಯರಿಗೋಸ್ಕರ ಈ ಖುರ್‌ಆನಿನಲ್ಲಿ ಎಲ್ಲ ಉಪಮೆಗಳನ್ನೂ ಹಲವು ವಿಧದಲ್ಲಿ ನಾವು ವಿವರಿಸಿದ್ದೇವೆ. ಆದರೆ ಮನುಷ್ಯರಲ್ಲಿ ಹೆಚ್ಚಿನವರು ಅವಿಶ್ವಾಸವನ್ನು ಹೊರತು ಬೇರೆಲ್ಲವನ್ನೂ ತಿರಸ್ಕರಿಸುತ್ತಾರೆ.” (19:89,90)

ಇಲ್ಲಿ, ಇನ್ಸ್ ಮತ್ತು ಜಿನ್ನ್ ಒಂದುಗೂಡಿ ಖುರ್‌ಆನಿಗೆ ತುಲ್ಯವಾದ ಒಂದು ಗ್ರಂಥವನ್ನು ತರಲಿಕ್ಕೆ ಮತ್ತು ಅದಕ್ಕೋಸ್ಕರ ಅವರು ಪರಸ್ಪರ ಸಹಾಯಿಗಳಾಗಲಿಕ್ಕೆ ಪಂಥಾಹ್ವಾನ ನೀಡಲಾಗಿದೆ. ಖುರ್‌ಆನಿಗೆ ಸಮಾನವಾದ ಒಂದು ಗ್ರಂಥ ತರಬೇಕಾದುದು ಮನುಷ್ಯರಲ್ಲದೆ ಸೂಕ್ಷ್ಮದೇಹಿಗಳೆಂದು ಹೇಳಲ್ಪಡುವ ‘ಜಿನ್ನು’ಗಳಾಗಿರಲಿಕ್ಕೆ ಸಾಧ್ಯವಿಲ್ಲ. ಮಾತ್ರವಲ್ಲ, ಹಾಗೆ ಒಂದನ್ನು ಸಿದ್ಧಪಡಿಸಲಿಕ್ಕೆ ಶತ್ರುಗಳು ಅನ್ಯೋನ್ಯ ಸಹಾಯಿಗಳಾಗಬಹುದಾದರೂ ಜಿನ್ನುಗಳ ಸಹಾಯ ಅವರಿಗೆ ಸಿಗಲಾರದು. ಮೇಲಿನ ವಚನದಿಂದ, ಜಿನ್ನ್ ಮತ್ತು ಇನ್ಸ್ ಪರಸ್ಪರ ಸಹಾಯ ಸಹಕಾರ ಮಾಡುವವರೆಂದು ಮನವರಿಕೆಯಾಗುತ್ತದೆ. ಈ ಸಹಕಾರ ಮನುಷ್ಯರು ಅನ್ಯೋನ್ಯವಲ್ಲದೆ ಮನುಷ್ಯ ಮತ್ತು ಒಂದು ಸೂಕ್ಷ್ಮ ಸೃಷ್ಟಿ ಪರಸ್ಪರ ಆಗಲು ಸಾಧ್ಯವಲ್ಲ. ಒಟ್ಟಾರೆ, ಇಲ್ಲಿ ಇನ್ಸ್ ಮತ್ತು ಜಿನ್ನ್ ಎಂದು ಹೇಳಿದ್ದು ಮನುಷ್ಯರಲ್ಲಿರುವ ಎರಡು ವರ್ಗಗಳ ಕುರಿತೇ ಆಗಿದೆ. ಅಂದರೆ, ಖುರ್‌ಆನನ್ನು ಪ್ರತ್ಯಕ್ಷದಲ್ಲಿ ವಿರೋಧಿಸುವವರು ಮತ್ತು ಮರೆಯಲ್ಲಿದ್ದುಕೊಂಡು ಆ ವಿರೋಧಕ್ಕೆ ನೇತೃತ್ವ ನೀಡುವವರು. ಪವಿತ್ರ ಖುರ್‌ಆನಿನಲ್ಲಿ ಮನುಷ್ಯರಿಗೆ ಮಾರ್ಗದರ್ಶನವಾಗಿರುವ ಎಲ್ಲ ವಿವರಣೆಗಳು ಅಡಕವಾಗಿರುವುದೆಂದೂ ಆದರೆ ಅಧಿಕ ಜನರು ಅದನ್ನು ನಿರಾಕರಿಸುತ್ತಾರೆಂದೂ

ಪ್ರಸ್ತಾಪಿಸಿರುವುದರಿಂದ ಅದು ಮನುಷ್ಯರಿಗೋಸ್ಕರ ಇದೆಯೆಂದೂ ಅದನ್ನು ನಿರಾಕರಿಸುವುದು ಮನುಷ್ಯರೆಂದೂ ಸುಸ್ಪಷ್ಟವಾಗುತ್ತದೆ. ಖುರ್‌ಆನ್ ದೇವ ವಚನವಲ್ಲವೆಂದು ನಿರಾಕರಿಸಿ ಹೇಳುವವರು ಮತ್ತು ಅದಕ್ಕೆ ತುಲ್ಯವಾದ ಒಂದು ಗ್ರಂಥ ತರಲು ಪಂಥಾಹ್ವಾನ ನೀಡಲ್ಪಟ್ಟಿರುವವರು ಆದ 'ಜಿನ್ನ್ ಮತ್ತು ಇನ್ಸ್' ಮನುಷ್ಯರೇ ಹೊರತು ಬೇರೊಂದು ಸೃಷ್ಟಿಯಾಗಿರಲಿಕ್ಕೆ ಸಾಧ್ಯವಿಲ್ಲ.

**ಜಿನ್ನ್ ಬುದ್ಧಿಜೀವಿಗಳು**

ಕಣ್ಣಿದ್ದೂ ಕಾಣದವರು, ಕಿವಿಯಿದ್ದರೂ ಆಲಿಸದವರು, ಬುದ್ಧಿಯಿದ್ದರೂ ಆಲೋಚಿಸದವರು ಜಿನ್ನುಗಳಲ್ಲಿ ಹೆಚ್ಚಿನವರೆಂದು ಖುರ್‌ಆನ್ ಮನಗಾಣಿಸಿಕೊಡುತ್ತದೆ. ಆ ಪವಿತ್ರ ಗ್ರಂಥ ಹೇಳುತ್ತದೆ:

وَلَقَدْ ذَرَأْنَا لِجَهَنَّمَ كَثِيرًا مِّنَ الْجِنِّ وَالْإِنسِ ۖ لَهُمْ قُلُوبٌ لَّا يَفْقَهُونَ بِهَا
وَلَهُمْ أَعْيُنٌ لَّا يُبْصِرُونَ بِهَا وَلَهُمْ آذَانٌ لَّا يَسْمَعُونَ بِهَا ۚ أُولَٰئِكَ
كَالْأَنْعَامِ بَلْ هُمْ أَضَلُّ ۚ أُولَٰئِكَ هُمُ الْغَافِلُونَ

"ಖಂಡಿತವಾಗಿಯೂ ಜಿನ್ನ್ ಮತ್ತು ಇನ್ಸ್ ವರ್ಗಗಳಿಗೆ ಸೇರಿದ ಅನೇಕರನ್ನು ಅವರ ಅಂತ್ಯ ನರಕವಾಗುವಂತೆ ನಾವು ಸೃಷ್ಟಿಸಿದ್ದೇವೆ. ಅವರಿಗೆ ಹೃದಯಗಳಿವೆ; (ಆದರೆ) ಅವರು ಅವುಗಳಿಂದ ಗ್ರಹಿಸುವುದಿಲ್ಲ. ಅವರಿಗೆ ಕಣ್ಣುಗಳಿವೆ; (ಆದರೆ) ಆ ಮೂಲಕ ಅವರು ಕಾಣುವುದಿಲ್ಲ. ಅವರಿಗೆ ಕಿವಿಗಳಿವೆ; (ಆದರೆ) ಆ ಮೂಲಕ ಅವರು ಕೇಳುವುದಿಲ್ಲ. ಅವರು ಜಾನುವಾರುಗಳಿಗೆ ಸಮಾನರು. ಅಲ್ಲ, ಅವರು ಅವುಗಳಿಗಿಂತ ದಾರಿಗೆಟ್ಟವರು.ಅವರೇ ಮತಿಹೀನರು." (7:180).

ಇಲ್ಲಿ ಜಿನ್ನ್ ಮತ್ತು ಇನ್ಸ್‌ಗೆ ಇರುವುದಾಗಿ ಸಾಮಾನ್ಯವಾಗಿ ಹೇಳಲಾದ ಗುಣಗಳು ಮನುಷ್ಯರಿಗೆ ಮಾತ್ರ ಇರುವವುಗಳಾಗಿವೆ. ಸಂಕ್ಷಿಪ್ತವಾಗಿ, ಜಿನ್ನ್ ಎಂದು ಹೇಳಿದ್ದು ತಾವು ದೊಡ್ಡವರೆಂದು ಬೀಗುವ ಮನುಷ್ಯರ ಕುರಿತೇ ಆಗಿತ್ತೆಂದು ಭಾವಿಸಬೇಕಾಗಿದೆ.ಈ ವಚನದಲ್ಲಿ ಜಿನ್ನ್ ಮತ್ತು ಇನ್ಸನ್ನು ಮೃಗಗಳಿಗೆ ಉಪಮಿಸಲಾಗಿದೆ. ವಿಶೇಷ ಬುದ್ಧಿ ಮತ್ತು ಆಲೋಚನಾ ಶಕ್ತಿ ಇರುವ ಮನುಷ್ಯರು ಈ ಗುಣಗಳನ್ನು ನಿರುಪಯೋಗಿಸಿ ಭೌತಿಕ ಸುಖಗಳನ್ನು ಮಾತ್ರ ಬಯಸಿ ಮೃಗ ಸಮಾನರಾಗಿ ಜೀವಿಸುವಾಗ ಅವರನ್ನು ಮೃಗಗಳಿಗೆ ಉಪಮಿಸುವುದು ಸರಿಯೇ ಆಗಿದೆ. ಜಿನ್ನುಗಳು ಮನುಷ್ಯರಲ್ಲದೆ ಸೂಕ್ಷ್ಮದೇಹಿಗಳು ಮತ್ತು ಭೌತಿಕಾವಶ್ಯಗಳ ಬಂಧವಿಲ್ಲದವರು ಆಗಿದ್ದರೆ ಆ ಅದ್ಭುತ ಸೃಷ್ಟಿಯನ್ನು ಮೃಗಕ್ಕೆ ಉಪಮಿಸುವುದು ವಿವೇಕಯುತವಲ್ಲ.

ಅಲ್ಲಾಹು ಆದಮರ ಪೀಳಿಗೆಗಳನ್ನು ಹೊರತಂದು ಅವರೊಡನೆ ತಾನು ಅವರ ಪ್ರಭುವಲ್ಲವೇ ಎಂದು ಪ್ರಶ್ನಿಸಿದ ಸಂಗತಿಯನ್ನು ವಿವರಿಸಿದ ಬಳಿಕ ಮೇಲೆ ಉದ್ಧರಿಸಲಾದ ವಚನ ಖುರ್‌ಆನಿನಲ್ಲಿ ಉಲ್ಲೇಖಿಸಲ್ಪಟ್ಟಿದೆ. ಹೀಗೆ ದೇವ ವಿಶ್ವಾಸದ ಒಂದು ಅಂತರ್ಬೋಧ ಮನುಷ್ಯನಿಗೆ ನೀಡಲ್ಪಟ್ಟಿದೆಯಾದರೂ ಅವರಲ್ಲಿ ಕೆಲವರು ಈ ಆತ್ಮಬೋಧಕ್ಕೆ ವಿರುದ್ಧವಾಗಿ ವರ್ತಿಸುತ್ತಾರೆಂಬ ವಿಚಾರ ಪ್ರಸ್ತಾಪಿಸುತ್ತಾ ಜಿನ್ನ್ ಮತ್ತು ಇನ್ಸ್ ವರ್ಗಗಳಿಂದ ಅನೇಕರು ನರಕಕ್ಕೋಸ್ಕರವಾಗಿರುವರೆಂದು ಹೇಳಲಾಗಿದೆ. ಹಾಗಿರುವಾಗ ಈ ಜಿನ್ನ್ ಮತ್ತು ಇನ್ಸ್ ಆದಮರ ಸಂತತಿಗಳಿಗೆ ಸೇರಿದವರು, ಆದರೆ ದೇವಹಿತಕ್ಕೆ ವಿರುದ್ಧವಾಗಿ ವರ್ತಿಸುವವರು ಆಗಿರಲಿಕ್ಕೇ ಸಾಧ್ಯ.

**ಜಿನ್ನ್ – ವಿಶ್ವಾಸಿ ಮತ್ತು ಅವಿಶ್ವಾಸಿ**

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ದೌತ್ಯ ಸರ್ವಜನೀನವೆಂದೂ ಖುರ್‌ಆನಿನಲ್ಲಿ ಜಿನ್ನ್ ಮತ್ತು ಇನ್ಸ್ ಎಂದು ಹೇಳಲ್ಪಟ್ಟವರು ಆ ದೌತ್ಯವನ್ನು ಸ್ವೀಕರಿಸಲು ಬದ್ಧರೆಂದೂ ಎಲ್ಲ ಮುಸ್ಲಿಮರು ಒಪ್ಪುತ್ತಾರೆ. ಹಝ್ರತ್ ಪೈಗಂಬರರು(ಸ) ಇನ್ಸ್‌ಗೆ ಇರುವಂತೆ ಜಿನ್ನಿಗೂ ಪ್ರವಾದಿಯಷ್ಟೆ. ಪೈಗಂಬರರು(ಸ) ಸಕಲ ಮಾನವರಿಗೋಸ್ಕರ ಪ್ರವಾದಿಯೆಂದು ಖುರ್‌ಆನಿನಲ್ಲಿ ಒಂದಕ್ಕಿಂತ ಹೆಚ್ಚು ಕಡೆಗಳಲ್ಲಿ ಹೇಳಲಾಗಿದ್ದರೂ ಜಿನ್ನುಗಳ ಬಳಿಗೆ ಕಳುಹಿಸಲ್ಪಟ್ಟ ಪ್ರವಾದಿಯೆಂದು ಪ್ರತ್ಯೇಕಿಸಿ ಹೇಳಿಲ್ಲ. ಜಿನ್ನ್ ಮನುಷ್ಯರಲ್ಲಿ ಸೇರಿದವರಾದುದರಿಂದಲೇ ಈ ಪ್ರಕಾರ ಹೇಳದಿರಲು ಕಾರಣವೆಂದು ಭಾವಿಸಬೇಕಾಗಿದೆ.

ಮನುಷ್ಯನಿಗಲ್ಲದೆ ಬೇರೊಂದು ಸೃಷ್ಟಿಗೆ ಪ್ರವಾದಿಯಾಗಿರಲಿಕ್ಕೆ ಸಾಧ್ಯವಿಲ್ಲ. "ಅಲ್ಲಾಹು ಒಬ್ಬ ಮನುಷ್ಯನನ್ನೋ ಪ್ರವಾದಿಯಾಗಿ ಕಳುಹಿಸಿದ್ದು?" ಎಂಬ ಶತ್ರುಗಳ ಪ್ರಶ್ನೆಗೆ ಖುರ್‌ಆನ್ ಹೇಳುವ ಉತ್ತರ ಹೀಗಿದೆ:

قُل لَّوْ كَانَ فِي الْأَرْضِ مَلَائِكَةٌ يَمْشُونَ مُطْمَئِنِّينَ لَنَزَّلْنَا عَلَيْهِم مِّنَ
السَّمَاءِ مَلَكًا رَّسُولًا

"ಭೂಮಿಯಲ್ಲಿ ನೆಮ್ಮದಿಯಿಂದ ನಡೆದಾಡುವ ದೇವದೂತರು ನೆಲೆಸಿರುತ್ತಿದ್ದರೆ ನಾವು ಅವರಿಗೆ ಆಕಾಶದಿಂದ ಒಬ್ಬ ದೇವದೂತನನ್ನು ಸಂದೇಶವಾಹಕನಾಗಿ ಕಳುಹಿಸುತ್ತಿದ್ದೆವು." (17:96).

ಈ ವಾಕ್ಯದಿಂದ ಮನುಷ್ಯನು ಸೂಕ್ಷ್ಮ ಸೃಷ್ಟಿಗಳಿಗೆ ಪ್ರವಾದಿಯಾಗುವುದಾಗಲಿ, ಒಂದು ಸೂಕ್ಷ್ಮ ಸೃಷ್ಟಿ ಮನುಷ್ಯರಿಗೆ ರಸೂಲ್ ಆಗಿ ಬರುವುದಾಗಲಿ ಸಲ್ಲದೆಂದು ಮನವರಿಕೆಯಾಗುತ್ತದೆ. ಭೂ ನಿವಾಸಿಗಳು ಮನುಷ್ಯರಾಗಿರುವುದರಿಂದ ಅವರಿಗೆ ಮನುಷ್ಯನಾದ ರಸೂಲನ್ನು ಕಳುಹಿಸಲಾಗಿದೆಯೆಂದೂ ಮಲಕು(ದೇವದೂತರು)ಗಳಾಗಿದ್ದರೆ ಅವರಿಗೆ ಮಲಕನ್ನೇ ಕಳುಹಿಸಲಾಗುತ್ತಿತ್ತೆಂದೂ ಅಲ್ಲಾಹು ಹೇಳುತ್ತಾನೆ. ಪ್ರವಾದಿಯ ಪ್ರಧಾನ ಕರ್ತವ್ಯ ತನ್ನ ಪರಿಪೂರ್ಣವೂ ಶ್ರೇಷ್ಠವೂ ಆದ ಮಾದರಿಗಳನ್ನು ತೋರಿಸಿ ಮನುಷ್ಯರನ್ನು ದೇವಪಥದೆಡೆಗೆ ಆಮಂತ್ರಿಸುವುದಾಗಿದೆ. ಒಟ್ಟಿನಲ್ಲಿ, ಪೈಗಂಬರರ ದೌತ್ಯಕ್ಕೆ ವಿಧೇಯರಾದ ಜಿನ್ನುಗಳು ಮನುಷ್ಯರಲ್ಲದೆ ಬೇರೆ ಸೃಷ್ಟಿಯಾಗಲಿಕ್ಕೆ ಸಾಧ್ಯವಿಲ್ಲ.

**ಜಿನ್ನ್ ದೇವಾರಾಧಕರು**

ಮನುಷ್ಯನ ಸೃಷ್ಟಿಯ ಉದ್ದೇಶದ ಕುರಿತು ಅಲ್ಲಾಹು ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

وَمَا خَلَقْتُ الْجِنَّ وَالْإِنسَ إِلَّا لِيَعْبُدُونِ

"ನನ್ನನ್ನು ಆರಾಧಿಸಲಿಕ್ಕೋಸ್ಕರ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಲಿಲ್ಲ." (51:57).

ಈ ವಾಕ್ಯದಿಂದ ಇನ್ಸ್‌ನಂತೆ ಜಿನ್ನ್ ಸಹ ದೇವಾರಾಧನೆ ಮಾಡಬೇಕಾದವರೆಂದು ತಿಳಿದು ಬರುತ್ತದೆ. ಆದರೆ ಅವರು ಆರಾಧನೆ ಮಾಡಬೇಕಾದುದು ಪವಿತ್ರ ಖುರ್‌ಆನಿನ ಉಪದೇಶ ಪ್ರಕಾರ ಮತ್ತು ಪೈಗಂಬರರ(ಸ) ಮಾದರಿ ಸ್ವೀಕರಿಸಿಕೊಂಡಾಗಿರಬೇಕೆಂಬುದರಲ್ಲಿ ತರ್ಕವಿರಲಾರದು. ಖುರ್‌ಆನಿನ ಎಲ್ಲ ಉಪದೇಶಗಳು, ಪೈಗಂಬರರು ಕಲಿಸಿದ ಮತ್ತು ಜೀವಿಸಿ ತೋರಿಸಿದ ಎಲ್ಲ ಸಂಗತಿಗಳು ಮನುಷ್ಯರಿಗೆಂಬಂತೆ ಜಿನ್ನುಗಳಿಗೂ ಅನ್ವಯಿಸುವುವು. ಆದರೆ, ಇಸ್ಲಾಂ ನಿರ್ದೇಶಿಸುವ ಆಜ್ಞೆಗಳು ಮನುಷ್ಯರಿಗೆ ಸಂಬಂಧಿಸಿದಂತೆಯೇ ಪೈಗಂಬರರು ಉಪದೇಶಿಸಿರುವರು ಮತ್ತು ಆ ಉಪದೇಶ ಪ್ರಕಾರ ವರ್ತಿಸಿದವರು ಮನುಷ್ಯರೇ ಆಗಿದ್ದಾರೆ. ನಮಾಝ್, ಉಪವಾಸ, ಹಜ್ಜ್, ಝಕಾತ್ ಇತ್ಯಾದಿ ಕರ್ಮಗಳಲ್ಲಿ ಮನುಷ್ಯನು ಅನುಷ್ಠಿಸಲು ಬದ್ಧನಾದ ಪ್ರತಿಯೊಂದು ವಿಚಾರ ಸ್ಥೂಲದೇಹಿಗಳಾದ ಮನುಷ್ಯರಿಗಲ್ಲದೆ ಸೂಕ್ಷ್ಮದೇಹಿಗಳಿಗೆ ಮಾಡಲು ಅಸಾಧ್ಯವಾಗಿದೆ. ವಿವಾಹ, ವ್ಯಾಪಾರ, ಕೃಷಿ, ಆಡಳಿತೆ ಮೊದಲಾದವುಗಳ ಬಗ್ಗೆ ಇರುವ ನಿರ್ದೇಶನಗಳು ಸಹ ಸ್ಥೂಲದೇಹಿಗಳಿಗೆ ಮಾತ್ರ ಅನ್ವಯಿಸುವಂಥದ್ದಾಗಿವೆ. ಶರೀರವೇ ಇಲ್ಲದವರಿಗೆ ವಸ್ತ್ರಧಾರಣೆ, ತಿನ್ನುವುದು, ಸ್ನಾನ ಮಾಡುವುದು ಎಂಬಿವುಗಳ ಸಂಬಂಧಿಸಿ ಆಜ್ಞೆಗಳು ಅನ್ವಯವಾಗದು. ವ್ಯಾಪಾರ, ಕೃಷಿ, ಕೈಗಾರಿಕೆ ಮುಂತಾದ ಚಟುವಟಿಕೆ ಅವರಿಗೆ ಮಾಡಲಾಗದು. ಇಂತಹ ಇಸ್ಲಾಮೀ ನಿರ್ದೇಶನಗಳು ಮನುಷ್ಯರಿಗೆ ಮಾತ್ರ ಅನ್ವಯಿಸುವುವು. ಪೈಗಂಬರರು(ಸ) ಐದು ಹೊತ್ತು ನಮಾಝ್ ಮಾಡಿ ಶಿಷ್ಯ ಗಣಕ್ಕೆ ತೋರಿಸಿಕೊಟ್ಟರು. ಆದರೆ ಒಂದು ದಿವಸವಾದರೂ ಪೈಗಂಬರರು ಜಿನ್ನುಗಳೆಂದು ಕರೆಯಲ್ಪಡುವ ಇತರ ಸೃಷ್ಟಿಗಳಿಂದ ಐದು ಹೊತ್ತಿನ ನಮಾಝ್ ಮಾಡಿಸಿದುದಾಗಿ ಸಾಬೀತುಗೊಳಿಸಲು ಯಾರಿಗೂ ಸಾಧ್ಯವಿಲ್ಲ.

ಹಝ್ರತ್ ಪೈಗಂಬರರನ್ನು(ಸ) ಅಂಗೀಕರಿಸಿ ಅವರ ಉಪದೇಶಗಳನ್ನನುಸರಿಸಿ ಜೀವಿಸಿದ ಮನುಷ್ಯರ ವರ್ತನೆಗಳ ಕುರಿತು ಪವಿತ್ರ ಖುರ್‌ಆನ್ ಮತ್ತು ಚರಿತ್ರೆಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಜಿನ್ನುಗಳಾದ ಅನುಯಾಯಿಗಳು ಹೇಗೆಲ್ಲ ವರ್ತಿಸಿದರೆಂದು ಯಾರೂ ಎಲ್ಲಿಯೂ ಉಲ್ಲೇಖಿಸಿ ಕಾಣುವುದಿಲ್ಲ. ಹಝ್ರತ್ ಪೈಗಂಬರರ ಅನುಚರರು ಇಸ್ಲಾಮಿಗೋಸ್ಕರ ಹಲವು ತ್ಯಾಗಗಳನ್ನು ಮಾಡಿ ಹಲವಿಧ ಕಷ್ಟಗಳನ್ನನುಭವಿಸಿದ್ದಾರೆ. ಅವರು ಹಲವು ಯುದ್ಧಗಳಲ್ಲಿ ಭಾಗವಹಿಸಿದ್ದಾರೆ. ಆದರೆ, ಬಯಸುವುದೆಲ್ಲ ಮಾಡಲು, ಉದ್ದೇಶಿಸುವೆಡೆಗಳಲ್ಲೆಲ್ಲ ತಕ್ಷಣ ತಲಪಲು, ಇಚ್ಛಿಸುವ ಯಾರಿಗೂ ಸಹಾಯ ನೀಡಲು ಶಕ್ತರೆಂದು ಹೇಳಲ್ಪಡುವ ಜಿನ್ನುಗಳಾದರೋ, ಪೈಗಂಬರರಿಗೆ ಮತ್ತು ಸಹಚರರಿಗೆ ಸಹಾಯ ನೀಡಲಿಕ್ಕೆ ಆ ಯುದ್ಧಗಳಲ್ಲಿ ಇಣುಕಿ ನೋಡುವುದಾಗಲಿ ಮಾಡಲಿಲ್ಲ. ಜಿನ್ನಿನ ಪಡೆ ಬಂದು ಸಹಾಬರ ಪವಿತ್ರ ಸಂಘಕ್ಕೆ ನೆರವು ನೀಡಿದುದಾಗಿ ಎಲ್ಲಿಯೂ ಕಾಣುವುದಿಲ್ಲ. ಅಲ್ಲಾಹು ಮಲಕುಗಳನ್ನು ಇಳಿಸಿ ಆ ವಿಶ್ವಾಸಿ ಸಂಘಕ್ಕೆ ನೆರವು ನೀಡಿದುದಾಗಿ ಖುರ್‌ಆನ್ ಹೇಳುತ್ತದೆ. ಆದರೆ ನೆರವೀಯಲು ಕರ್ತವ್ಯ ಬದ್ಧರಾದ ಜಿನ್ನ್ ಆ ಸಂದರ್ಭದಲ್ಲಿ ಇಸ್ಲಾಮಿಗೋಸ್ಕರ ಏನೂ ಮಾಡಿದುದಾಗಿ ಹೇಳಲಾಗಿಲ್ಲ. ಇವುಗಳಿಂದೆಲ್ಲ ತಿಳಿದುಬರುವುದೇನೆಂದರೆ ದೇವಾರಾಧನೆಗೂ ಇಸ್ಲಾಂ ಧರ್ಮ ಸ್ವೀಕಾರಕ್ಕೂ ಬದ್ಧರಾದ ಜಿನ್ನ್ ಮನುಷ್ಯರಲ್ಲದ ಸೂಕ್ಷ್ಮದೇಹಿಗಳಾದ ಅನ್ಯ ಸೃಷ್ಟಿಗಳಲ್ಲ. ◆


**(ಭಾಷಾಂತರ: ಮುಹಮ್ಮದ್ ಯೂಸುಫ್)**


**LOVE FOR ALL**
**HATRED FOR NONE**
**LET'S MAKE IT HEAVEN**

# ಪವಿತ್ರ ಖುರ್‌ಆನ್

◆ ಕೆ.ಎಂ. ಉಮರ್ ಮಡಿಕೇರಿ.

ಆಲಿಸಿ ಕೇಳಿರೋ ಗೆಳೆಯರೇ ಆಲಿಸಿ ಕೇಳಿರೋ
ಮುತ್ತು ತುಂಬಿ ತುಳುಕುತಲಿರುವ ಖುರ್‌ಆನ್ ಓದಿರೋ
ಬೆಳಗ್ಗೆ ಓದೋಣ ನಾವು ಬೆಳಗಾಗೋದೋಣ
ಬೆಳಗ್ಗೆ ನಿತ್ಯವು ಪ್ರಾರ್ಥನೆ ಮಾಡಿ ಖುರ್‌ಆನ್ ಓದೋಣ
ಶಾಂತಿಯೂ ದೊರಕುವುದು ನಮಗೆ ಜ್ಞಾನವೂ ದೊರಕುವುದು
ಶಾಂತಿ ಜ್ಞಾನದ ಜೊತೆಗೆ ಉತ್ತಮ ಕಾಂತಿಯೂ ದೊರಕುವುದು
ಪಾವನವಾಗುವುದು ಜೀವನ ಪಾವನವಾಗುವುದು
ಪವಿತ್ರ ಖುರ್‌ಆನ್ ಪಾರಾಯಣದಿ ಪಾವನವಾಗುವುದು
ಕತ್ತಲು ಕವಿದಿತ್ತು ಲೋಕದಿ ಕತ್ತಲು ಕವಿದಿತ್ತು
ಕತ್ತಲು ಕವಿದ ಮಾನವ ಲೋಕಕೆ ಖುರ್‌ಆನ್ ಬೇಕಿತ್ತು
ಕೊಳೆಯೂ ತುಂಬಿತ್ತು ಲೋಕದಿ ಕೊಳಕೂ ತುಂಬಿತ್ತು
ಕೊಳಕು ತುಂಬಿ ತುಳುಕುವ ನೀರಲಿ ತಾವರೆ ಅರಳಿತ್ತು
ಅರೇಬಿಯ ರಾಜ್ಯದಲ್ಲಿ ನಮ್ಮ ಪ್ರವಾದಿ ಜನಿಸಿದರು
ಅರಳಿದ ತಾವರೆ ಮುಹಮ್ಮದ್ ನಬಿಗೆ ಗ್ರಂಥವು ಲಭಿಸಿತು
ಖಡ್ಗವ ಬೀಸುತಲಿ ತನ್ನ ಕತ್ತಿಯ ಬೀಸುತಲಿ
ಕೊಲ್ಲಲು ಮುಹಮ್ಮದ್ ನಬಿಯನು ತನ್ನ ಕತ್ತಿಯ ಬೀಸುತಲಿ
ರೋಷದಿ ನಡೆದಾಗ ಉಮರಾವೇಶದಿ ನಡೆದಾಗ
ರೋಷಾವೇಶವ ತಣಿಸುವ ದೇವನ ಖುರ್‌ಆನ್ ಕಂಡಾಗ
ಖಡ್ಗವು ಜಾರಿತು ಕ್ಷಣದಿ ಉಮರರ ಕೈಯಿಂದ
ಖಡ್ಗವ ತ್ಯಜಿಸಿ ಸ್ನಾನವ ಮುಗಿಸಿ ಖುರ್‌ಆನ್ ಓದಿದರು
ಪಾವನವಾಯಿತು ಅವರ ಪಾಮರ ಜೀವನವು
ಪವಿತ್ರ ಜೀವನ ನಡೆಸುತ ಮುಂದೆ ಖಲೀಫ ಜೀವನವು
ಖುರ್‌ಆನ್ ಓದಿದರೆ ರೋಗ ಶಮನವಾಗುವುದು
ಖುಷಿಯ ಜೊತೆಗೆ ಮನವನು ತಣಿಸಿ ನೆಮ್ಮದಿ ತುಳುಕುವುದು
ಕ್ರೂರತೆಯು ಎಂದೂ ಪಾವನ ಇಸ್ಲಾಂ ದೀನಲ್ಲ
ಖುರ್‌ಆನ್ ಓದಿ ಚಿಂತನೆ ಮಾಡಿ ಅದರಲ್ಲಿದೆಯೆಲ್ಲ
ಖುರ್‌ಆನಿನ ತತ್ವ ಶಾಂತಿಯ ಹರಡುವುದು
ಖುರ್‌ಆನ್ ನಮಗೆ ಕ್ರೂರತೆ ತ್ಯಜಿಸಲು ದಾರಿಯ ತೋರುವುದು
ಉತ್ತಮರಾಗೋಣ ನಾವು ಸಜ್ಜನರಾಗೋಣ
ಉತ್ತಮ ಶಿಷ್ಯರ ಸಾಲನು ಸೇರುತ ಖುರ್‌ಆನ್ ಓದೋಣ
ಅರ್ಥವ ತಿಳಿಯೋಣ ಖುರ್‌ಆನ್ ಅರ್ಥವ ತಿಳಿಯೋಣ
ಅರ್ಥವ ತಿಳಿದು ಸತ್ಯವ ಗಳಿಸಿ ಧನ್ಯರಾಗೋಣ.



# ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರರಾದ ಐದನೇ ಖಲೀಫರಿಂದ ರೋಹಿಂಗ್ಯಾ ಮುಸ್ಲಿಮರ ವಿರುದ್ಧ ಮ್ಯಾನ್‌ಮಾರ್‌ನಲ್ಲಿ ನಡೆಯುತ್ತಿರುವ ಹಿಂಸಾಚಾರದ ಖಂಡನೆ

ಲಂಡನ್, ಸಪ್ಟೆಂಬರ್ 6: ಅಹ್ಮದಿಯಾ ಮುಸ್ಲಿಮ್ ಜಮಾಅತ್, ಮ್ಯಾನ್‌ಮಾರ್‌ನಲ್ಲಿ ರೋಹಿಂಗ್ಯಾ ಮುಸ್ಲಿಮರ ವಿರುದ್ಧ ನಡೆಯುತ್ತಿರುವ ಹಿಂಸಾಚಾರವನ್ನು ಅತ್ಯಂತ ಕಟುವಾಗಿ ಖಂಡಿಸುತ್ತದೆ. ಮ್ಯಾನ್‌ಮಾರ್‌ನಲ್ಲಿ ಅನೇಕ ಮುಸ್ಲಿಮರು ಕೊಲ್ಲಲ್ಪಟ್ಟರೆಂದೂ ಚಿತ್ರಹಿಂಸೆಗಳಿಗೆ ಗುರಿಯಾಗಿರುವರೆಂದೂ ಸಾವಿರಗಟ್ಟಲೆ ಮುಸ್ಲಿಮರು ತಮ್ಮ ಮನೆಗಳಿಂದ ಹೊರದಬ್ಬಲ್ಪಟ್ಟಿರುವರೆಂದೂ ಅವರು ಪಲಾಯನ ಮಾಡಲು ಬಲಾತ್ಕರಿಸಲ್ಪಟ್ಟಿರುವರೆಂದೂ ವರದಿಗಳು ತಿಳಿಸುತ್ತಿವೆ. ಅವರೊಂದಿಗೆ ಹೀಗೆ ವರ್ತಿಸುವುದು ಮಾನವೀಯತೆಗೆ ಅಪಮಾನಕರವಾಗಿದೆ.

ಮ್ಯಾನ್‌ಮಾರಿನ ಮುಸ್ಲಿಮರು ತಮ್ಮ ಮೂಲಭೂತ ಹಕ್ಕುಗಳನ್ನೂ ಸ್ವಾತಂತ್ರಗಳನ್ನೂ ಗಳಿಸಲು ಜಾಗತಿಕ ಸಮುದಾಯ ಅವರಿಗೆ ಸಹಾಯ ಮಾಡಬೇಕೆಂದು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಆಗ್ರಹಪಡಿಸುತ್ತಿದೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರರಾದ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಹೀಗೆ ಹೇಳಿಕೆ ನೀಡಿದ್ದಾರೆ:

"ರೋಹಿಂಗ್ಯಾ ಮುಸ್ಲಿಮರೊಂದಿಗೆ ಮ್ಯಾನ್‌ಮಾರ್‌ನಲ್ಲಿ ಕ್ರೌರ್ಯದಿಂದ ವರ್ತಿಸುತ್ತಿರುವ ಬಗ್ಗೆ ತಿಳಿದು ಎಲ್ಲ ಅಹ್ಮದೀ ಮುಸ್ಲಿಮರು ಅತ್ಯಂತ ಶೋಕಭರಿತರಾಗಿದ್ದಾರೆ.ಈ ಎಲ್ಲ ಹಿಂಸಾಚಾರಗಳು ತಕ್ಷಣ ಕೊನೆಗೊಳ್ಳಲಿ ಎಂದು ನಾವೆಲ್ಲರೂ ಪ್ರಾರ್ಥಿಸುತ್ತೇವೆ.

ನಿರ್ಭೀತಿಯಿಂದ ರೋಹಿಂಗ್ಯಾ ಮುಸ್ಲಿಮರನ್ನು ಹಿಂಸಾಚಾರಗಳಿಗೆ ಗುರಿಪಡಿಸುತ್ತಿರುವುದರ ಮೂಲ ಕಾರಣ ಮುಸ್ಲಿಮ್ ಲೋಕದಲ್ಲಿರುವ ಒಡಕು ಮತ್ತು ಭಿನ್ನಮತವಾಗಿದೆ. ಮುಸ್ಲಿಮ್ ದೇಶಗಳ ಮತ್ತು ಪಂಗಡಗಳ ಮಧ್ಯೆ ಐಕ್ಯತೆ ಇರುತ್ತಿದ್ದರೆ ಇಂತಹ ದಾರುಣ ಘಟನೆಗಳು ಎಂದೂ ಸಂಭವಿಸುತ್ತಿರಲಿಲ್ಲ.

ಮ್ಯಾನ್‌ಮಾರ್‌ನ ಮುಸ್ಲಿಮರಿಗೆ ನೆರವು ನೀಡಲು ಅಂತರ್‍ರಾಷ್ಟ್ರೀಯ ಸಮುದಾಯಗಳು ಒಗ್ಗೂಡಬೇಕೆಂದೂ ಮುಸ್ಲಿಮ್ ರಾಷ್ಟ್ರಗಳು ಈ ಕಾರ್ಯದಲ್ಲಿ ಮುಂಚೂಣಿಯಲ್ಲಿರಬೇಕೆಂದೂ ನಾನು ಆಶಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ.

ಮ್ಯಾನ್‌ಮಾರಿನ ಮುಸ್ಲಿಮರ ವಿರುದ್ಧವಾಗಿ ನಡೆಯುವ ಹಿಂಸಾಚಾರಗಳು ಹಾಗೂ ಲೋಕದಲ್ಲಿ ಧಾರ್ಮಿಕ ಹಕ್ಕುಗಳು ನಿರಾಕರಿಸಲ್ಪಟ್ಟ ಎಲ್ಲ ಜನರ ವಿರುದ್ಧ ನಡೆಯುವ ಹಿಂಸಾಚಾರಗಳು ಕೊನೆಗೊಳ್ಳಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಎಲ್ಲ ಜನರು ತಮ್ಮ ನಂಬಿಕೆಗಳನ್ನು ಹೊಂದಲು ಮತ್ತು ಅನುಷ್ಠಾನಕ್ಕೆ ತರಲು ನಿರ್ಭೀತರಾಗಿರಬೇಕೆಂದೂ ಎಲ್ಲ ಜನರಿಗೆ ತಮ್ಮ ದೇಶಗಳ ನಿಯಮಗಳ ಪ್ರಕಾರ ಸಮಾನ ಹಕ್ಕುಗಳಿರಬೇಕೆಂದೂ ನಾವು ನಂಬುತ್ತೇವೆ."

# ಅಹ್ಮದಿಯಾ ಜಮಾಅತಿನ ಮೇಲೆ ಈ ವರ್ಷ ಉಂಟಾದ ಅಲ್ಲಾಹನ ಅನುಗ್ರಹಗಳು

- ಈ ವರ್ಷ ಇನ್ನೂ ಒಂದು ಭಾಷೆಯಲ್ಲಿ ಪವಿತ್ರ ಖುರ್‌ಆನ್ ಭಾಷಾಂತರ ಪ್ರಕಟಿಸುವುದರೊಂದಿಗೆ, ಒಟ್ಟು 75 ಭಾಷೆಗಳಲ್ಲಿ ಪವಿತ್ರ ಖುರ್‌ಆನ್‌ನ ಭಾಷಾಂತರ ಪೂರ್ಣಗೊಂಡಿದೆ.
- ಒಂದು ಹೊಸ ರಾಷ್ಟ್ರವಾದ ಹೋಂಡುರಾಸ್‌ನಲ್ಲಿ ಜಮಾಅತ್ ಸ್ಥಾಪಿತವಾಯಿತು. ಒಟ್ಟು 210 ರಾಷ್ಟ್ರಗಳಲ್ಲಿ ಅಹ್ಮದಿಯಾ ಜಮಾಅತಿನ ಧ್ವಜ ಹಾರಿಸುವಂತಾಯಿತು– ಅಲ್‌ಹಮ್ದುಲಿಲ್ಲಾಹ್.
- 155 ಹೊಸ ಮಸೀದಿಗಳ ನಿರ್ಮಾಣ. 262 ಮಸೀದಿಗಳು ನಮಗೆ ಇತರರಿಂದ ಲಭಿಸಿತು. ಹಾಗೆ ಈ ವರ್ಷ ಒಟ್ಟು 417 ಮಸೀದಿಗಳು ಸ್ಥಾಪಿತವಾದವು.
- 885 ಹೊಸ ಸ್ಥಳಗಳಲ್ಲಿ ಜಮಾಅತ್ ರಚನೆಯಾಯಿತು.
- 2067 ಮಿಷನ್ ಹೌಸ್‌ಗಳು ಸ್ಥಾಪಿತವಾದವು.
- 421 ಗ್ರಂಥಾಲಯಗಳು ಸ್ಥಾಪಿತವಾದವು.
- ಕರಪತ್ರ ವಿತರಣೆ ಮೂಲಕ ಲೋಕದಾದ್ಯಂತ ಒಂದೂ ಮುಕ್ಕಾಲು ಕೋಟಿ ಜನರಿಗೆ ಅಹ್ಮದಿಯಾ ಮುಸ್ಲಿಂ ಜಮಾಅತಿನ ಸಂದೇಶ ತಲಪಿತು. 96 ರಾಷ್ಟ್ರಗಳಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷ ಫೋಲ್ಡರ್‌ಗಳ ಮುಖಾಂತರ ಎರಡುವರೆ ಕೋಟಿ ಇಪ್ಪತ್ತು ಲಕ್ಷ ಜನರಿಗೆ ಜಮಾಅತಿನ ಸಂದೇಶ ತಲಪಿತು.
- 9471 ಎಕ್ಸಿಬಿಷನ್ ಮುಖಾಂತರ 16 ಲಕ್ಷ ಮೂವತ್ತು ಸಾವಿರ ಜನರಿಗೂ, ಬುಕ್‌ಸ್ಟಾಲ್ ಮುಖಾಂತರ 18 ಲಕ್ಷದ ಎಪ್ಪತ್ತು ಸಾವಿರ ಜನರಿಗೂ ಸಂದೇಶ ತಲಪಿತು.
- ರಿವ್ಯೂ ಆಫ್ ರಿಲೀಜನ್ಸ್ ಮಾಸಿಕ ಮುಖಾಂತರ ಮೂವತ್ತು ಲಕ್ಷ ಜನರಿಗೆ ಜಮಾಅತಿನ ಸಂದೇಶ ತಲಪಿತು.
- ಲೋಕದಾದ್ಯಂತ 4034 ವೃತ್ತಪತ್ರಿಕೆಗಳಲ್ಲಿ ಜಮಾಅತಿನ ಕುರಿತು 3188 ಲೇಖನಗಳು ಪ್ರಕಟವಾದವು. ಅದರಿಂದಾಗಿ ಸುಮಾರು 45 ಕೋಟಿ 70 ಲಕ್ಷ ಜನರಿಗೆ ಜಮಾಅತಿನ ಕುರಿತು ಪರಿಚಯಿಸಲಾಯಿತು. ಹಾಗೆಯೇ ಅವರಿಗೆ ಜಮಾಅತಿನ ಸಂದೇಶ ತಲಪುವಂತಾಯಿತು.
- ಕೋಟಿಗಟ್ಟಲೆ ಜನರು ಜಮಾಅತಿನ ವೆಬ್‌ಸೈಟನ್ನು ಸಂದರ್ಶಿಸುವುದರಿಂದ ಅಹ್ಮದಿಯಾ ಅಥವಾ ಯಥಾರ್ಥ ಇಸ್ಲಾಮಿನ ಪರಿಚಯವಾಯಿತು. ಅದೂ ಅಲ್ಲದೆ 47 ಭಾಷೆಗಳಲ್ಲಿ ಖುರ್‌ಆನ್ ಭಾಷಾಂತರ ಜನರ ಪ್ರಯೋಜನಕ್ಕಾಗಿ ವೆಬ್‌ಸೈಟಲ್ಲಿ ಲಭ್ಯವಿದೆ. ಅಲ್ ಇಸ್ಲಾಂ (**alislam.org**) ಸೈಟಿನಲ್ಲಿ ಹೊಸದಾಗಿ 100 ಪುಸ್ತಕಗಳು ವರ್ಧಿಸಲ್ಪಟ್ಟಿವೆ.
- ಲೋಕದಾದ್ಯಂತ 21 ರೇಡಿಯೋ ಸ್ಟೇಷನ್ ಮೂಲಕ 77 ರಾಷ್ಟ್ರಗಳಲ್ಲಿ ಜಮಾಅತಿನ ಸಂದೇಶ ಮುಟ್ಟಿಸಲಾಯಿತು. ಎಂ.ಟಿ.ಎ. ಹೊರತಾಗಿ 76 ರಾಷ್ಟ್ರಗಳಲ್ಲಿ ಟಿ.ವಿ. ಚ್ಯಾನಲ್‌ಗಳಲ್ಲಿ ಜಮಾಅತಿನ 3658 ಪ್ರೋಗ್ರಾಮ್ ಬಿತ್ತರಿಸಲಾಯಿತು. ಆ ರೀತಿಯಲ್ಲಿ ಸುಮಾರು 45 ಕೋಟಿ 58 ಲಕ್ಷ ಜನರಿಗೆ ಜಮಾಅತಿನ ಸಂದೇಶ ತಲಪಿತು.
- ಆಫ್ರಿಕಾದ 9 ರಾಷ್ಟ್ರಗಳಲ್ಲಿ "ಎಂ.ಟಿ.ಎ. ಆಫ್ರಿಕಾ" ಕಾರ್ಯ ಆರಂಭಿಸಿತು. ಆಫ್ರಿಕಾದ ವಿವಿಧ ರಾಜ್ಯಗಳಲ್ಲಿ ಕೇಬಲ್ ಸಿಸ್ಟಮ್ ಮೂಲಕ ಎಂ.ಟಿ.ಎ ವೀಕ್ಷಿಸಲ್ಪಡುತ್ತದೆ.
- ಎಂ.ಟಿ.ಎ. ಸ್ಥಾಪಿತವಾಗಿ 25 ವರ್ಷಗಳು ಪೂರ್ತಿಯಾಯಿತು.
- ಇಂಟರ್‌ನೆಟ್ ಮುಖಾಂತರ ಎಂ.ಟಿ.ಎ ಕಾಣುವವರ ಸಂಖ್ಯೆ 5 ಲಕ್ಷಕ್ಕಿಂತ ಹೆಚ್ಚಾಗಿದೆ.
- ಇಸ್ಲಾಮಿನ ಸೇವೆಗೋಸ್ಕರ ವಕ್ಫೆ ನೌ ಮಕ್ಕಳ ಸಂಖ್ಯೆಯು 63077 ಆಗಿದೆ. ಅದರಲ್ಲಿ 37973 ಗಂಡು ಹಾಗು 25104 ಹೆಣ್ಣು ಮಕ್ಕಳಾಗಿದ್ದಾರೆ.
- ಸೃಷ್ಟಿ ಸೇವೆಗೋಸ್ಕರ ಲೋಕದಾದ್ಯಂತ 714 ಶಾಲೆಗಳು, 37 ಆಸ್ಪತ್ರೆಗಳು, 5 ಹೋಮಿಯೋ ಕ್ಲಿನಿಕ್‌ಗಳು ಕಾರ್ಯಾಆರಂಭಿಸಿವೆ.
- 49 ರಾಷ್ಟ್ರಗಳಲ್ಲಿ ಹ್ಯೂಮಾನಿಟಿ ಫಸ್ಟ್, ಸೃಷ್ಟಿ ಸೇವೆಗೋಸ್ಕರ ಕಾರ್ಯ ನಿರತವಾಗಿದೆ.
- ಈ ವರ್ಷ ಒಟ್ಟು 6,09,000 ಜನರು ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಬೈಅತ್ ಮಾಡಿ ಪ್ರವೇಶಿಸಿದರು.

(ಯು.ಕೆ. ಜಲ್ಸಾ ಸಾಲಾನಾದ ದ್ವಿತೀಯ ದಿನ ಹಝ್ರತ್ ಖಲೀಫರು ಮಾಡಿದ ಭಾಷಣದಿಂದ.
ಭಾಷಾಂತರ: ಮುಹಮ್ಮದ್ ರಫೀಕ್, ಮಂಜೇಶ್ವರ)

# ಪ್ರಥಮ ವಾರ್ಷಿಕ ಇಜ್ತಿಮಾ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಅತ್ಫಾಲುಲ್ ಅಹ್ಮದಿಯಾ ಜಿಲ್ಲಾ ಘಟಕ ಬೆಂಗಳೂರು

**ಬೆಂಗಳೂರು:** ದಿನಾಂಕ 19,20 ಆಗಸ್ಟ್ 2017ರಂದು ಬೆಂಗಳೂರು ಜಿಲ್ಲಾ ಘಟಕ ಪ್ರಥಮ ವಾರ್ಷಿಕ ಇಜ್ತಿಮಾ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮತ್ತು ಅತ್ಫಾಲುಲ್ ಅಹ್ಮದಿಯಾ ವಿಜೃಂಭಣೆಯಿಂದ ಜರಗಿತು.

ಖುದ್ದಾಮುಲ್ ಅಹ್ಮದಿಯಾ ಬೆಂಗಳೂರು ಜಿಲ್ಲಾ ಘಟಕದಲ್ಲಿ, ಮಂಗಳೂರು, ಮಡಿಕೇರಿ, ಗೋಣಿಕೊಪ್ಪ, ಹಾಗೂ ಜಕ್ಕೂರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಒಳಗೊಂಡಿದೆ.

19 ಆಗಸ್ಟ್ 2017 ಪ್ರಥಮ ದಿನದ ಇಜ್ತಿಮಾ ಉದ್ಘಾಟನಾ ಸಮಾರಂಭವು ಜ। ಮುಸ್ಸವಿರ್ ಅಹ್ಮದ್ ದಂಡೋತಿ ಸಾಹೇಬ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ  ದಕ್ಷಿಣ ಭಾರತದ ಅಧ್ಯಕ್ಷರು – ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮೌಲವಿ ಜಮೀಲ್ ಅಹ್ಮದ್ ಸಾಹೇಬ್ ಖುರ್‌ಆನ್ ಪಾರಾಯಣಗೈದು ಅದರ ಉರ್ದು ತರ್ಜಮೆಯನ್ನು ಓದಿದರು.ತರುವಾಯ ಜ। ಜೆ.ಎಂ. ಶರೀಫ್ ಸಾಹೇಬ್ ಮಡಿಕೇರಿ ಕನ್ನಡ ಅನುವಾದವನ್ನು ಓದಿದರು.

ಅಧ್ಯಕ್ಷರಾದ ಜ। ಮುಸ್ಸವಿರ್ ಅಹ್ಮದ್ ಸಾಹೇಬ್ "ಖುದ್ದಾಮರ ಅಹದ್" ಹಾಗೂ "ಅತ್ಫಾಲರ ಅಹದ್" ಬೋಧಿಸಿದರು. ತರುವಾಯ ಜ। ಹಾಫಿಜ಼್ ಮೌಲವಿ ರಫೀಖುಝ್ಝಮಾಂ ಕಾರ್ಯದರ್ಶಿ ಮಜ್ಲಿಸ್ ಜಿಲ್ಲಾ ಘಟಕ 2016–2017ರ ವಾರ್ಷಿಕ ವರದಿಯನ್ನು ಸಭೆಯ ಮುಂದಿಟ್ಟರು. ನಂತರ ವಿವಿಧ ಮಜ್ಲಿಸ್‌ಗಳ ಕಾರ್ಯ ಚಟುವಟಿಕೆ ಆಧಾರಿತ "ಪ್ರಾಜೆಕ್ಟ್ ಶೋ" ಪ್ರದರ್ಶಿಸಲ್ಪಟ್ಟಿತು.ತರುವಾಯ ಜ। ಅಶ್ರಫ್ ಖಾನ್ ಸಾಹೇಬ್ ಖಾಯಿದ್ ಸರ್ವರಿಗೆ ಸ್ವಾಗತ ಕೋರಿದರು. ನಂತರ ಜ। ಮುಸ್ಸವಿರ್ ಅಹ್ಮದ್ ಅಧ್ಯಕ್ಷರು ಸುದೀರ್ಘವಾಗಿ ಮಜ್ಲಿಸಿನ ಧ್ಯೇಯ ಆದರ್ಶಗಳ ಕುರಿತು ಮಾತನಾಡಿದರು.ಜ। ಮುಸ್ಸದಿಖ್ ಅಹ್ಮದ್ ಸಾಹೇಬ್ ಅಮೀರ್ ಜಮಾಅತ್ ಬೆಂಗಳೂರು ಸಹ ಸಂಕ್ಷಿಪ್ತವಾಗಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಅಧ್ಯಕ್ಷರ ಪ್ರಾರ್ಥನೆಯೊಂದಿಗೆ ಈ ಉದ್ಘಾಟನಾ ಸಮಾರಂಭವು ಮುಕ್ತಾಯಗೊಂಡಿತು. ನಂತರ ದಿನವಿಡೀ ಅತ್ಫಾಲುಲ್ ಅಹ್ಮದಿಯಾ ಎ,ಬಿ,ಸಿ ಗ್ರೂಪ್ ಹಾಗೂ ಖುದ್ದಾಮುಲ್ ಅಹ್ಮದಿಯಾದ ಶೈಕ್ಷಣಿಕ ಸ್ಪರ್ಧೆಗಳು ನಡೆದವು.

20 ಅಗಸ್ಟ್ 2017 ಎರಡನೆಯ ದಿವಸವು "ತಹಜ್ಜುದ್ ನಮಾಝ್", ಫಜ್ರ್ ನಮಾಝ್, ದರ್ಸ್ ಹಾಗೂ ಸಾಮೂಹಿಕ ಖುರ್‌ಆನ್ ಪಾರಾಯಣ ಚಟುವಟಿಕೆಗಳೊಂದಿಗೆ ಪ್ರಾರಂಭಗೊಂಡಿತು. ಚಹಾ ಲಘು ಉಪಹಾರದ ನಂತರ ಬೆಂಗಳೂರು ವಿಲ್ಸನ್ ಗಾರ್ಡನ್ ಹೊಂಬೆಗೌಡ ಮೈದಾನದಲ್ಲಿ ಖುದ್ದಾಮುಲ್ ಅಹ್ಮದಿಯಾ ಮತ್ತು ಅತ್ಫಾಲುಲ್ ಅಹ್ಮದಿಯಾ ವಿಭಾಗಗಳ ಅತ್ಯಂತ ಉತ್ಸಾಹಭರಿತ ವಾತಾವರಣದಲ್ಲಿ ದೈಹಿಕ ಸ್ಪರ್ಧೆಗಳು ನಡೆದುವು.

ಸಂಜೆ 5 ಗಂಟೆಗೆ ಸಮಾರೋಪ ಕಾರ್ಯಕ್ರಮ ಆರಂಭಗೊಂಡಿತು.ಜ। ಮುಸದ್ದಿಖ್ ಅಹ್ಮದ್ ಸಾಹೇಬ್ ಅಮೀರ್ ಜಮಾಅತ್ ಬೆಂಗಳೂರು ಅಧ್ಯಕ್ಷತೆ ವಹಿಸಿದ್ದರು. ಅತಾವುಲ್–ಹಾದಿ ಸಾಹೇಬ್ ಖುರ್‌ಆನ್ ಪಾರಾಯಣ ಮಾಡಿ ಉರ್ದುವಿನಲ್ಲಿ ಅದರ ಅನುವಾದ ಓದಿದರು.ಜ। ಅಬ್ದುಸ್ಸಲಾಂ ಸಾಹೇಬ್ ಖಾಯಿದ್ ಮಜ್ಲಿಸ್ ಮಂಗಳೂರು ಅದರ ಕನ್ನಡ ಅನುವಾದವನ್ನು ಓದಿದರು. ತರುವಾಯ ಜ। ಅಶ್ರಫ್ ಖಾನ್ ಸಾಹೇಬ್ ಖಾಯಿದ್ ಮಜ್ಲಿಸ್ "ಖುದ್ದಾಮರ ಅಹದ್" ಹಾಗೂ "ಅತ್ಫಾಲರ ಅಹದ್" ಬೋಧಿಸಿದರು. ಜ। ಫೈಝುಲ್ ಅಹ್ಮದ್ ಸಾಹೇಬ್ ಕವನವನ್ನೋದಿದರು. ನಂತರ ಮೌಲವಿ ಮೀರ್ ಅಬ್ದುಲ್ ಹಮೀದ್ ಸಾಹೇಬ್ ಭಾಷಣ ಮಾಡಿದರು. ಬಳಿಕ ಮಡಿಕೇರಿಯ ಅತ್ಫಾಲ್ ಸಾಮೂಹಿಕವಾಗಿ ಗಾಯನ ಹಾಡಿದರು.ತರುವಾಯ ಅಧ್ಯಕ್ಷರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಖಲೀಫರ ಅನುಸರಣೆ ಕುರಿತು ಮಾತನಾಡಿದರು. ಶೈಕ್ಷಣಿಕ ಹಾಗೂ ದೈಹಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳಿಂದ ಪುರಸ್ಕರಿಸಲಾಯಿತು.ಖಾಯಿದ್ ಮಜ್ಲಿಸ್ ಜ। ಅಶ್ರಫ್ ಖಾನ್ ಸಾಹೇಬರು ಧನ್ಯವಾದ ಅರ್ಪಣೆ ಮಾಡಿದರು. ಕೊನೆಗೆ ಅಧ್ಯಕ್ಷರ "ದುಆ"ದೊಂದಿಗೆ ಅಲ್ಲಾಹನ ಅಪಾರವಾದ ಅನುಗ್ರಹದಿಂದ ಈ ಎರಡು ದಿವಸಗಳ ಇಜ್ತಿಮಾವು ಸುಸೂತ್ರವಾಗಿ ನಡೆದು ಶಾಂತ ರೀತಿಯಲ್ಲಿ ಮುಕ್ತಾಯಗೊಂಡಿತು.

ಅಲ್‌ಹಮ್ದುಲಿಲ್ಲಾಹ್.

**(ವರದಿ: ಮುಹಮ್ಮದ್ ಇಸ್ಮಾಈಲ್, ಬೆಂಗಳೂರು)**

## ವಾರ್ಷಿಕ ಪ್ರಾದೇಶಿಕ ಇಜ್ತಿಮಾ ಮಜ್ಲಿಸ್ ಅನ್ಸಾರುಲ್ಲಾಹ್ ಬೆಂಗಳೂರು

**ಬೆಂಗಳೂರು:** ದಿನಾಂಕ 15 ಆಗಸ್ಟ್ 2017ರಂದು ಮುಂಜಾನೆ 10 ಗಂಟೆಗೆ ಸ್ವಾತಂತ್ರ್ಯ ದಿನವಾದ್ದರಿಂದ ಮೌಲವಿ ಮೀರ್ ಅಬ್ದುಲ್ ಹಮೀದ್ ಸಾಹೇಬರು ಧ್ವಜಾರೋಹಣ ಮಾಡಿದ ನಂತರ, ವಿಲ್ಸನ್‌ಗಾರ್ಡನ್ ಅಹ್ಮದಿಯಾ ಮಸೀದಿಯಲ್ಲಿ ಮಜ್ಲಿಸ್ ಅನ್ಸಾರುಲ್ಲಾಹ್ ವಾರ್ಷಿಕ ಇಜ್ತಿಮಾದ ಉದ್ಘಾಟನಾ ಸಮಾರಂಭ ಜರಗಿತು. ಜಮಾಅತ್ ಅಧ್ಯಕ್ಷ ಜನಾಬ್ ಮುಸದ್ದಿಖ್ ಸಾಹೇಬರು ಅಧ್ಯಕ್ಷತೆ ವಹಿಸಿದ್ದರು. ಜನಾಬ್ ಕಮಾಲುದ್ದೀನ್ ಸಾಹೇಬರ ಖುರ್‌ಆನ್ ಪಾರಾಯಣದೊಂದಿಗೆ ಇಜ್ತಿಮಾ ಪ್ರಾರಂಭಗೊಂಡಿತು. ತರುವಾಯ ಸಯ್ಯದ್ ಶಾರಿಕ್ ಮಜೀದ್ ಸಾಹಿಬ್, ಝಈಮ್ ಮಜ್ಲಿಸ್ ಅನ್ಸಾರುಲ್ಲಾಹ್ ಅಹದ್ (ಪ್ರತಿಜ್ಞೆ) ಹೇಳಿಕೊಟ್ಟರು.ಜನಾಬ್ ಆಫ್ತಾಬ್ ಅಹ್ಮದ್ ಸಾಹೇಬರು ಕವನ ಹಾಡಿದರು. ಕಾರ್ಯದರ್ಶಿ ಜನಾಬ್ ಮುಹಮ್ಮದ್ ಇಸ್ಮಾಯಿಲ್ ಸಾಹೇಬರು ವಾರ್ಷಿಕ ವರದಿಯನ್ನು ವಾಚಿಸಿದರು.ಸಯ್ಯದ್ ಶಾರಿಕ್ ಮಜೀದ್ ಸಾಹೇಬರು ಉದ್ಘಾಟನಾ ಭಾಷಣ ಮಾಡಿದರು.ಜನಾಬ್ ಮುಸದ್ದಿಖ್ ಸಾಹೇಬರ ಅಧ್ಯಕ್ಷ ಭಾಷಣ ಹಾಗೂ ದುಆದೊಂದಿಗೆ ಸಭೆ ಮುಕ್ತಾಯಗೊಂಡಿತು.

ಸಾಯಂಕಾಲ ಚಹಾ ವಿರಾಮದ ನಂತರ ಅನ್ಸಾರ್ ಸಹೋದರರ ಶೈಕ್ಷಣಿಕ ಹಾಗೂ ದೈಹಿಕ ಸ್ಪರ್ಧೆಗಳು ನಡೆದುವು.ಸಾಯಂಕಾಲ 4 ಗಂಟೆಗೆ ಸಮಾರೋಪ ಸಮಾರಂಭವು ಸಯ್ಯದ್ ಶಾರಿಕ್ ಮಜೀದ್ ಝಈಮ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಕಮಾಲುದ್ದೀನ್ ಸಾಹೇಬ್ ಖುರ್‌ಆನ್ ಪಾರಾಯಣ ಮಾಡಿದರು. ಜನಾಬ್ ಬರ್‌ಕಾತ್ ಅಹ್ಮದ್ ಸಲೀಮ್ ಸಾಹೇಬ್ ಕವನ ಪಠಿಸಿದರು. ಮೌಲವಿ ಮೀರ್ ಅಬ್ದುಲ್ ಹಮೀದ್ ಸಾಹೇಬ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ನಂತರ ಶೈಕ್ಷಣಿಕ ಹಾಗೂ ದೈಹಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಿದರು.ಜನಾಬ್ ಸಯ್ಯದ್ ಶಾರಿಕ್ ಮಜೀದ್ ಸಾಹೇಬ್ ಝಈಮ್ ಮಜ್ಲಿಸ್ ಅನ್ಸಾರುಲ್ಲಾಹ್ ಅಧ್ಯಕ್ಷ ಭಾಷಣದಲ್ಲಿ ಸರ್ವರಿಗೂ ಕೃತಜ್ಞತೆ ಸಲ್ಲಿಸಿದರು ಮತ್ತು ದುಆದೊಂದಿಗೆ ಅಲ್ಲಾಹನ ಅಪಾರವಾದ ಅನುಗ್ರಹಗಳಿಂದ ಈ ಏಕ ದಿವಸದ ಇಜ್ತಿಮಾ ಉತ್ತಮ ರೀತಿಯಲ್ಲಿ ಮುಕ್ತಾಯಗೊಂಡಿತು. ಅಲ್‌ಹಮ್ದುಲಿಲ್ಲಾಹ್.

**(ವರದಿ: ಮುಹಮ್ಮದ್ ಇಸ್ಮಾಈಲ್, ಬೆಂಗಳೂರು)**

---

## ಅಹ್ಮದಿಯಾ ಪುಸ್ತಕ ಮಳಿಗೆ

**ಮಂಗಳೂರು:** ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಗ್ರಾಹಕರ ಮೇಳದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಪುಸ್ತಕ ಮಳಿಗೆಯನ್ನು ಜಮಾಅತ್ ಅಧ್ಯಕ್ಷ ಮುಹಮ್ಮದ್ ಯೂಸುಫ್ ಸಾಹಿಬ್ 22–9–2017 ರಂದು ಸಂಜೆ ದುಆ ಮಾಡಿ ಉದ್ಘಾಟಿಸಿದರು. ಜಮಾಅತ್ ಉಪಾಧ್ಯಕ್ಷ ಬಿ.ಎಸ್. ಅಬ್ದುರ್ರಹೀಂ ಸಾಹಿಬ್, ಮೌಲವಿ ಆಸಿಫ್ ಅಹ್ಮದ್ ಖಾದಿಂ ಸಾಹಿಬ್, ಮತ್ತಿತರರು ಉಪಸ್ಥಿತರಿದ್ದರು.

ಈ ಮಳಿಗೆಯಲ್ಲಿ ಕನ್ನಡ, ಹಿಂದಿ, ಉರ್ದು, ಇಂಗ್ಲಿಷ್, ಮಲಯಾಳಂ ಭಾಷೆಗಳಲ್ಲಿ ಖುರ್‌ಆನ್ ಭಾಷಾಂತರ ಮತ್ತು ಇತರ ಪುಸ್ತಕಗಳು ಮಾರಾಟವಾಗಿವೆ. ಸಾವಿರಾರು ಜನರಿಗೆ ಯಥಾರ್ಥ ಇಸ್ಲಾಮಿನ ಸಂದೇಶವನ್ನು ತಲಪಿಸಲಾಗಿದೆ. ಈ ಮೇಳ ನವೆಂಬರ್ 5ರ ತನಕ ನಡೆಯುತ್ತಿತ್ತು.


---

**LOVE FOR HONESTY AND HATRED FOR DISHONESTY**

**ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ**

**ನಿಧನ ವಾರ್ತೆಗಳು**

## ನೂರುಲ್ ಅಮೀನ್ ಸಾಹಿಬ್



ಅಹ್ಮದಿಯಾ ಜಮಾಅತ್ ಕೊಯಂಬತ್ತೂರ್ ಅಮೀರ್ ಜನಾಬ್ ನೂರುಲ್ ಅಮೀನ್ ಸಾಹಿಬ್ 19–6–2017ರಂದು ತನ್ನ 66ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

1978ರಲ್ಲಿ ಕೇರಳದಿಂದ ಅಹ್ಮದಿಯಾ ಜಮಾಅತಿನ ಕುರಿತು ಅರಿತ ಅವರು ಬೈಅತ್ ಮಾಡಿದರು. 1982ರಿಂದ 2017ರ ವರೆಗೆ 35 ವರ್ಷ ಕಾಲ ಕೊಯಂಬತ್ತೂರ್ ಜಮಾಅತಿನ ಪ್ರೆಸಿಡೆಂಟ್ ಮತ್ತು ಅಮೀರ್ ಆಗಿ ಅವರು ಸೇವೆ ಸಲ್ಲಿಸಿದರು. 1982ರ ವರೆಗೆ ಅವರ ಭವನದಲ್ಲಿ ಜುಮುಅ ನಮಾಝ್ ಮತ್ತು ಇತರ ಕಾರ್ಯಕ್ರಮಗಳು ನಡೆಸಲ್ಪಡುತ್ತಿದ್ದವು.

ಅತ್ಯಂತ ಉದಾರಮತಿ ಮತ್ತು ಸೌಮ್ಯ ಸ್ವಭಾವಿಯಾದ ನೂರುಲ್ ಅಮೀನ್ ಸಾಹಿಬ್ ಹೃದ್ಯನಾದ ಅತಿಥಿ ಸತ್ಕಾರ ಪ್ರಿಯನೂ ಆಗಿದ್ದರು. ಅಹ್ಮದಿಯಾ ವಿರೋಧಿಗಳೊಂದಿಗೆ 72 ತಾಸುಗಳ ಕಾಲ ನಡೆದ 1994ರ ಮುನಾಝರ (ಸಂವಾದ)ಕ್ಕೆ ನೇತೃತ್ವ ನೀಡಿದ್ದು ನೂರುಲ್ ಅಮೀನ್ ಸಾಹಿಬರಾಗಿದ್ದರು. ಕೊಯಂಬತ್ತೂರಿಗೆ ಸಮೀಪದ ತಿರುಪ್ಪೂರ್, ಸುಲೋರ್ ಜಮಾಅತ್ ರೂಪೀಕರಣಕ್ಕೂ ಜಮಾಅತಿನ ದೊಡ್ಡ ಪ್ರಗತಿಗೂ ಈ ಸಂವಾದ ಹೇತುವಾಯಿತು.

ಅವರಿಗೆ ಪತ್ನಿ, ಮೂವರು ಪುತ್ರರು ಮತ್ತು ಓರ್ವ ಪುತ್ರಿ ಇದ್ದಾರೆ. ಮೃತರಿಗೆ ಅಲ್ಲಾಹು ಜನ್ನತನ್ನೂ ಮಗ್ಫಿರತನ್ನೂ ನೀಡಿ ಅನುಗ್ರಹಿಸಲಿ. ಅವರ ವಿಯೋಗದಿಂದ ಕುಟುಂಬಕ್ಕೂ ಜಮಾಅತಿಗೂ ಉಂಟಾದ ನಷ್ಟವನ್ನು ಅಲ್ಲಾಹನು ಪರಿಹರಿಸಲಿ.

**– ಮೌಲವಿ ಮುಹಮ್ಮದ್ ಉಮರ್,** ಕೋಝಿಕ್ಕೋಡ್.

## ಪಿ.ಎ. ಮುಹಮ್ಮದ್ ಶರೀಫ್ ಸಾಹಿಬ್



ಜನಾಬ್ ಪಿ.ಎ. ಮುಹಮ್ಮದ್ ಶರೀಫ್ ಸಾಹೇಬರು 66ನೇ ವಯಸ್ಸಿನಲ್ಲಿ 2017 ಜುಲೈ ದಿನಾಂಕ 28ರಂದು ಮಡಿಕೇರಿಯಲ್ಲಿ ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾಇಲೈಹಿ ರಾಜಿಊನ್".) ಮಡಿಕೇರಿಯಲ್ಲಿ 1951ರಲ್ಲಿ ಪ್ರಥಮವಾಗಿ ಬೈಅತ್ ಮಾಡಿದ ಅಹ್ಮದಿಯರಲ್ಲಿ ಒಬ್ಬರಾಗಿದ್ದ ಜನಾಬ್ ಪಿ.ಕುಂಞಾಲಿ (ಅಹ್ಮದ್ ಅಲಿ) ಸಾಹೇಬರ ಪುತ್ರರಾಗಿದ್ದ ಅವರು ಕೋಝಿಕ್ಕೋಡಿನಲ್ಲಿ ಸಾಮಿಲ್ ಉದ್ಯಮಿಯಾಗಿದ್ದರು. ಪತ್ನಿ, ಒಬ್ಬ ಪುತ್ರ, ಇಬ್ಬರು ಪುತ್ರಿಯರನ್ನೂ ಸಹೋದರ ಸಹೋದರಿಯರನ್ನೂ ಅವರು ಅಗಲಿ ಹೋಗಿದ್ದಾರೆ. ಅವರು ಸೌಮ್ಯ ಸ್ವಭಾವವನ್ನು ಹೊಂದಿದ್ದ ನಿಷ್ಠಾವಂತ ಅಹ್ಮದಿಯಾಗಿದ್ದರು. ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ.

**– ಯಮ್. ಉಬೈದುಲ್ಲಾ**

**ಸಂಪಾದಕರಿಗೆ ಪತ್ರ**

ಮಾನ್ಯಶ್ರೀ ಮುಹಮ್ಮದ್ ಯೂಸುಫ್ ಅವರಿಗೆ ವಂದನೆಗಳು.

'ಯುಗರಶ್ಮಿ' ಎಪ್ರಿಲ್ 17ರ ಸಂಚಿಕೆ ತಲಪಿದೆ. ಈ ಹಿಂದೆಯೂ ಒಮ್ಮೆ ಕಳಿಸಿದ್ದು ನೆನಪು. ಪತ್ರಿಕೆ ಸುಂದರವಾಗಿ ಮೂಡಿ ಬರುತ್ತಿದೆ. ಭಾಷೆಯೂ ಸುಧಾರಣೆ ಕಂಡಿದೆ...... ಹಿಂದುಗಳಿಗೆ 'ಇಸ್ಲಾಂ'ನ ಪರಿಚಯ ಮಾಡುವ ನಿಮ್ಮ ಕೆಲಸ ಪ್ರಶಂಸನಾರ್ಹ. ಪತ್ರಿಕೆ ಪೂರ್ತಿ ನೋಡಿದೆ. ನಿಧಾನಕ್ಕೆ ಓದುತ್ತೇನೆ.

**–ತಿಲಕನಾಥ ಮಂಜೇಶ್ವರ**
ಸಂಪಾದಕ ತರಂಗ ವಾರಪತ್ರಿಕೆ, ಮಣಿಪಾಲ.

**ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ...**
**(ಮಾರ್ಚ್ 1980ರ ಸಂಚಿಕೆಯಿಂದ)**

ಮಾನ್ಯರೇ,

ತಮ್ಮ ಜುಲೈ – ಸಪ್ಟೆಂಬರ್ ತಿಂಗಳ ಪತ್ರಿಕೆ ಓದಲು ತಂಬಾ ರುಚಿಕರವಾಗಿತ್ತು. "ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು" ಎಂಬ ನೈತಿಕ ಮೌಲ್ಯಗಳು ನಮ್ಮ ನಿತ್ಯಜೀವನಕ್ಕೆ ಸೊಗಸಾದ ದಾರಿ ತೋರಿಸಿಕೊಟ್ಟಿದೆ. ಹಾಗೂ ಇನ್ನಿತರ ಲೇಖನಗಳು ತುಂಬಾ ಮೆಚ್ಚಿಕೆಯಾಯಿತು. ಹೀಗೆ ತಮ್ಮ "ಯುಗರಶ್ಮಿ" ಚಿರಕಾಲ ಉಳಿಯಲೆಂದು ನನ್ನ ಅಭಿಲಾಷೆ.

**ಇಂಡಿ.** **ಆರ್.ಎಸ್. ಸಿಂದಗಿ**

ಮಾನ್ಯರೇ,

ರುಚಿಕರವಾದ ಲೇಖನಗಳಿಗಾಗಿ ನಾನು ಯಾವಾಗಲೂ ಯುಗರಶ್ಮಿಯನ್ನು ಪಡೆಯಲು ಕಾತರನಾಗಿರುತ್ತೇನೆ. ಪವಿತ್ರ ಇಸ್ಲಾಮಿನ ಹೆಸರಿನಲ್ಲಿ ಕೆಲವು ಸ್ವಾರ್ಥಿಗಳು ಅಪಾಯಕರ ಪಾತ್ರವನ್ನು ವಹಿಸಿ ಇಸ್ಲಾಮಿನ ಬಗ್ಗೆ ತಪ್ಪು ಕಲ್ಪನೆಯುಂಟಾಗುವಂತೆ ಮಾಡುವ ಈ ದಿನಗಳಲ್ಲಿ ಯುಗರಶ್ಮಿ ಮಹತ್ವದ ಪಾತ್ರ ವಹಿಸುತ್ತದೆ. ಸ್ವಾರ್ಥಿಗಳ ಕ್ರೂರ ಮನೋಭಾವನೆಗಳಿಂದಾಗಿ ಇಸ್ಲಾಮಿನ ಶಾಂತಮಯ ಅಧ್ಯಾಪನೆಗಳು ಸಾಮಾನ್ಯ ಜನರನ್ನು ತಲುಪದಂತಾಗಿದೆ.

ಈ ಹಾಳು ಅಡೆತಡೆಗಳನ್ನು ನೀಗಿಸುವರೆ ಅಲ್ಲಾಹು ಯುಗರಶ್ಮಿಗೆ ಸಾಕಷ್ಟು ಶಕ್ತಿ ಸಾಮರ್ಥ್ಯಗಳನ್ನು ನೀಡಲಿಯೆಂದು ನಾನು ಪ್ರಾರ್ಥಿಸುತ್ತೇನೆ.

**ಮಲ್ಪೆ.** **ಅಬ್ದುಲ್ ಗಫೂರ್**

---

ಸನ್ಮಾನ್ಯ ಯುಗರಶ್ಮಿಯ ಸಂಪಾದಕರಿಗೆ ಅಸ್ಸಲಾಮು ಅಲೈಕುಂ.

ತಾ. 23–11–79ರ 'ಸನ್ಮಾರ್ಗ'ದಲ್ಲಿ ಮಿರ್ಜಾರ ಮುಸ್ಲಿಂ ದ್ವೇಷ ಓದಿದೆ. ನನ್ನ ಪ್ರತಿಕ್ರಿಯೆ ಇಂತಿದೆ: ಮಿರ್ಜಾರಷ್ಟು ಬುದ್ಧಿವಂತರಲ್ಲದ, ನಿಜವಾದ ಭಕ್ತಿ ವಿಶ್ವಾಸಗಳಿಲ್ಲದ ಕಪಟ ವಿಶ್ವಾಸಿ ನಾಯಕರಾಗಿದ್ದಾರೆ ಮೌಲಾನ ಮೌದೂದಿ. ಪೈಗಂಬರರ ಸ್ಥಾನದ ಬಗ್ಗೆ ಮಿರ್ಜಾರಿಗಿದ್ದಷ್ಟು ಗೌರವ ಮೌದೂದಿಗಿರಲಿಲ್ಲವೆಂಬುದು ಸರ್ವವಿದಿತ. ಪೈಗಂಬರರನ್ನು ಗೌರವಿಸುವುದನ್ನು ಈ ಮೌದೂದಿಗಳು ಇಷ್ಟಪಡುವುದಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಮೌದೂದಿಗಳು 'ಸನ್ಮಾರ್ಗ'ದ ಮೂಲಕ ದುರ್ಮಾರ್ಗ ಪ್ರಚಾರ ಮಾಡುತ್ತಿದ್ದಾರೆ.

ಮಿರ್ಜಾ ಜೀವಂತ ಕಾಲದಲ್ಲಿ ಇಸ್ಲಾಮೀ ಐಕ್ಯತೆಗಾಗಿ, ಜಾತೀಯ ಸೌಹಾರ್ದತೆಗಾಗಿಯೇ ಕೆಲಸ ಮಾಡಿದ್ದರು. ಮೌದೂದಿ ಕೋಮು ಗಲಭೆಯ ವಿಷಬೀಜ ಬಿತ್ತಿದರು. ಐಕ್ಯತೆಯನ್ನು ಒಡೆದರು. ಗೊಂದಲ ಸೃಷ್ಟಿಸಿದರು. ಸಾಲದ್ದಕ್ಕೆ, ಹಿಂದೂ–ಮುಸ್ಲಿಂ ದ್ವೇಷ ಮಾತ್ರ ಅಲ್ಲದೆ, ಮುಸ್ಲಿಂ–ಮುಸ್ಲಿಂ ವರ್ಗ ಸೃಷ್ಟಿಸಿ, ಇಸ್ಲಾಮನ್ನು ನಾಶಪಡಿಸಲು ಹೊರಟಿದ್ದಾರೆ. 'ಸನ್ಮಾರ್ಗ' ಇಸ್ಲಾಮನ್ನು ವಿನಾಶಕ್ಕೆ ದೂಡುತ್ತಿದೆ ಎಂಬುದನ್ನು ಜನರು ಗಮನಿಸಬೇಕೆಂದು ಕಳಕಳಿಯ ವಿನಂತಿ.

ಇದೊಂದು ದ್ವೇಷ ಬಿತ್ತುವ ಭೂತ. ಇದನ್ನು ಹೊಡೆದೋಡಿಸದಿದ್ದರೆ ಸೌಹಾರ್ದತೆಗೆ ಕಾರಣವಾದ ನಮ್ಮ ಪರಂಪರೆ ನಾಶವಾದೀತೆಂದು ಎಚ್ಚರಿಕೆ ನೀಡುತ್ತೇನೆ.

**ಕಾರಕಳ.** **–ಅಬೂ ನಯೀಂ.**

---

ಓದಿದ್ದು

## ವಿಚಿತ್ರ, ಹಾಸ್ಯಾಸ್ಪದ ತೆರಿಗೆಗಳು!

ವಿಶ್ವದಲ್ಲಿ ಅನೇಕ ವಿಧಗಳ ತೆರಿಗೆಗಳನ್ನು ಆಡಳಿತಗಾರರು ಹೇರಿರುವುದನ್ನು ಕಾಣಬಹುದು. ಭಯಾನಕ, ಕುತೂಹಲ ಮತ್ತು ಹಾಸ್ಯಾಸ್ಪದವಾಗಿರುವ ಇವುಗಳ ಕಡೆಗೊಂದು ನೋಟ ಇಲ್ಲಿದೆ.

ಕೇರಳ ರಾಜ್ಯದ ತಿರುವನಂತಪುರ ಪ್ರದೇಶದಲ್ಲಿ ಕ್ರಿ.ಶ. 19ನೆಯ ಶತಮಾನದಲ್ಲಿ ಅಲ್ಲಿ ಆಳುತ್ತಿದ್ದ ಅರಸರು ಕೆಳವರ್ಗದ ಮಹಿಳೆಯರು ತಮ್ಮ ಎದೆಯನ್ನು ಬಟ್ಟೆಯಿಂದ ಮುಚ್ಚಿಕೊಳ್ಳುವಂತಿಲ್ಲ ಎಂಬ ಆದೇಶ ಹೊರಡಿಸಿದ್ದರು. ತನ್ನ ನಗ್ನ ಎದೆಯನ್ನು ಪ್ರದರ್ಶಿಸಲು ಇಚ್ಛೆಯಿಲ್ಲದ ಮಹಿಳೆ ಭಾರೀ ತೆರಿಗೆಯನ್ನು ತರಬೇಕಾಗುತ್ತಿತ್ತು. ಈ ತೆರಿಗೆಯನ್ನು ಮುಲಕ್ಕರಂ ಎಂದು ಕರೆಯಲಾಗುತ್ತಿತ್ತು. ಅಲ್ಲಿನ ಈಳದ ಜನಾಂಗದ ನಂಗೇಲಿ ಎಂಬ ಬಡ ಮಹಿಳೆ ಧೈರ್ಯದಿಂದ ಮುಲಕ್ಕರಂ ತೆರಲು ವಿರೋಧಿಸುತ್ತಾಳೆ. ತೆರಿಗೆ ಅಧಿಕಾರಿ ತೆರಿಗೆ ವಸೂಲಿಗಾಗಿ ಆಕೆಯ ಮನೆಗೆ ಬಂದಾಗ ನಂಗೇಲಿ ತನ್ನ ಸ್ತನವನ್ನು ಕೊಯ್ದು ಬಾಳೆ ಎಲೆಯಲ್ಲಿಟ್ಟು ತೆರಿಗೆ ಅಧಿಕಾರಿಗೆ ನೀಡುತ್ತಾಳೆ. ಬೆದರಿದ ಅಧಿಕಾರಿ ಅಲ್ಲಿಂದ ಓಟಕ್ಕಿತ್ತ. ನಂಗೇಲಿ ತೀವ್ರ ರಕ್ತಸ್ರಾವದಿಂದ ಮರಣ ಹೊಂದಿದಳು. ಆಕೆಯ ಪತಿ ಚಿರುಕಂದನ್ ದುಃಖದಿಂದ ಆಕೆಯ ಚಿತೆಗೆ ಬಿದ್ದು ಸಾವನ್ನಪ್ಪುತ್ತಾನೆ. ಜನರ ತೀವ್ರ ವಿರೋಧದ ನಡುವೆ ಅರಸರು ಮುಲಕ್ಕರಂ ತೆರಿಗೆಯನ್ನು ರದ್ದು ಮಾಡುತ್ತಾರೆ. ನಂಗೇಲಿ ನೆಲೆಸಿದ್ದ ಸ್ಥಳ ಈಗ ಮುಲಚ್ಚಿಪರಂಬು ಎಂಬ ಹೆಸರಿನಲ್ಲಿ ಗುರುತಿಸಲ್ಪಡುತ್ತಿದೆ.

ವಿಶ್ವದಲ್ಲಿ ಅತಿ ಜಟಿಲವಾದ ತೆರಿಗೆ ಕಾಯ್ದೆ ಜರ್ಮನಿಯದ್ದು. ವಿಶ್ವದ ತೆರಿಗೆ ಕಾಯ್ದೆಗಳನ್ನು ಒಟ್ಟಾಗಿ ತಂದರೆ ಅದರ ಮೂರನೆಯ ಒಂದು ಭಾಗದಷ್ಟು ಸ್ಥಳವನ್ನು ಜರ್ಮನಿಯ ತೆರಿಗೆ ಕಾನೂನು ಕಬಳಿಸುತ್ತದೆ! ಜರ್ಮನ್ ತೆರಿಗೆ ಪದ್ಧತಿಯಲ್ಲಿ 118 ಕಾನೂನುಗಳು, 185 ತೆರಿಗೆ ಫಾರ್ಮುಗಳು ಮತ್ತು 96,000 ನಿಯಮಗಳಿವೆ. ತೆರಿಗೆ ಸಂಗ್ರಹಕ್ಕಾಗಿ ಭಾರೀ ವೆಚ್ಚ ಮಾಡಲಾಗುತ್ತಿದೆ. ಅದೇ ರೀತಿ ಅಮೇರಿಕದ ತೆರಿಗೆ ಪದ್ಧತಿ 1,177 ತೆರಿಗೆ ಫಾರ್ಮುಗಳನ್ನು ಹೊಂದಿದೆ. ಈ ತೆರಿಗೆ ಕಾನೂನಿನಲ್ಲಿ 38,00,000 ಪದಗಳಿವೆ.

ಪುರಾತನ ರೋಮ್‌ನಲ್ಲಿ ಮಾನವ ಮೂತ್ರಕ್ಕೆ ತೆರಿಗೆ ಇತ್ತು. ಮೂತ್ರವನ್ನು ರಾಸಾಯನಿಕ ಕ್ರಿಯೆಗಳಿಗೆ ಮತ್ತು ಬಟ್ಟೆಗಳನ್ನು ಹದಗೊಳಿಸಲು ಬಳಸಲಾಗುತ್ತಿದ್ದುದರಿಂದ ಮಾನವ ಮೂತ್ರಕ್ಕೆ ಬಹಳ ಬೆಲೆ ಇತ್ತು.

ಹಿಂದೆ ಇಂಗ್ಲೆಂಡ್ ದೇಶದಲ್ಲಿ ಮನೆ ಮಾಲೀಕರು ತಮ್ಮ ಮನೆಯ ಕಿಟಕಿಗಳಿಗೆ ಇಂತಿಷ್ಟು ಎಂದು ತೆರಿಗೆಯನ್ನು ಸರಕಾರಕ್ಕೆ

ಸಲ್ಲಿಸಬೇಕಾಗಿತ್ತು. ಇದನ್ನು ತಪ್ಪಿಸಲು ಹೊಸ ಮನೆ ಕಟ್ಟುವವರು ಕಿಟಕಿಗಳನ್ನು ಇಡುತ್ತಿರಲಿಲ್ಲ. ಕ್ರಿ.ಶ. 1851ರಲ್ಲಿ ಕಿಟಕಿ ತೆರಿಗೆಯನ್ನು ರದ್ದು ಮಾಡಲಾಯಿತು.

ಭಾರತದಲ್ಲಿ 70ರ ದಶಕದವರೆಗೂ ರೇಡಿಯೋ ಹೊಂದಿದ್ದವರು ವಾರ್ಷಿಕ ತೆರಿಗೆಯನ್ನು ಅಂಚೆ ಕಚೇರಿಗಳಲ್ಲಿ ತುಂಬಬೇಕಾಗುತ್ತಿತ್ತು. ಇದನ್ನು ತಪ್ಪಿಸಲು ತಮ್ಮ ಟ್ರಾನ್ಸಿಸ್ಟರುಗಳನ್ನು ಜನರು ಹೊರಗೆ ಒಯ್ಯುತ್ತಿರಲಿಲ್ಲ. ಅಂಚೆ ಕಚೇರಿಯ ಮುಂದೆ ರೇಡಿಯೋ ನುಡಿಸುವ ಧೈರ್ಯ ಯಾರೂ ಮಾಡುತ್ತಿರಲಿಲ್ಲ. ಹಾಗೆಯೇ ಸೈಕಲ್ ಹೊಂದಿದವರೂ ತೆರಿಗೆ ತುಂಬಬೇಕಾಗಿತ್ತು.

ದನಗಳು ಹೂಸು ಬಿಡುತ್ತವೆ ಎಂಬ ಕಾರಣಕ್ಕಾಗಿ ಐರ್ಲೆಂಡ್ ಮತ್ತು ಡೆನ್ಮಾರ್ಕ್ ದೇಶಗಳಲ್ಲಿ ಪ್ರತಿ ದನಕ್ಕೆ 110 ಡಾಲರ್ ತೆರಿಗೆ ವಿಧಿಸಲಾಗುತ್ತಿತ್ತು.

ಸ್ವೀಡನ್ ದೇಶದಲ್ಲಿ ಮಕ್ಕಳಿಗೆ ಹೆಸರಿಡುವ ಮುನ್ನ ತಂದೆ-ತಾಯಿಯರು ಮಗುವಿನ ಹೆಸರನ್ನು ಸರಕಾರಕ್ಕೆ ಸಲ್ಲಿಸಿ ಸ್ವೀಡಿಶ್ ತೆರಿಗೆ ಅಧಿಕಾರಿಗಳಿಂದ ಅನುಮತಿ ಪಡೆಯಬೇಕಾಗಿತ್ತು. ಹೀಗೆ ಅನುಮತಿ ಪಡೆಯದವರಿಗೆ 50,000 ರೂ.ದಂಡ ವಿಧಿಸಲಾಗುತ್ತಿತ್ತು. ರಾಜವಂಶಸ್ಥರ ಹೆಸರನ್ನು ಬಳಸುವುದನ್ನು ತಪ್ಪಿಸಲು ಈ ಕ್ರಮವಂತೆ.

ಚೀನಾದ ಹುಬೇ ಪ್ರಾಂತ್ಯದಲ್ಲಿ 2009ರಲ್ಲಿ ಸರಕಾರ ತನ್ನ ಪ್ರಜೆಗಳಿಗೆ 'ಸಿಗರೇಟು ಸೇದಿ ಇಲ್ಲವೇ ದಂಡ ಕಟ್ಟಿ' ಎಂಬ ಆದೇಶ ಜಾರಿಗೊಳಿಸಿತ್ತು. ಸರಕಾರದ ಆದಾಯ ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಯಿತೆಂದು ಸರಕಾರ ಸ್ಪಷ್ಟೀಕರಣ ನೀಡಿತು. ಇಂದಿಗೂ ವಿಶ್ವದ ಎಲ್ಲಾ ರಾಷ್ಟ್ರಗಳಿಗಿಂತ ಚೀನಾದಲ್ಲಿ ಧೂಮಪಾನಿಗಳ ಸಂಖ್ಯೆ ಜಾಸ್ತಿ ಇದೆ.

ಮುಂದುವರಿದ ದೇಶಗಳಲ್ಲಿ ದೇಹದ ತೂಕವನ್ನು ಹೆಚ್ಚಿಸಿ ಆರೋಗ್ಯ ಹಾನಿ ಮಾಡುವ ಜಂಕ್‌ಫುಡ್ ಮೇಲೆ "ಫ್ಯಾಟ್ ಟ್ಯಾಕ್ಸ್" ವಿಧಿಸಲಾಗಿದೆ. ಇದನ್ನು ಭಾರತದಲ್ಲೂ ಕೆಲವು ಜಂಕ್‌ಫುಡ್ ಮೇಲೆ ಹೇರಬೇಕೆಂಬ ಚಿಂತನೆ ಇದೆ. **ತರಂಗ 6-7-2017.**

---

## ಗೋಮಾಂಸ

ಭವಭೂತಿಯ 'ಉತ್ತರರಾಮಚರಿತ'ದ ನಾಲ್ಕನೆಯ ಸ್ಕಂದದಲ್ಲಿ ಒಂದು ಸ್ವಾರಸ್ಯಕರ ಪ್ರಸಂಗ ಬರುತ್ತದೆ. ಸೀತೆಯ ಯೋಗಕ್ಷೇಮ ವಿಚಾರಿಸಲೆಂದು ವಾಲ್ಮೀಕಿ ಆಶ್ರಮಕ್ಕೆ ಗುರು ವಶಿಷ್ಠರು ತಮ್ಮೊಂದಿಗೆ ದಶರಥನ ಹೆಂಡತಿಯರು ಮತ್ತು ಅವರ ಪರಿವಾರದೊಂದಿಗೆ ಬಂದಿರುತ್ತಾರೆ.ತುಸು ದೂರದಲ್ಲಿ ಇಬ್ಬರು ಎಳೆ ಹುಡುಗರು ಹರಟೆ ಹೊಡೆಯುತ್ತಿದ್ದಾರೆ. ಕಿರಿಯವನ ಹೆಸರು ಸೌಧಾತಕಿ, ತುಸು ದೊಡ್ಡವನ ಹೆಸರು ಭಾಂಡಾಯಣ.

ಸೌ: ಆಹ್ಹಾ, ಈ ಬಿಳಿಕೂದಲಿನವರು ಬಂದರೆಂದರೆ ನಮಗೆಲ್ಲ ರಜೆಯ ಮಜಾ! ಈ ತಂಡದ ಮುಖ್ಯಸ್ಥ ಯಾರೋ?

ಭಾ: ಅಷ್ಟೂ ಗೊತ್ತಿಲ್ವಾ? ಆ ಮುನಿವರ್ಯರ ಹೆಸರು ವಶಿಷ್ಠ.

ಸೌ: ಓ ಹೌದಾ! ನಾನು ಯಾವುದೋ ಹುಲಿಯೋ ತೋಳವೋ ಬಂತು ಅಂದ್ಕೊಂಡೆ.

ಭಾ: ಯಾಕಯ್ಯ, ಮೂರ್ಖನ ಹಾಗೆ ಮಾತಾಡ್ತೀಯ?

ಸೌ: ಮತ್ತಿನ್ನೇನು? ಬಂದಿದ್ದೇ ತಡ, ನಮ್ಮ ಮುದ್ದಿನ ಎಳೆಗರು ವತ್ಸತಾರಿಯನ್ನು ಗುಳುಂ ಮಾಡಿಬಿಟ್ಟರಲ್ಲ!

ಭಾ: ಅದೇನು ದೊಡ್ಡ ವಿಷಯ? ನಮ್ಮ ಶಾಸ್ತ್ರದ ಪ್ರಕಾರ ಬ್ರಾಹ್ಮಣರು ಅತಿಥಿಯಾಗಿ ಬಂದಾಗ ಮಾಂಸವನ್ನು ಕೊಡಲೇಬೇಕು. ಅದರ ಪ್ರಕಾರ ಎಳೆಗರುವಿನದೊ, ಹೋರಿಯದೊ ಅಥವಾ ಮೇಕೆಯದೊ ಮಾಂಸವನ್ನು ಬೇಯಿಸಿ ಊಟಕ್ಕೆ ಬಡಿಸುತ್ತಾರೆ.

ಸೌ: ಅದೆಂಥ ಶಾಸ್ತ್ರ? ಗುರು ವಶಿಷ್ಠರು ಬಂದಾಗ ಮುದ್ದು ಕರು ವತ್ಸತಾರಿಯನ್ನು ಬಲಿ ಹಾಕಬೇಕು. ಅದೇ ರಾಜರ್ಷಿ ಜನಕರು ಬಂದಾಗ ಗುರು ವಾಲ್ಮೀಕಿಯವರು ಕೇವಲ ಮೊಸರು ಮತ್ತು ಜೇನು ನೀಡಿ ಉಪಚರಿಸುತ್ತಾರೆ?

ಭಾ: ಅದು ಯಾಕೆಂದರೆ, ವಶಿಷ್ಠರು ಹಳೇ ಕಾಲದವರು. ಈಗ ಜನಕರಾಜ ಮಾಂಸಾಹಾರಕ್ಕೆ ನಿಷೇಧ ಹಾಕಿದ್ದಾನೆ.

ತೀರ ವಿರೋಧಾಭಾಸದಂತೆ ಕಾಣುವ ಈ ನಾಟಕೀಯ ಸಂದರ್ಭದ ಬಗ್ಗೆ ಅನೇಕ ವಿಧದ ಚರ್ಚೆಗಳು ಹಿಂದೆ ನಡೆದಿವೆ. ಭವಭೂತಿಯಂಥ ಪ್ರಸಿದ್ಧ ನಾಟಕಕಾರ ಈ ದೃಶ್ಯದ ಮೂಲಕ ಏನನ್ನು ಹೇಳಲು ಹೊರಟ? ವೆಜ್-ನಾನ್‌ವೆಜ್ ವಾದ ಆಗಲೂ ಇತ್ತೆ?

ರಾಮಾಯಣದ ಕಾಲದಲ್ಲಿ ಋತ್ವಿಜರು ತಿನ್ನಲೇಬೇಕಾದ ಆಹಾರವಾಗಿದ್ದ ಗೋಮಾಂಸ ಕ್ರಮೇಣ ಭವಭೂತಿಯ ಕಾಲದಲ್ಲಿ ಸಂಪೂರ್ಣ ನಿಷೇಧಕ್ಕೊಳಗಾಗಿತ್ತು. ಮಧ್ಯದಲ್ಲೆಲ್ಲೋ ಬ್ರಾಹ್ಮಣರು ಮಾಂಸಾಹಾರದಿಂದ ಸಸ್ಯಹಾರಕ್ಕೆ ಪರಿವರ್ತನೆ ಆಗಿದ್ದಾರೆ. ಬದಲಾವಣೆಯ ಆ ಹಂತವನ್ನು ಭವಭೂತಿ ತುಸು ಮುಂಚಿತವಾಗಿಯೇ ಅಂದರೆ, ಉತ್ತರಕಾಂಡದಲ್ಲೇ ಸೂಚಿಸಿದ್ದಾನೆ. ನಾಟಕಕಾರ ಸ್ವತಃ ಸಸ್ಯಾಹಾರಿಯಾಗಿದ್ದರಿಂದ ಗೋಮಾಂಸವನ್ನು ತಿನ್ನುತ್ತಿದ್ದವರನ್ನು ಕೊಂಚ ಕಾಲೆಳೆಯಲೆಂದೇ ವಶಿಷ್ಠರ ತಂಡವನ್ನು 'ಹುಲಿ, ತೋಳ'ಗಳಿಗೆ ಹೋಲಿಸಿ ಬಾಲಕನ ಬಾಯಿಂದ ಹೇಳಿಸಿದ್ದಾನೆ. ಆದರೆ ಎಲ್ಲೂ ವಶಿಷ್ಠರ ಬಗ್ಗೆ ಛೀಮಾರಿ ಹಾಕಿಸಲಿಲ್ಲ. ಜನಕನ ನಿಲುವೇ ಶ್ರೇಷ್ಠ ಎಂಬುದನ್ನೂ ಮುಂದಿಟ್ಟಿಲ್ಲ. ಅಂದಿನ ಚಿತ್ರಣವನ್ನು ಸಂಕ್ಷಿಪ್ತದಲ್ಲಿ ಕೊಟ್ಟಿದ್ದಾನಷ್ಟೆ. ಮಾಧ್ಯಮಗಳು ವಹಿಸಬೇಕಾದ ಪಾತ್ರ ಏನು ಎಂಬುದನ್ನೂ ಸೂಚ್ಯವಾಗಿ ತಿಳಿಸಿದ್ದಾನೆ. **ತರಂಗ 29-6-2017.**

## ಅತ್ಯಾಚಾರ ಎಸಗಿದ ಸ್ವಾಮಿಯ ಮರ್ಮಾಂಗಕ್ಕೇ ಕತ್ತರಿ!
## ಯುವತಿಯ ಕೃತ್ಯಕ್ಕೆ ವ್ಯಾಪಕ ಶ್ಲಾಘನೆ

**ಹಿಂದೆಯೂ ನಡೆದಿತ್ತು ಇಂಥ ಕೃತ್ಯಗಳು: ●2012ರ ಮಾರ್ಚ್ – ದಿಲ್ಲಿಯ ಅಲಿಪುರದಲ್ಲಿ ವಿಧವೆಯೊಬ್ಬಳು ತನ್ನ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದಾತನ ಮರ್ಮಾಂಗವನ್ನು ಕತ್ತರಿಸಿದ್ದಳು. ●2014 ಆಗಸ್ಟ್ – ಬಿಹಾರದಲ್ಲಿ ರೇಪ್ ಮಾಡಲು ಮುಂದಾದ ಚಿಕ್ಕಪ್ಪನ ಜನನಾಂಗಕ್ಕೆ ಯುವತಿ ಕತ್ತರಿ ಹಾಕಿದ್ದಳು. ●2016 ಫೆಬ್ರವರಿ – ಮಧ್ಯಪ್ರದೇಶದಲ್ಲಿ ಮಹಿಳೆಯೊಬ್ಬಳು ಲೈಂಗಿಕ ದೌರ್ಜನ್ಯ ಎಸಗಿದ ಪುರುಷನ ಖಾಸಗಿ ಅಂಗಾಂಗಕ್ಕೆ ಹಾನಿ ಮಾಡಿದ್ದಳು. ●2016 ಎಪ್ರಿಲ್ – ಅತ್ಯಾಚಾರವೆಸಗಿದ ವ್ಯಕ್ತಿಯನ್ನು ಅಸ್ಸಾಂನ ಬುಡಕಟ್ಟು ಮಹಿಳೆಯೊಬ್ಬಳು ಹತ್ಯೆಗೈದು, ಸುಟ್ಟು ಹಾಕಿದ್ದಳು.**

ತಿರುವನಂತಪುರ, ಮೇ 20: ಯುವಕನ ಮರ್ಮಾಂಗವನ್ನೇ ಕತ್ತರಿಸುವ ಮೂಲಕ ನಾಯಕಿಯು ತನ್ನ ನಂಬಿಕೆಗೆ ದ್ರೋಹವೆಸಗಿದ ಆತನ ವಿರುದ್ಧ ಸೇಡು ತೀರಿಸಿಕೊಳ್ಳುವ ಮಲಯಾಳಂ ಸಿನಿಮಾ '22 ಫಿಮೇಲ್ ಕೊಟ್ಟಾಯಂ' ಅನ್ನು ನೀವು ನೋಡಿರಬಹುದು. ಈಗ ಕೇರಳದಲ್ಲಿ ಇದೇ ಮಾದರಿಯ ಘಟನೆಯೊಂದು ನಡೆದಿದೆ. ಆದರೆ, ಇಲ್ಲಿ 23 ವರ್ಷದ ಕಾನೂನು ಪದವಿ ವಿದ್ಯಾರ್ಥಿನಿಯೊಬ್ಬಳು ಕಾಮುಕ ಸ್ವಾಮೀಜಿಯ ಜನನಾಂಗವನ್ನೇ ಕತ್ತರಿಸಿದ್ದಾಳೆ!

ಅಚ್ಚರಿಯಾದರೂ ಇದು ಸತ್ಯ. ಕೊಲ್ಲಂನ ಪನ್ಮಾನಾ ಆಶ್ರಮದ ಸ್ವಘೋಷಿತ ದೇವಮಾನವ 54 ವರ್ಷದ ಸ್ವಾಮಿ ಗಣೇಶಾನಂದನೇ ಯುವತಿಯ ಆಕ್ರೋಶಕ್ಕೆ ಬಲಿಯಾದವನು. ಶುಕ್ರವಾರ ರಾತ್ರಿ ಪೂಜೆಗೆಂದು ಮನೆಗೆ ಬಂದಾಗ, ಯುವತಿಯ ಮೇಲೆ ಮತ್ತೆ ಅತ್ಯಾಚಾರವೆಸಗಲು ಸ್ವಾಮೀಜಿ ಯತ್ನಿಸಿದ್ದು, ಈ ವೇಳೆ ಆಕೆ ಚಾಕುವಿನಿಂದ ಆತನ ಮರ್ಮಾಂಗವನ್ನೇ ಕತ್ತರಿಸಿದ್ದಾಳೆ. ಈ ಮೂಲಕ ಸತತ 8 ವರ್ಷಗಳಿಂದ ತನ್ನ ಮೇಲೆ ನಡೆಯುತ್ತಿದ್ದ ಲೈಂಗಿಕ ದೌರ್ಜನ್ಯಕ್ಕೆ ಅಂತ್ಯ ಹಾಡಿದ್ದಾಳೆ. ಘಟನೆ ನಡೆದ ಕೂಡಲೇ ಆಕೆ ಪೋಲಿಸರಿಗೆ ಕರೆ ಮಾಡಿ, ವಿಷಯ ತಿಳಿಸಿದ್ದಾಳೆ. ಗಂಭೀರ ಸ್ಥಿತಿಯಲ್ಲಿರುವ ಗಣೇಶಾನಂದ ಇದೀಗ ಆಸ್ಪತ್ರೆಯಲ್ಲಿ ಪ್ಲಾಸ್ಟಿಕ್ ಸರ್ಜರಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಯುವತಿಯ ಧೈರ್ಯವನ್ನು ಕೊಂಡಾಡಿರುವ ಕೇರಳ ಸಿ.ಎಂ.ಪಿನರಾಯಿ ವಿಜಯನ್ ಯುವತಿ ಅತ್ಯಂತ ದಿಟ್ಟ ಹಾಗೂ ಒಳ್ಳೆಯ ಕೆಲಸವನ್ನೇ ಮಾಡಿದ್ದಾಳೆ ಎಂದಿದ್ದಾರೆ. ಆದರೆ, ಇದನ್ನು ತಳ್ಳಿಹಾಕಿರುವ ಸ್ವಾಮಿ, 'ಅದರಿಂದ ಈಗ ಏನೂ ಪ್ರಯೋಜನವಿಲ್ಲ ಎಂದು ಜನನಾಂಗವನ್ನು ನಾನೇ ಕತ್ತರಿಸಿಕೊಂಡೆ' ಎಂದಿದ್ದಾನೆ.

**ಆಗಾಗ್ಗೆ ಮನೆಗೆ ಬರುತ್ತಿದ್ದ:** ಯುವತಿಯ ಕುಟುಂಬ ಸದಸ್ಯರು ಸ್ವಾಮೀಜಿಯ ಭಕ್ತರಾಗಿದ್ದು, ಇದೇ ನೆಪವಿಟ್ಟುಕೊಂಡು ಆತ ಆಗಾಗ್ಗೆ ಇವರ ಮನೆಗೆ ಬರುತ್ತಿದ್ದ. ಈ ಬಗ್ಗೆ ಹೇಳಿಕೊಂಡಿರುವ ಯುವತಿ 'ನಾನು ಅಪ್ರಾಪ್ತ ವಯಸ್ಸಿನವಳಾಗಿದ್ದಾಗಿನಿಂದಲೂ ಅಂದರೆ ಕಳೆದ 8 ವರ್ಷಗಳಿಂದಲೂ ಸ್ವಾಮಿಯು ನನ್ನ ಮೇಲೆ ಅತ್ಯಾಚಾರವೆಸಗುತ್ತಿದ್ದ. ಇದರಿಂದ ರೋಸಿ ಹೋಗಿದ್ದೆ. ಶುಕ್ರವಾರ ಆತ ಬರುವುದು ಗೊತ್ತಾಗುತ್ತಿದ್ದಂತೆ ಚಾಕು ಸಿದ್ಧಪಡಿಸಿಟ್ಟುಕೊಂಡೆ. ಬಲಾತ್ಕಾರಕ್ಕೆ ಯತ್ನಿಸಿದೊಡನೆ ಮರ್ಮಾಂಗವನ್ನು ಕತ್ತರಿಸಿಬಿಟ್ಟೆ' ಎಂದಿದ್ದಾಳೆ. ಈಗ ಪೊಲೀಸರು ಪೋಕ್ಸೋ ಕಾಯ್ದೆಯಡಿ ಸ್ವಾಮಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

**ಯುವತಿಗೆ ಕಾನೂನಿನ ರಕ್ಷಣೆ:** ಮರ್ಮಾಂಗ ಕತ್ತರಿಸಿದ ಯುವತಿ ಮೇಲೆ ಪೊಲೀಸರು ದೂರು ದಾಖಲಿಸಿಲ್ಲ. ಏಕೆಂದರೆ, ಆಕೆಗೆ ಕಾನೂನಿನಲ್ಲಿ ರಕ್ಷಣೆ ಇದೆ. ಐಸಿಸಿ ಸೆಕ್ಷನ್ 100ರ ಅನ್ವಯ, ಮಹಿಳೆಯರು ತಮ್ಮ ಘನತೆ ಅಥವಾ ಜೀವದ ಪ್ರಶ್ನೆ ಬಂದಾಗ, ಸ್ವಯಂರಕ್ಷಣೆಗಾಗಿ ದಾಳಿಕೋರನನ್ನು ಕೊಂದರೂ ಆಕೆಗೆ ಕಾನೂನಿನ ರಕ್ಷಣೆ ಸಿಗುತ್ತದೆ.

**ಉದಯವಾಣಿ 21–5–2017**

---

### ◆ಭಾರತೀಯ ವಿಜ್ಞಾನಿಗಳು ಕೆಲಸ ಮಾಡುತ್ತಿರುವ 'ಲಿಗೋ'ದಿಂದ ಪತ್ತೆ
### ◆300 ಕೋಟಿ ಜ್ಯೋತಿವರ್ಷಗಳಾಚೆ ಪತ್ತೆಯಾದ ಗುರುತ್ವ ತರಂಗ

## ಬ್ರಹ್ಮಾಂಡದಲ್ಲಿ ಮತ್ತೊಂದು ಗುರುತ್ವಾಕರ್ಷಣ ತರಂಗ ಪತ್ತೆ

**2 ಬಾರಿ ಪತ್ತೆಹಚ್ಚಿದ್ದ ಲಿಗೋ – 100 ವರ್ಷಗಳ ಹಿಂದೆ ಸಾಪೇಕ್ಷ ಸಿದ್ಧಾಂತದಲ್ಲಿ ಗುರುತ್ವ ತರಂಗದ ಬಗ್ಗೆ ಐನ್‌ಸ್ಟೀನ್ ಅವರು ಹೇಳಿದ್ದರು.ಗುರುತ್ವ ತರಂಗ ಪತ್ತೆ ನಕ್ಷತ್ರಗಳ ಅವನತಿ, ಕಪ್ಪುರಂಧ್ರ ಸೃಷ್ಟಿಯ ಕುರಿತ ಸಂಶೋಧನೆಯಲ್ಲಿ ಮಹತ್ವದ ಅಂಶವಾಗಿದೆ. ಈ ಮೊದಲು ಲಿಗೋ 2ಬಾರಿ ಬ್ರಹ್ಮಾಂಡದಿಂದ ಗುರುತ್ವ ತರಂಗವನ್ನು ಪತ್ತೆ ಹಚ್ಚಿತ್ತು. ಲಿಗೋ ಕೇಂದ್ರದಲ್ಲಿ ವಿಶ್ವದ ಸುಮಾರು 1000 ವಿಜ್ಞಾನಿಗಳು ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ.**

ಬೋಸ್ಟನ್, ಜೂ, 2: ಖ್ಯಾತ ವಿಜ್ಞಾನಿ ಐನ್‌ಸ್ಟೀನ್ ಅವರು ತಮ್ಮ ಸಾಪೇಕ್ಷ ಸಿದ್ಧಾಂತದಲ್ಲಿ ಹೇಳಿದ್ದ 'ಗುರುತ್ವಾಕರ್ಷಣ ತರಂಗ'ವನ್ನು ಮತ್ತೊಮ್ಮೆ ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ.

ಭಾರತೀಯ ವಿಜ್ಞಾನಿಗಳೂ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಲೇಸರ್ ಇಂಟರ್‌ಫೆರೋ ಮೀಟರ್ ಗುರುತ್ವಾಕರ್ಷಣ ತರಂಗ ಪರಿಶೋಧಕ ಸಾಧನ' (ಲಿಗೋ) ಮೂಲಕ ಈ ವೈಚಿತ್ರ್ಯವನ್ನು ಗುರುತಿಸಲಾಗಿದೆ.

ಭೂಮಿಯಿಂದ 300 ಕೋಟಿ ಜ್ಯೋತಿರ್ವರ್ಷಗಳಾಚೆ (ಒಂದು ಜ್ಯೋತಿರ್ವರ್ಷ ಎಂದರೆ 9,500,000,000,000 ಕಿ.ಮೀ.ಗಳು) ಎರಡು ಕಪ್ಪುರಂಧ್ರಗಳು ವಿಲೀನವಾಗುತ್ತಿರುವ ಸಂದರ್ಭ ಈ ಗುರುತ್ವ ತರಂಗ ಸೃಷ್ಟಿಯಾಗಿದೆ ಎಂದು ಹೇಳಲಾಗಿದೆ. ಅಲ್ಲದೇ ಈ ವಿಲೀನದಿಂದಾಗಿ ನೂತನ ಕಪ್ಪುರಂಧ್ರ ಸೃಷ್ಟಿಯಾಗಿದ್ದು. ಇದು ನಮ್ಮ ಸೂರ್ಯನಂದ 49 ಪಟ್ಟು ಹೆಚ್ಚು ದ್ರವ್ಯರಾಶಿಯನ್ನು ಹೊಂದಿರಲಿದೆ ಎಂದು ಹೇಳಲಾಗಿದೆ.

ಭಾರೀ ಗಾತ್ರದ ಎರಡು ಕಪ್ಪುರಂಧ್ರಗಳಿರುವ ಬಗ್ಗೆ ಲಿಗೋ ಕಂಡುಹಿಡಿವ ಮೊದಲು ನಮಗೆ ಅದರ ಅರಿವಿರಲಿಲ್ಲ. ಸದ್ಯ ಗುರುತ್ವ ತರಂಗದ ಪತ್ತೆಯೊಂದಿಗೆ ಶತಕೋಟಿ ವರ್ಷಗಳ ಹಿಂದೆ ಏನಾಗಿದ್ದಿರಬಹುದು ಮತ್ತು ಬ್ರಹ್ಮಾಂಡದಲ್ಲಿ ಈಗ ಶತಕೋಟಿ ಜ್ಯೋತಿವರ್ಷಗಳ ದೂರದಲ್ಲಿ ಏನಾಗುತ್ತಿದೆ ಎಂಬುದನ್ನು ಪತ್ತೆಹಚ್ಚಲು ಸುಲಭವಾಗಿದೆ ಎಂದು ಮಸ್ಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿಜ್ಞಾನಿ, ಲಿಗೋದ ವಕ್ತಾರ ಡೇವಿಡ್ ಶೂಮಾಕರ್ ಹೇಳಿದ್ದಾರೆ.

ಕಳೆದ ನವೆಂಬರ್ 30ರಿಂದ ಲಿಗೋ ಶೋಧನೆಯನ್ನು ಶುರುಮಾಡಿತ್ತು.ಅಮೆರಿಕದ ವಾಷಿಂಗ್ಟನ್ ಮತ್ತು ಲೂಸಿಯಾನಾದಲ್ಲಿ ಲಿಗೋದ ಎರಡು ದೊಡ್ಡ ಪತ್ತೆಯಂತ್ರಗಳು ಚಾಚಿಕೊಂಡಿವೆ. ಲಿಗೋದ ಸಂಶೋಧನೆಯಲ್ಲಿ ಭಾರತದ 13 ಸಂಸ್ಥೆಗಳ 67 ಮಂದಿ ವಿಜ್ಞಾನಿಗಳು ಕೆಲಸ ಮಾಡುತ್ತಿದ್ದಾರೆ ಈ ಹಿಂದೆ 2015 ಸೆಪ್ಟಂಬರ್‌ನಲ್ಲಿ, ಡಿಸೆಂಬರ್‌ನಲ್ಲಿ ಲಿಗೋ ಗುರುತ್ವ ತರಂಗವನ್ನು ಪತ್ತೆ ಹಚ್ಚಿದೆ.ಈಗ ಪತ್ತೆಯಾದ ಗುರುತ್ವ ತರಂಗ ಜ.4ರಂದು ಸೃಷ್ಟಿಯಾದದ್ದು ಎನ್ನಲಾಗಿದೆ. **ಉದಯವಾಣಿ 3-6-2017**

---

## ಅತ್ಯಾಚಾರಿ ಬಾಬಾ ರಾಂ ರಹೀಂ
## 10+10 ವರ್ಷ ಜೈಲು 15+15 ಲಕ್ಷ ದಂಡ

**ಡೇರಾ ಸಚ್ಚಾ ಸೌಧದ ದೇವಮಾನವ 'ಅತ್ಯಾಚಾರಿ' ಬಾಬಾ ಗುರ್ಮೀತ್ ರಾಂ ರಹೀಂ ಸಿಂಗ್‌ಗೆ ಹರಿಯಾಣದ ರೋಹ್ಟಕ್ ಸಿಬಿಐ ವಿಶೇಷಕೋರ್ಟ್ ಸೋಮವಾರ ಶಿಕ್ಷೆಯ ಪ್ರಮಾಣ ಪ್ರಕಟಿಸಿದ್ದು 20 ವರ್ಷಗಳ ಸೆರೆವಾಸಕ್ಕೆ ದೂಡಿದೆ. ಇಬ್ಬರು ಸಾಧ್ವಿಗಳು ಆರೋಪ ಮಾಡಿದ್ದು, ಈ ಎರಡೂ ಪ್ರಕರಣಗಳಲ್ಲಿ ಸಿಂಗ್ ಪಾತ್ರ ಸಾಬೀತಾಗಿದೆ.ಹೀಗಾಗಿ ಒಂದು ಪ್ರಕರಣಕ್ಕೆ 10 ವರ್ಷ, ಮತ್ತೊಂದು ಪ್ರಕರಣಕ್ಕೆ ಮತ್ತೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದ್ದು, ಒಟ್ಟಾರೆ 20 ವರ್ಷಗಳ ಕಾಲ ಜೈಲಿನಲ್ಲೇ ಇರಬೇಕಾಗಿದೆ. ಅಲ್ಲದೆ ಪ್ರತಿ ಕೇಸಿಗೆ 15 ಲಕ್ಷ ರೂ.ಗಳಂತೆ 30 ಲಕ್ಷ ರೂ.ದಂಡವನ್ನೂ ಪಾವತಿಸಬೇಕಾಗಿದೆ.** ಉದಯವಾಣಿ 29-8-2017

---

## ◆ಕಪ್ಪುರಂಧ್ರ ವಿಲೀನದಿಂದ ಹೊರಹೊಮ್ಮಿದ ಗುರುತ್ವ ತರಂಗ ◆180 ಕೋಟಿ ಜ್ಯೋತಿರ್ವರ್ಷ ದೂರದಿಂದ ಪತ್ತೆ
## ನಾಲ್ಕನೇ ಗುರುತ್ವ ತರಂಗ ಪತ್ತೆ ಹಚ್ಚಿದ ಲಿಗೋ ಪರೀಕ್ಷಕ

**ಗುರುತ್ವ ತರಂಗದಿಂದ ಏನಾಗುತ್ತೆ? :ಬ್ರಹ್ಮಾಂಡದಿಂದ ಬಂದ ಗುರುತ್ವ ತರಂಗ ಭೂಮಿಯನ್ನು ಹಾದು ಹೋಗುವ ವೇಳೆ ಲಿಗೋ ಸಂಶೋಧಕ ಅದನ್ನು ಕಂಡು ಹಿಡಿಯುತ್ತದೆ. ಗುರುತ್ವ ತರಂಗ ಅತಿ ಸೂಕ್ಷ್ಮವಾಗಿದ್ದು, ಅತ್ಯಾಧುನಿಕ ವೈಜ್ಞಾನಿಕ ವ್ಯವಸ್ಥೆಯಿಂದ ಇದನ್ನು ಕಂಡು ಹಿಡಿವಂತೆ ಮಾಡಲಾಗಿದೆ. ಈ ಗುರುತ್ವ ತರಂಗಗಳಲ್ಲಿ ವಿಜ್ಞಾನಿಗಳು ಧ್ವನಿ ತರಂಗಗಳಾಗಿಸಿ ಕಪ್ಪುರಂಧ್ರ ವಿಲೀನದ ಶಬ್ದವನ್ನು ಕೇಳುವಂತೆ ಮಾಡುತ್ತಾರೆ.**

ಲಂಡನ್, ಸೆ 28: ಬ್ರಹ್ಮಾಂಡ ಸೃಷ್ಟಿ ಕಪ್ಪುರಂಧ್ರಗಳ ಕುರಿತಾಗಿ ಶೋಧನೆಗೆ ಅಮೆರಿಕದಲ್ಲಿ ಸ್ಥಾಪಿತವಾಗಿರುವ ಗುರುತ್ವಾಕರ್ಷಣ ಪರಿವೀಕ್ಷಣ ವ್ಯವಸ್ಥೆ 'ಲಿಗೋ' ನಾಲ್ಕನೇ ಬಾರಿಗೆ ಗುರುತ್ವ ತರಂಗವನ್ನು ಪತ್ತೆ ಹಚ್ಚಿದೆ.

ಆ.14ರಂದು ಎರಡು ಭಾರೀ ಗಾತ್ರದ ಕಪ್ಪುರಂಧ್ರಗಳ ವಿಲೀನದ ವೇಳೆ ಉಂಟಾದ ಗುರುತ್ವ ತರಂಗವಿದು ಎಂದು ಖಗೋಳ ತಜ್ಞರು ಹೇಳಿದ್ದಾರೆ.

ಭೂಮಿಯಿಂದ 180 ಕೋಟಿ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ ಎರಡು ಕಪ್ಪುರಂಧ್ರಗಳು ವಿಲೀನವಾಗಿವೆ ಎಂದು ಹೇಳಲಾಗಿದೆ. ಗುರುತ್ವ ತರಂಗವನ್ನು ಇದೇ ಮೊದಲ ಬಾರಿಗೆ ಯುರೋಪ್‌ನಲ್ಲಿ ಸ್ಥಾಪಿಸಲಾಗಿರುವ 'ವಿಗ್ರೋ' ಸಂಶೋಧಕವೂ ದಾಖಲಿಸಿದೆ. ನಾಲ್ಕನೇ ಬಾರಿಗೆ ಗುರುತ್ವ ತರಂಗ ಪತ್ತೆಯಾದ್ದರಿಂದ ಖ್ಯಾತ ವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೈನ್ ಅವರು ಹೇಳಿರುವ ಸಾಪೇಕ್ಷ ಸಿದ್ಧಾಂತದ ಕುರಿತಾಗಿ ಮತ್ತಷ್ಟು ಸಂಶೋಧನೆಗೆ ನೆರವಾಗಲಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

**ನಾಲ್ಕುಬಾರಿ ಗುರುತ್ವ ತರಂಗ ಪತ್ತೆ:** 2015ರಲ್ಲಿ ಮೊದಲ ಬಾರಿಗೆ ಲಿಗೋ ಗುರುತ್ವ ತರಂಗವನ್ನು ಪತ್ತೆ ಹಚ್ಚಿದ್ದು, ಐನ್‌ಸ್ಟೈನ್ ಅವರು ಪ್ರತಿಪಾದಿಸಿದ್ದ ಸಾಪೇಕ್ಷ ಸಿದ್ಧಾಂತ ನಿಜ ಎಂದು ಜಗತ್ತಿಗೆ ಗೊತ್ತಾಗಿತ್ತು. ಆ ಬಳಿಕ 2015 ಸೆಪ್ಟೆಂಬರ್ ಮತ್ತು ಡಿಸೆಂಬರ್‌ನಲ್ಲಿ ಹಾಗೂ ಮೂರನೇ ಬಾರಿಗೆ ಜನವರಿ 4ರಂದು ಗುರುತ್ವ ತರಂಗದ ಅಲೆಗಳು ಬ್ರಹ್ಮಾಂಡದಿಂದ ಬರುತ್ತಿರುವುದನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದರು. ಲಿಗೋದ ಮೂರನೇ ಪತ್ತೆ ಯಂತ್ರ ಕಾರ್ಯಾರಂಭಿಸಿದಾಗ ಮೂರನೇ ಬಾರಿಗೆ ಗುರುತ್ವ ತರಂಗವನ್ನು ಪತ್ತೆ ಹಚ್ಚಲಾಗಿತ್ತು.

**ಸೂರ್ಯನ ಮೂರು ಪಟ್ಟು ಶಕ್ತಿ ಹೊರಸೂಸುವಿಕೆ:** ಲಿಗೋ ಪತ್ತೆ ಹಚ್ಚಿದ ಗುರುತ್ವ ತರಂಗದ ಪ್ರಕಾರ ವಿಜ್ಞಾನಿಗಳು ಎರಡು ಕಪ್ಪುರಂಧ್ರಗಳ ವಿಲೀನ ವೇಳೆ ಇದು ಹೊರಟಿದ್ದಿರಬಹುದು ಎಂದು ಹೇಳಿದ್ದಾರೆ. ಎರಡು ಕಪ್ಪುರಂಧ್ರಗಳು ಸೂರ್ಯನಿಗಿಂತ ಸುಮಾರು 31 ಮತ್ತು 25ರಷ್ಟು ದೊಡ್ಡದಿವೆ ಎಂದು ಅಂದಾಜಿಸಿದ್ದಾರೆ. ಅಲ್ಲದೇ ಈ ಕಪ್ಪುರಂಧ್ರಗಳ ವಿಲೀನದಿಂದಾಗಿ ಸೂರ್ಯನ ಮೂರು ಪಟ್ಟು ಶಕ್ತಿ/ವಿಕಿರಣ ಹೊರಸೂಸಿರಬಹುದು ಎಂದು ಅಂದಾಜಿಸಲಾಗಿದೆ.

**ಭಾರತೀಯ ವಿಜ್ಞಾನಿಗಳೂ ಭಾಗಿ:** ಲಿಗೋ ಸಂಶೋಧಕ ವ್ಯವಸ್ಥೆಯಲ್ಲಿ ಸುಮಾರು ಸಾವಿರದಷ್ಟು ಖಗೋಳ ವಿಜ್ಞಾನಿಗಳಿದ್ದಾರೆ. ಇದರಲ್ಲಿ ಸುಮಾರು 70 ಮಂದಿ ಭಾರತೀಯ ವಿಜ್ಞಾನಿಗಳಿದ್ದಾರೆ.

**ಉದಯವಾಣಿ 29-9-2017**

---

## ಗಂಗಾ ಸ್ನಾನಕ್ಕೆ ಸಾಧುಗಳೇ ಹಿಂದೇಟು
## ನೀರು ಮಲಿನವಾದ ಕಾರಣ ಪರಂಪರಾಗತ ನಂಬಿಕೆ ಕೈಬಿಟ್ಟ ಸಂತರು

ಮುಜಾಫರ್‌ನಗರ, ಅ.1: ಗಂಗೆಯ ಒಂದು ಹನಿ ನೀರು ತಾಕಿದರೂ ಏಳೇಳು ಜನ್ಮ ಪಾವನವಾಗುತ್ತದೆ ಎಂಬುದು ಜನರ, ದೇಶದ ಪರಂಪರಾಗತ ನಂಬಿಕೆ. ಆದರೆ ಈಗ? ಗಂಗೆಯಲ್ಲಿ ಜನರು ಇರಲಿ, ದೇಶದ ಸಾಧು- ಸಂತರೇ ಮುಳುಗೇಳಲು ಹಿಂದೇಟು ಹಾಕಿರುವ ಘಟನೆ ವರದಿಯಾಗಿದೆ.

ವಿಜಯದಶಮಿ ಅಂಗವಾಗಿ ಗಂಗೆಯಲ್ಲಿ ಪುಣ್ಯಸ್ನಾನ ಮಾಡಲು ಸಾಧು ಸಂತರೇ ನಿರಾಕರಿಸುವ ಘಟನೆ ಮುಜಾಫರ್‌ನಗರದಲ್ಲಿ ನಡೆದಿದೆ. ನೀರು ತುಂಬ ಮಲಿನವಾಗಿರುವ ಕಾರಣ ನೀರಿಗೆ ಇಳಿಯುವುದಿಲ್ಲ ಎಂದು ಸಾಧು ಸಂತರು ಜಳಕವನ್ನೇ ಕೈಬಿಟ್ಟಿದ್ದಾರೆ.

ಇಲ್ಲಿನ ಸುಕೀರ್ತಲ್ ಬಳಿಯ ಗಂಗಾನದಿಯ ನೀರು ಕಪ್ಪು ಬಣ್ಣಕ್ಕೆ ತಿರುಗಿದೆ. ಪಕ್ಕದ ಕಾರ್ಖಾನೆಗಳ ಮಲಿನ ನೀರು ನದಿಯ ನೀರನ್ನು ಸೇರಿ ಅದು ಸಂಪೂರ್ಣ ಮಲಿನವಾಗಿದೆ. ಇಂತಹ ನೀರಿನಲ್ಲಿ ಸ್ನಾನ ಮಾಡುವುದಿಲ್ಲ ಎಂದು ಸಾಧುಗಳು ಹೇಳಿದ್ದಾರೆ. ಸಾಧುಗಳ ಈ ಸಣ್ಣ ಮಟ್ಟಿನ ಪ್ರತಿಭಟನೆಯ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ನೀರಿನ ಮಾದರಿಯನ್ನು ಸಂಗ್ರಹ ಮಾಡಿ, ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಿದೆ. 'ಗಂಗೆಯ ಒಂದು ಹನಿ ನೀರೂ ಇಲ್ಲಿಯವರೆಗೆ ಶುದ್ಧೀಕರಣಗೊಂಡಿಲ್ಲ' ಎಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೇ ಇಂಥದ್ದೊಂದು ಘಟನೆ ನಡೆದಿದೆ. ನಮಾಮಿ ಗಂಗೆ ಯೋಜನೆಯಡಿ ಗಂಗಾ ನದಿಯನ್ನು ಸ್ವಚ್ಛಗೊಳಿಸಲು ಕೇಂದ್ರ ಸರಕಾರ ಮುಂದಾಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. **ಉದಯವಾಣಿ 2-10-2017**

---


**ಯುಗರಶ್ಮಿಗೆ ಚಂದಾದಾರರಾಗಿರಿ**


**ವಾರ್ಷಿಕ ಚಂದಾ: ರೂ. 60/-, ಅಂಚೆ ಮೂಲಕ : ರೂ. 70/-**


**ಸಂಪರ್ಕಿಸಿರಿ : 99 00 410 789**


**ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು**

**ಜನಾಬ್ ಎಂ.ಯು. ಶಂಸುದ್ದೀನ್ ಸಾಹಿಬ್, ಮಂಜೇಶ್ವರ : ರೂ. 1500/-**

## NEW PUBLICATIONS








Contact :

**NAZARAT NASHR-O-ISHA'AT**

**Sadr Anjuman Ahmadiyya**

**(Publication Department)**

**Ahmadiyya Muslim Jama'at,**

**QADIAN – 143516 (Punjab)**

**Phone: 01872-500970.**





## READ AHMADIYYA PERIODICALS


### THE REVIEW OF RELIGIONS

English Monthly
Annual Subscription : ₹. 500/-
Contact: The Editor
The Review of Religions
Mohalla Ahmadiyya,
QADIAN – 143516 (Punjab)
Telephone : +91 1872 500970

### BADAR – Urdu Weekly

Annual Subscription : ₹. 550/-
Contact: The Manager
The Badar Weekly
Mohalla Ahmadiyya,
QADIAN – 143516 (Punjab)
Telephone : (0091) 94170-20616







ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

**ಬೆಲೆ : ರೂ. 200/-**



# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

**ಪುಟಗಳು - 320. ಬೆಲೆ : 100/-**

## ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

National Toll Free Number : 1800 3010 2131
National Website : ahmadiyyamuslimjamaat.in
International Website : alislam.org
Email : info@ahmadiyyamuslimjamaat.in